ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತಕ್ಕೆ 451 ರನ್ ಮುನ್ನಡೆ

ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್‌ನ 2ನೇ ದಿನವಾದ ಭಾರತ ತನ್ನ 1ನೇ ಇನಿಂಗ್ಸ್ ಅನ್ನು 8 ವಿಕೆಟ್‌ಗೆ 564 ರನ್‌ಗಳಿಗೆ ಮುಗಿಸಿದೆ. ರಿಷಭ್ ಪಂತ್ 81 ರನ್ ಗಳಿಸಿದ್ದಾರೆ. ಆಫ್ಘನ್ ತನ್ನ 1ನೇ ಇನಿಂಗ್ಸ್‌ನಲ್ಲಿ ಕುಸಿತಕ್ಕೊಳಗಾಗಿ 5 ವಿಕೆಟ್‌ಗೆ 113 ರನ್ ಗಳಿಸಿದೆ. ಭಾರತ 451 ರನ್‌ಗಳ ಬೃಹತ್ ಮುನ್ನಡೆ ಪಡೆದಿದೆ.

ಸೊಂಪಾದ ಪುಟಗಳು

ಟೇಕ್ ಆಫ್ ಆಗುತ್ತಿದೆ ಡಿಕೆ ಫ್ಲೈಟ್
ಮೂರ್ತಿಪೂಜೆ
ಆರ್.ಟಿ. ವಿಠ್ಠಲಮೂರ್ತಿ 6

ಮೋರಿಯಿಂದೆದ್ದು ಗೋರಿ ಸೇರಲಿರುವ ಜೆನ್ ಜಿರಳೆ ಪಕ್ಷ
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೇನ್ 7

ದಾರಿದೀಪೋಕ್ತಿ

ಮೂರ್ಖನು ಇನ್ನೊಬ್ಬ ವ್ಯಕ್ತಿಯ ಪತನವನ್ನು ಚರ್ಚೆಯ ಮುಖ್ಯವಸ್ತುವಾಗಿ ಮಾಡುತ್ತಾನೆ. ಅದೇ ಬುದ್ಧಿವಂತ ವ್ಯಕ್ತಿಯು ಅದನ್ನು ಚರ್ಚಿಸಲು ಇಷ್ಟಪಡುವುದಿಲ್ಲ ಮತ್ತು ಅದನ್ನು ತನಗೆ ಒಂದು ಎಚ್ಚರಿಕೆಯಾಗಿ ನೋಡುತ್ತಾನೆ.

ವಕ್ರತುಂಡೋಕ್ತಿ



ಜೀವನದಲ್ಲಿ ನಗು ಅನ್ನೋದು ಫ್ರೀ ಅಂತ ಅನೇಕರು ಅಂದುಕೊಂಡಿರುತ್ತಾರೆ. ಆದರೆ ಹೆಂಡತಿ ನಗಬೇಕಾದರೆ ಕ್ರೆಡಿಟ್ ಕಾರ್ಡ್ ಸ್ವೈಪ್ ಮಾಡ್ಬೇಕು ಅನ್ನೋದು ಅವರಿಗೆ ನಂತರ ಗೊತ್ತಾಗುತ್ತದೆ.

3395 ಪೊಲೀಸ್ ಪೇದೆ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಮಿಕ್ಕುಳಿದ (ಉಳಿದ ಮೂಲ) ವೃಂದದಲ್ಲಿನ ವಿವಿಧ ಜಿಲ್ಲಾ, ನಗರ ಹಾಗೂ ಘಟಕಗಳಲ್ಲಿ ಖಾಲಿ ಇರುವ ಒಟ್ಟು 3,395 ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ನೇಮಕಾತಿಯ ಪ್ರಮುಖ ಪ್ರಕ್ರಿಯೆಯಾದ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಲಿದ್ದು, ಆಫ್‌ಲೈನ್-ಒಎಂಆರ್ ಮಾದರಿಯಲ್ಲಿ ಪರೀಕ್ಷೆಗಳು ಜರುಗಲಿವೆ. ಪುರುಷ ಅಭ್ಯರ್ಥಿಗಳಿಗೆ 2266, ಮಹಿಳಾ ಅಭ್ಯರ್ಥಿಗಳಿಗೆ 755, ಸೇವಾನಿರತ ಪುರುಷರಿಗೆ 257, ಸೇವಾನಿರತ ಮಹಿಳೆಯರಿಗೆ 82 ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳಿಗೆ 35 ಹುದ್ದೆಗಳನ್ನು ಕಾಯ್ದಿರಿಸಲಾಗಿದೆ.

ಭಾರತದಲ್ಲಿ ಜನಸಂಖ್ಯೆ ಕುಸಿತಕ್ಕೆ ಮಸ್ಕ್ ಆತಂಕ

ವಾಷಿಂಗ್ಟನ್: ಭಾರತದ ಜನನ ಪ್ರಮಾಣ ಗಣನೀಯವಾಗಿ ಕುಸಿತವಾಗುತ್ತಿದೆ. ಭಾರತದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಅಗತ್ಯವಿರುವ ಜನಸಂಖ್ಯೆಗಿಂತ ಸಂತಾನೋತ್ಪತ್ತಿಯ ದರ ಕಡಿಮೆಯಾಗಿದೆ ಎಂದು ಖ್ಯಾತ ಉದ್ಯಮಿ, ಟೆಸ್ಲಾ ಮಾಲೀಕ ಎಲಾನ್ ಮಸ್ಕ್ ಕಳವಳ ವ್ಯಕ್ತಪಡಿಸಿದ್ದಾರೆ. ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ವಿಶೇಷವಾಗಿ ಭಾರತದ ವಿದ್ಯಾವಂತ ಸಮುದಾಯಗಳಲ್ಲಿ ಈ ದರವು ಹಲವು ವರ್ಷಗಳ ಹಿಂದೆಯೇ ಕುಸಿದಿತ್ತು. 2.1 ಇರಬೇಕಾದ ಸಂತಾನೋತ್ಪತ್ತಿ ಪ್ರಮಾಣ, 1.9ಕ್ಕಿಳಿದಿದೆ ಎಂದು ಹೇಳಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಮಾಜಿ ಸಚಿವರ ಪರ ಮಾತಾಡುತ್ತಿರುವ ಸ್ವಾಮೀಜಿಗಳು.
ಸುದ್ದಿ



ಕ್ಷೇತ್ರದಲ್ಲಿ ಶಿವ ಸಂಚಾರ

ಸ್ವಕ್ಷೇತ್ರ ಕನಕಪುರಕ್ಕೆ ಸಿಎಂ ಡಿಕೆಶಿ ಭೇಟಿ | ಬೆಳಗ್ಗೆ 10ರಿಂದ ರಾತ್ರಿ 10ರವರೆಗೂ ಸತತ ಸಭೆ
ಕಾಮಗಾರಿಗಳಿಗೆ ಶಂಕುಸ್ಥಾಪನೆ, ಕ್ಷೇತ್ರ ಅಭಿವೃದ್ಧಿಗೆ ವೈದ್ಯಕೀಯ ಕಾಲೇಜು ತರುವ ಭರವಸೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈ ಕಲ್ಲನ್ನು(ಬಂಡೆ) ವಿಧಾನಸೌಧಕ್ಕೆ ಪ್ರವೇಶಿಸುವ ಮೆಟ್ಟಿಲಾಗಿ ಮಾಡಿಕೊಳ್ಳಿ ಎಂದು ಕನಕಪುರ ಕ್ಷೇತ್ರದ ಮತದಾರರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಸ್ವಕ್ಷೇತ್ರ ಕನಕಪುರದಾದ್ಯಂತ ಬೆಳಗ್ಗೆ 10ರಿಂದ ರಾತ್ರಿ 10ರವರೆ ಶಿವಕುಮಾರ್ ಸಂಚರಿಸಿದ್ದಾರೆ. ಸತತ ಸಭೆ ನಡೆಸಿ ಜನರ ಅಹವಾಲು ಕೇಳಿದ್ದಾರೆ. ಕೆಲವು ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಜನರಿಗೆ ವೈದ್ಯಕೀಯ ಕಾಲೇಜು, ಆಸ್ಪತ್ರೆ ತರುವುದಾಗಿ ಭರವಸೆ ನೀಡಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಶಿವಕುಮಾರ್ ಅವರು ಇದೇ ಮೊದಲ ಬಾರಿಗೆ ಭಾನುವಾರ ತವರು ಕ್ಷೇತ್ರ ಕನಕಪುರದ ವಿವಿಧ ಭಾಗಗಳಿಗೆ ಭೇಟಿ ನೀಡಿ ಜನರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದರು. ಇದೇ ವೇಳೆ ಜೆಡಿಎಸ್ ಕಾರ್ಯಕರ್ತರಿಗೂ ನನ್ನ ಮನೆ ಬಾಗಿಲು ತೆರೆದಿದೆ ಎಂದು ಹೇಳಿದ್ದಾರೆ. ಜನತಾದಳದ ಕಾರ್ಯಕರ್ತರಿಗೂ ಈ ಶಿವಕುಮಾರ್ ಇದ್ದಾನೆ. ನನ್ನ ಮನೆ ಬಾಗಿಲು ನಿಮಗೂ ತೆರೆದಿದೆ. ನೀವು ನನ್ನನ್ನು ಬಳಸಿಕೊಂಡು, ಸಹಾಯ ಪಡೆಯಬಹುದು ಎಂದು ಸಿಎಂ ಜೆಡಿಎಸ್ ನಾಯಕರಿಗೆ ಮುಕ್ತ ಕರೆ ನೀಡಿದರು. ನಿಮಗೆ ಒಳ್ಳೆಯದು ಮಾಡಲು ನಾನು ಸಿದ್ಧನಾಗಿದ್ದೇನೆ. ದೇವರು ವರ, ಶಾಪ ನೀಡುವುದಿಲ್ಲ. ಅವಕಾಶ ಮಾತ್ರ ನೀಡುತ್ತಾನೆ. ನೀವು ಸಿಕ್ಕಂತಹ ಅವಕಾಶ ಬಳಸಿಕೊಳ್ಳಬೇಕು. ಬಿಜೆಪಿಯನ್ನು ದೂರ ಇಡಬೇಕು ಎಂದು ಹಿಂದೆ ಅನಿತಾ ಕುಮಾರಸ್ವಾಮಿ ಹಾಗೂ ಕುಮಾರಸ್ವಾಮಿ ಅವರಿಗೆ ನಾವು ಬೆಂಬಲ ನೀಡಿದ್ದವು. ಈ ಹಿಂದೆ ಆಗಿದ್ದನ್ನು ನಾನು ಈಗ ಚರ್ಚೆ ಮಾಡುವುದಿಲ್ಲ ಎಂದರು.

ದ್ವೇಷ ಮಾಡಬೇಡಿ: ಈ ಕ್ಷೇತ್ರದಲ್ಲಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಲಾಗುವುದು. ಲೋಕಸಭೆ ಚುನಾವಣೆಯಲ್ಲಿ ನಮಗೆ ಬೆಂಬಲ ಕೊಡಲಿಲ್ಲ ಎಂದು ದೂಷಣೆ ಮಾಡುವುದಿಲ್ಲ. ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಏನೋ ಒಮ್ಮೆ ಹೆಚ್ಚು ಕಡಿಮೆ ಆಗಿ ತಪ್ಪಾಗಿದೆ. ಅದನ್ನು ಕ್ಷಮಿಸಿ, ಮುಂದೆ ನನ್ನನ್ನು ಯಾವ ರೀತಿ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲಿಸಿದ್ದೀರೋ ಅದೇ ರೀತಿ ನಮ್ಮವರನ್ನು ಮುಂದೆಯೂ ಬೆಂಬಲಿಸಿ. ನಮ್ಮ ಮುಖಂಡರು ಯಾರ ವಿರುದ್ಧವೂ ದ್ವೇಷ ಸಾಧಿಸಬಾರದು ಎಂದಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಗೆ ಆದ್ಯತೆ: ರಾಮನಗರವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ನಾಮಕರಣ ಮಾಡಿದ್ದರಿಂದ ಜಮೀನಿನ ಬೆಲೆ ಏನಾಗಿದೆ ಎಂದು ಎಲ್ಲರಿಗೂ ಅರಿವಾಗಿದೆ. → 4

ಜನರಿಗೆ ತೊಂದರೆ ಬೇಡವೆಂದು ಮೆಟ್ರೋ ಯಾನ

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ತಮ್ಮ ಸ್ವಕ್ಷೇತ್ರ ಕನಕಪುರಕ್ಕೆ ಭೇಟಿ ನೀಡಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸೌಧದ ಮೆಟ್ರೋ ನಿಲ್ದಾಣದ ಮೂಲಕ ಪ್ರಯಾಣ ಆರಂಭಿಸಿದರು. ಬೆಂಗಳೂರು ಜನರ ಸಂಚಾರಕ್ಕೆ ಯಾವುದೇ ತೊಂದರೆಯಾಗಬಾರದೆಂದು ಅವರು ಈ ನಿರ್ಧಾರ ಮಾಡಿ ಗಮನ ಸೆಳೆದರು.

> ನನ್ನನ್ನು ಜನ ಬಂಡೆ ಎಂದು ಕರೆಯುತ್ತಾರೆ. ನೀವು ನನ್ನನ್ನು ಪೂಜಿಸಬೇಡಿ. ಈ ಕಲ್ಲನ್ನು ವಿಧಾನ ಸೌಧಕ್ಕೆ ಪ್ರವೇಶಿಸುವ ಮೆಟ್ಟಿಲಾಗಿ ಮಾಡಿಕೊಳ್ಳಿ. ರಾಮನಗರ ಮತ್ತು ಹಾರೋಹಳ್ಳಿಯಲ್ಲಿ ಎಲ್ಲರಿಗೂ ನಿವೇಶನ, ವಸತಿ ಕಲ್ಪಿಸಬೇಕು. ವೈದ್ಯಕೀಯ ಕಾಲೇಜು, ಆಸ್ಪತ್ರೆಗೆ ನಾನೇ ಶಂಕುಸ್ಥಾಪನೆ ಮಾಡುತ್ತೇನೆ.
> -ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಡಿಕೆ ಹೇಳಿಕೆ ಹಿಂದೇನಿದೆ?

ಜೆಡಿಎಸ್ ಕಾರ್ಯಕರ್ತರಿಗೂ ನನ್ನ ಮನೆ ಬಾಗಿಲು ತೆರೆದಿದೆ ಎಂಬ ಶಿವಕುಮಾರ್ ಹೇಳಿಕೆ ರಾಜಕೀಯ ಲೆಕ್ಕಾಚಾರಗಳಿಗೆ ಕಾರಣವಾಗಿದೆ. ಡಿಕೆ ಹಾಗೂ ಜೆಡಿಎಸ್ ನಾಯಕ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಕುಟುಂಬದ ರಾಜಕೀಯ ವೈಷಮ್ಯ ಇಂದು ನಿನ್ನೆಯದ್ದಲ್ಲ. ಡಿ.ಕೆ. ಶಿವಕುಮಾರ್ ಮೊದಲು ಸ್ಪರ್ಧಿಸಿದ್ದೇ ಎಚ್.ಡಿ.ದೇವೇಗೌಡರ ವಿರುದ್ಧ. ಇದಾದ ನಂತರದ ಕಾಲಘಟ್ಟದಲ್ಲಿ ಜೆಡಿಎಸ್‌ಗೆ ಕಾಂಗ್ರೆಸ್ ಬೆಂಬಲ ನೀಡಿ ಸರಕಾರ ರಚಿಸಿತ್ತಾದರೂ ಈ ಮನೆತನಗಳ ರಾಜಕೀಯ ಜಿದ್ದಾಜಿದ್ದಿ ಇಂದಿಗೂ ಮುಂದುವರಿದಿದೆ. ಇದಲ್ಲದೇ ಮೈಸೂರು ಪ್ರಾಂತ್ಯದಲ್ಲಿ ಬಹುತೇಕ ಕಡೆಗಳಲ್ಲಿ ಜೆಡಿಎಸ್ ಪ್ರಾಬಲ್ಯ ಹೊಂದಿದ್ದರೂ, ಕಳೆದ ದಶಕದಲ್ಲಿ ಜೆಡಿಎಸ್ ಹಾಗೂ ದೇವೇಗೌಡ ಕುಟುಂಬದ ಪ್ರಾಬಲ್ಯ ಕಡಿಮೆಯಾಗುತ್ತ ಕಾಂಗ್ರೆಸ್ ಹಾಗೂ ಡಿಕೆ ಪ್ರಭಾವ ಹೆಚ್ಚಾಗುತ್ತಿದೆ. ಇದಕ್ಕೆ ಸರಿಯಾಗಿ ಕುಮಾರಸ್ವಾಮಿ ಕಾಲದಲ್ಲಿ ರಾಮನಗರ ಜಿಲ್ಲೆ ಮಾಡಲಾಗಿತ್ತಾದರೂ, ಕಾಂಗ್ರೆಸ್ ಕಾಲದಲ್ಲಿ ಇದನ್ನೆಲ್ಲ ಒಟ್ಟುಗೂಡಿಸಿ ಬೆಂಗಳೂರು ದಕ್ಷಿಣ ಜಿಲ್ಲೆ ಮಾಡಿರುವುದು, ಈ ಭಾಗಕ್ಕೆ ಮತ್ತೊಂದು ವಿಮಾನನಿಲ್ದಾಣ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಘೋಷಿಸುತ್ತಿರುವುದು ರಣತಂತ್ರ ಎನ್ನಲಾಗಿದೆ.

ಗೃಹಬಳಕೆ ಸಿಲಿಂಡರ್ ಬೆಲೆ 29 ರು. ಏರಿಕೆ

ಯುದ್ಧಾನಂತರ 2ನೇ ಬಾರಿ ಹೆಚ್ಚಳ, ಜನರಿಗೆ ಬರೆ
ಮಾ.7ಕ್ಕೆ 60 ರು. ಏರಿತ್ತು | ಒಟ್ಟು ಬೆಲೆ 944 ರು.
ತೈಲ ಕಂಪನಿಗೆ ಪ್ರತಿ ಸಿಲಿಂಡರ್ ಮೇಲೆ 700 ರು. ನಷ್ಟ

ಯಾಕೆ ಮತ್ತೆ ಮತ್ತೆ ಬೆಲೆಯೇರಿಕೆ?

ಮಧ್ಯಪ್ರಾಚ್ಯದಲ್ಲಿ ಯುದ್ಧ ಶುರುವಾಗಿದ್ದರಿಂದ ಅನಿಲ ಪೂರೈಕೆ ಕಡಿಮೆಯಾಗಿದೆ. ಸಾಗಣೆ ವೆಚ್ಚ ಹೆಚ್ಚಾಗಿದೆ. ನಷ್ಟಭರ್ತಿಗಾಗಿ ಬೆಲೆಯೇರಿಕೆ ಅನಿವಾರ್ಯವಾಗಿದೆ ಎಂದು ತೈಲಕಂಪನಿಗಳು ಹೇಳಿವೆ.

8 ರು. ಏರಿದೆ ಪೆಟ್ರೋಲ್, ಡೀಸೆಲ್ ಬೆಲೆ

ಕಳೆದ ಮೇ 25ಕ್ಕೆ 4ನೇ ಬಾರಿಗೆ ಪೆಟ್ರೋಲ್, ಡೀಸೆಲ್‌ಗಳ ಬೆಲೆಯೇರಿಕೆಯಾಗಿತ್ತು. ಮೇ 15ಕ್ಕೆ ತಲಾ 3 ರು., ಮೇ 19ಕ್ಕೆ ತಲಾ 90 ಪೈಸೆ, ಮೇ 23ಕ್ಕೆ ತಲಾ 90 ಪೈಸೆ, ಮೇ 25ಕ್ಕೆ ಪೆಟ್ರೋಲ್ 2.61 ರು., ಡೀಸೆಲ್ ಬೆಲೆ 2.71 ರು. ಹೆಚ್ಚಳವಾಗಿದೆ. ಒಟ್ಟಾರೆ ಪೆಟ್ರೋಲ್ ಬೆಲೆ 7.97 ರು., ಡೀಸೆಲ್ ಬೆಲೆ 7.81 ರು. ಹೆಚ್ಚಳವಾಗಿದೆ.

ದೆಹಲಿ: ಪೆಟ್ರೋಲ್, ಡೀಸೆಲ್, ಸಿಎನ್‌ಜಿ ಬೆಲೆಗಳನ್ನು ಕೇಂದ್ರ ತೈಲ ಕಂಪನಿಗಳು ಏರಿಸಿ ಜನರಿಗೆ ಆಘಾತ ನೀಡಿದ್ದವು. ಇದೀಗ 2ನೇ ಬಾರಿಗೆ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಏರಿಸಲಾಗಿದೆ. ದೇಶದ ಎಲ್ಲ ಕಡೆಯೂ 14.2 ಕೆಜಿ ತೂಕದ ಸಿಲಿಂಡರ್ ಬೆಲೆ 29 ರು. ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಸಿಲಿಂಡರ್ 915.50 ರು.ಗಳಿಂದ 944.50 ರು.ಗೇರಿದೆ. ಭಾನುವಾರದಿಂದಲೇ ಈ ಬೆಲೆಯೇರಿಕೆ ಜಾರಿಗೆ ಬಂದಿದೆ.

ಕಳೆದ ಮೂರು ತಿಂಗಳಲ್ಲಿ ಅಡುಗೆ ಅನಿಲ ದರ ಹೆಚ್ಚಳವಾಗಿರುವುದು ಇದು ಎರಡನೇ ಬಾರಿಯಾಗಿದೆ. ಇದಕ್ಕೂ ಮುನ್ನ ಮಾರ್ಚ್ 7ರಂದು ಸಿಲಿಂಡರ್ ಬೆಲೆಯಲ್ಲಿ 60 ರು. ಏರಿಕೆ ಮಾಡಲಾಗಿತ್ತು. ಇದರೊಂದಿಗೆ ದೆಹಲಿಯಲ್ಲಿ ಇದುವರೆಗೆ 913 ಇದ್ದ ಸಿಲಿಂಡರ್ ಬೆಲೆ ಈಗ 942 ರು.ಗೆ ತಲುಪಿದೆ. ಜೂ.1ರಂದೇ 19 ಕೆಜಿಯ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 42 ರು.ನಷ್ಟು ಹೆಚ್ಚಿಸಲಾಗಿತ್ತು.

ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ತೈಲ ಮತ್ತು ಅನಿಲ ಪೂರೈಕೆಯಲ್ಲಿ ಭಾರೀ ವ್ಯತ್ಯಯ ಉಂಟಾಗಿದೆ. ಪೂರೈಕೆಯಲ್ಲೇ ಕೊರತೆಯಾಗಿರುವುದರಿಂದ, ಅಮೆರಿಕ- ಇರಾನ್ ನಡುವೆ ಸಂಘರ್ಷ ಮುಂದುವರಿದಿರುವುದರಿಂದ ತೈಲಸಂಸ್ಥೆಗಳು ನಷ್ಟದಲ್ಲಿವೆ. ಅದನ್ನು ಭರ್ತಿ ಮಾಡಿಕೊಳ್ಳಲು ಮತ್ತೆಮತ್ತೆ ಬೆಲೆಯೇರಿಕೆ ಮೊರೆಹೋಗಿವೆ. ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಪ್ರಕಾರ, ಸದ್ಯಕ್ಕೆ ದೇಶೀಯ ಅಡುಗೆ ಅನಿಲದ ಮೇಲೆ ಸರಕಾರ/ಕಂಪನಿಗಳು ಭರಿಸುತ್ತಿರುವ ನಷ್ಟದ ಪ್ರಮಾಣ ಇನ್ನೂ ಪ್ರತಿ ಸಿಲಿಂಡರ್‌ಗೆ ಸುಮಾರು 700 ರು. ಆಸುಪಾಸಿನಲ್ಲಿದೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾತೈಲದ ಬೆಲೆ ಏರಿದ್ದರೂ, ದೇಶೀಯ ಮಾರುಕಟ್ಟೆಯಲ್ಲಿ ತೈಲ ಕಂಪನಿಗಳು (ಇಂಡೇನ್, ಎಚ್‌ಪಿ, ಭಾರತ್ ಪೆಟ್ರೋಲಿಯಂ) ಸಬ್ಸಿಡಿ ದರದ ಸಿಲಿಂಡರ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದವು. ಇದರಿಂದ ಉಂಟಾಗುತ್ತಿದ್ದ ನಷ್ಟವನ್ನು ಭಾಗಶಃ ಸರಿದೂಗಿಸಲು ಈ ಬೆಲೆ ಏರಿಕೆ ಮಾಡಲಾಗಿದೆ.

ಈಗಾಗಲೇ ವಾಣಿಜ್ಯ ಸಿಲಿಂಡರ್‌ಗಳ ಬೆಲೆಯೇರಿಕೆಯಿಂದ ಪರೋಕ್ಷವಾಗಿ ಜನರ ಮೇಲೆಯೇ ಹೊರೆಬಿದ್ದಿದೆ. ಹಾಗೆಯೇ ಹೋಟೆಲ್‌ಗಳ ಮೇಲೂ ಒತ್ತಡಬಿದ್ದಿದೆ.

ಪರಪ್ಪನ ಕಾರಾಗೃಹದಲ್ಲಿ ಮತೀಯ ಘೋಷ, ಉಗ್ರ ಕೈದಿಗಳ ಪುಂಡಾಟ

ಸಿಬ್ಬಂದಿ ವಿರುದ್ಧ 50ಕ್ಕೂ ಅಧಿಕ ಕೈದಿಗಳಿಂದ ಹಲ್ಲೆಗೆ ಯತ್ನ
ಜೈಲು ಇತಿಹಾಸದಲ್ಲಿ ಮೊದಲ ಬಾರಿ ಈ ಮಟ್ಟದ ಘಟನೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಭದ್ರತಾ ಲೋಪ ಹಾಗೂ ಕೈದಿಗಳ ಪುಂಡಾಟಿಕೆಯ ಮತ್ತೊಂದು ಆಘಾತಕಾರಿ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಜೈಲಿನ ನಿಯಮಗಳನ್ನು ಗಾಳಿಗೆ ತೂರಿ ಆಸ್ಪತ್ರೆಗೆ ದಾಖಲಾಗಲು ಬಾಂಬ್ ಸ್ಫೋಟ ಪ್ರಕರಣದ ಕೈದಿಗಳು ಯತ್ನಿಸಿದರು. ಇದನ್ನು ಪ್ರಶ್ನಿಸಿದ ಜೈಲು ಸಿಬ್ಬಂದಿ ಜೊತೆ ಕೈದಿಗಳು ತೀವ್ರ ವಾಗ್ವಾದ ನಡೆಸಿ, ಜೈಲಿನ ಆವರಣದಲ್ಲೇ ಮತೀಯ ಘೋಷಣೆ ಕೂಗಿ ಅಟ್ಟಹಾಸ ಮೆರೆದಿದ್ದಾರೆ. ಜೈಲಿನ ಇತಿಹಾಸದಲ್ಲೇ ಮೊದಲ ಬಾರಿ ಇಷ್ಟು ದೊಡ್ಡ ಮಟ್ಟದಲ್ಲಿ ಉಗ್ರ ಕೈದಿಗಳು ಒಟ್ಟಾಗಿ ಮತದ ಹೆಸರಿನಲ್ಲಿ ಘೋಷಣೆ ಕೂಗಿ ಹಲ್ಲೆಗೆ ಯತ್ನಿಸಿದ್ದಾರೆ. ಈ ಘಟನೆ ಆತಂಕಕ್ಕೆ ಕಾರಣವಾಗಿದೆ.

ಘಟನೆಗೆ ಅಸಲಿ ಕಾರಣವೇನು?: ಜೈಲಿನ ಮೂಲಗಳ ಪ್ರಕಾರ, ಪರಪ್ಪನ ಅಗ್ರಹಾರ ಜೈಲಿನಲ್ಲಿ ಕಠಿಣ ಶಿಕ್ಷೆ ಅನುಭವಿಸುತ್ತಿರುವ ಬಾಂಬ್ ಸ್ಫೋಟ ಪ್ರಕರಣದ ಇಬ್ಬರು ಕೈದಿಗಳು, ಅನಾರೋಗ್ಯದ ನೆಪ ಒಡ್ಡಿ ಜೈಲು ಆವರಣದಲ್ಲಿರುವ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಆದರೆ, ಜೈಲಿನ ನಿಯಮಾವಳಿಗಳನ್ನು ಮರೆಮಾಚಲು ಯತ್ನಿಸಿದ

ಈ ಇಬ್ಬರು, ತಮ್ಮ ಅಸಲಿ ಗುರುತನ್ನು ಮರೆಮಾಚಿ ಬೇರೊಬ್ಬ ಕೈದಿಯ ಹೆಸರಿನಲ್ಲಿ ಆಸ್ಪತ್ರೆಗೆ ದಾಖಲಾಗಲು ಸಂಚು ರೂಪಿಸಿದ್ದರು. ಆಸ್ಪತ್ರೆಯ ದಾಖಲಾತಿ ವಿಭಾಗದಲ್ಲಿದ್ದ ಜೈಲು ವಾರ್ಡರ್ ಕೈದಿಗಳ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಇಬ್ಬರ ನಕಲಿ ಆಟ ಬಯಲಾಗಿದೆ. ಇದನ್ನು ವಾರ್ಡರ್ ಕಟ್ಟುನಿಟ್ಟಾಗಿ ಪ್ರಶ್ನಿಸಿದ್ದಾರೆ. ಕೆರಳಿದ ಉಗ್ರರು ಚಕಮಕಿ ಆರಂಭಿಸಿದ್ದಾರೆ.

ಜೈಲಧಿಕಾರಿಗಳ ವಿರುದ್ಧವೇ ಕೆಂಡ: ವಾರ್ಡರ್ ಮತ್ತು ಇಬ್ಬರು ಕೈದಿಗಳ ನಡುವೆ ಮಾತಿನ ಚಕಮಕಿ ಜೋರಾಗುತ್ತಿದ್ದಂತೆ, ಜೈಲಿನ ವಿವಿಧ ಬ್ಯಾರಕ್‌ಗಳಲ್ಲಿದ್ದ ಬಾಂಬ್ ಸ್ಫೋಟ ಪ್ರಕರಣದ 50ಕ್ಕೂ ಹೆಚ್ಚು ಉಗ್ರ ಕೈದಿಗಳು ಕ್ಷಣಾರ್ಧದಲ್ಲಿ ಆಸ್ಪತ್ರೆಯ ಆವರಣದಲ್ಲಿ ಜಮಾಯಿಸಿದ್ದಾರೆ. → 4

ಬಿಕ್ಕಟ್ಟು ನಡುವೆ ಇಂದು ಇಂಡಿ ಒಕ್ಕೂಟದ ಸಭೆ

ದೆಹಲಿ: ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಸೋಮವಾರ ನಡೆಯಲಿರುವ



ಇಂಡಿ ಒಕ್ಕೂಟದ ಸಭೆಯಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸೇರಿದಂತೆ 23 ರಾಜಕೀಯ ಪಕ್ಷಗಳು ಪಾಲ್ಗೊಳ್ಳಲಿವೆ. ಜೂನ್ 8ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ಆರಂಭವಾಗಲಿರುವ ಸಭೆಗೆ, ಪ್ರಮುಖ ಮಿತ್ರಪಕ್ಷ ಡಿಎಂಕೆ ಬಹಿಷ್ಕಾರ ಹಾಕಿದೆ. ಕೇರಳ ಕಮ್ಯೂನಿಸ್ಟರೂ (ಸಿಪಿಐ) ಕಾಂಗ್ರೆಸ್ ವಿರುದ್ಧ ಸಿಟ್ಟಾಗಿದ್ದಾರೆ. ಇನ್ನು ಟಿಎಂಸಿ ಭಾಗವಹಿಸಲಿದ್ದರೂ, 59 ಭಿನ್ನ ಶಾಸಕರು, 23 ಸಂಸದರು ಭಾಗವಹಿಸುವುದು ಅನುಮಾನವಿದೆ. ಭಾರತದಂತೆಯೇ, ಭಾರತೀಯ ಜನಬಂಧನ್ ತನ್ನ ವೈವಿಧ್ಯತೆಯ ಮೂಲಕ ಒಗ್ಗಟ್ಟಿನಿಂದ ನಿಂತಿದೆ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ತಿಳಿಸಿದ್ದಾರೆ. ಅಖಿಲ ಭಾರತ ತೃಣಮೂಲ ಕಾಂಗ್ರೆಸ್ ಕೂಡ ಸಭೆಗೆ ಬೆಂಬಲವನ್ನು ಸೂಚಿಸಿದ್ದು, ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಭಾನುವಾರ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದ್ದಾರೆ.

ಮುಂಕಾರು: ರೆಡ್ ಅಲರ್ಟ್

ಚಿಂಚೋಳಿ: ಸೇತುವೆ ಕುಸಿತ, ಬಳ್ಳಾರಿ: ಆಸ್ಪತ್ರೆಯ ವಾರ್ಡ್‌ಗೆ ನೀರು
ಅಂದ್ರಾಳ್ ಹಳ್ಳದಲ್ಲಿ ಮಹಿಳೆ ಶವ ಪತ್ತೆ, ಹುಬ್ಬಳ್ಳಿಯಲ್ಲಿ ರಸ್ತೆ ಜಲಾವೃತ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆ ಮತ್ತಷ್ಟು ಚುರುಕುಗೊಂಡಿದ್ದು, ಮುಂದಿನ ಕೆಲವು ದಿನಗಳ ಕಾಲ ವಿವಿಧ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ವಿಶೇಷವಾಗಿ ಕರಾವಳಿ ಕರ್ನಾಟಕ ಮತ್ತು ಉತ್ತರ ಒಳನಾಡಿನ ಹಲವು ಭಾಗಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇದೆ. ಜೂ.7 ರಿಂದ 10ರವರೆಗೆ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಬೆಳಗಾವಿ ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಲಾಗಿದೆ. ರಾಜ್ಯದ ಹಲವು ಭಾಗಗಳಲ್ಲಿ ಭಾರೀ ಮಳೆ ಸುರಿದ ಪರಿಣಾಮ ಕೆಲವೆಡೆ ಸಂಕಷ್ಟದ ಸ್ಥಿತಿ ನಿರ್ಮಾಣವಾಗಿದೆ.

ಶನಿವಾರ ಹಾಗೂ ಭಾನುವಾರ ರಾತ್ರಿ ಉತ್ತರ ಕರ್ನಾಟಕದ ಕಲಬುರಗಿ, ಬಾಗಲಕೋಟೆ, ಯಾದಗಿರಿ, ಬೆಳಗಾವಿ, ರಾಯಚೂರು, ಹಾವೇರಿ, ಬಳ್ಳಾರಿ ಜಿಲ್ಲೆಗಳಲ್ಲಿ ಸುರಿದ ಮಳೆಯಿಂದ ಹಲವಾರು ಅವಾಂತರಗಳು ಸೃಷ್ಟಿಯಾಗಿವೆ. ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿ ಸುರಿದ ಭಾರಿ ಮಳೆಯ ಆರ್ಭಟಕ್ಕೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ತಾಲೂಕಿನ ಚಿಮ್ಮನಚೋಡ ಗ್ರಾಮದ ಸಮೀಪವಿರುವ ಚಿಮ್ಮನಚೋಡ ನರನಾಳ ಸಂಪರ್ಕ ಸೇತುವೆಯು ಹಳ್ಳದ ನೀರಿನ ರಭಸಕ್ಕೆ ದಿಢೀರ್ ಕುಸಿದು ಬಿದ್ದಿದೆ. ಬಳ್ಳಾರಿ ನಗರದಲ್ಲಿ ಶನಿವಾರ ರಾತ್ರಿ ಸುರಿದ ಭಾರಿ ಮಳೆಯ ಪರಿಣಾಮ, ನಗರದ ವಿಮ್ಸ್ ಆಸ್ಪತ್ರೆಯ ಕೆಲವು ವಾರ್ಡ್‌ಗಳ ಒಳಭಾಗಕ್ಕೆ ಮಳೆ ನೀರು ನುಗ್ಗಿ, ರೋಗಿಗಳು ಪರದಾಡಿದ್ದಾರೆ. → 4

ರಾಜ್ಯದ 10 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಜಾರಿ

ರಾಜ್ಯದ ಒಟ್ಟು 10 ಜಿಲ್ಲೆಗಳಲ್ಲಿ ಹವಾಮಾನ ಇಲಾಖೆಯು ಯೆಲ್ಲೋ ಅಲರ್ಟ್ ಜಾರಿಗೊಳಿಸಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಕೊಪ್ಪಳ, ರಾಯಚೂರು ಸೇರಿ 10 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಸಾರ್ವಜನಿಕರು ಹಾಗೂ ರೈತರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

ಯಾರಿಗೂ ಬೇಡವಾದ ಬೆಂಗಳೂರು ನಗರಾಭಿವೃದ್ಧಿ ಖಾತೆ?

ಮೊದಲು ಈ ಖಾತೆಗೆ ರಾಮಲಿಂಗಾರೆಡ್ಡಿ ಪಟ್ಟು, ರಾಜೀನಾಮೆ, ಬಳಿಕ ಜಲಸಂಪನ್ಮೂಲಕ್ಕೇ ತೃಪ್ತಿ
ಖಾತೆ ಹೊಂದಿರುವ ಕೃಷ್ಣ ಬೈರೇಗೌಡರಿಗೂ ಇದು ಬೇಡ | ಬೇರೆ ನೀಡಿ ಎಂದು ವರಿಷ್ಠರಿಗೆ ಮನವಿ

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ಡಿ.ಕೆ.ಶಿವಕುಮಾರ್ ನೇತೃತ್ವದ ನೂತನ ಸರಕಾರ ಅಧಿಕಾರಕ್ಕೆ ಬಂದ ಕೆಲವೇ ದಿನದಲ್ಲಿ ಭುಗಿಲೆದ್ದಿದ್ದ ಸಚಿವ ರಾಮಲಿಂಗಾರೆಡ್ಡಿ ಅವರ ರಾಜೀನಾಮೆಯ ವಿವಾದ ಸುಖಾಂತ್ಯವಾಗಿದೆ. ಈ ಗೊಂದಲ ಬಗೆಹರಿಯಿತು ಎಂದು ಸಮಾಧಾನವಾಗುವ ಮೊದಲೇ, ಬೆಂಗಳೂರು ನಗರಾಭಿವೃದ್ಧಿ ಇಲಾಖೆಗೆ ಸಚಿವರು ಯಾರು ಎನ್ನುವ ಗೊಂದಲ ಪಕ್ಷದಲ್ಲಿ ಶುರುವಾಗಿದೆ.

ಖಾತೆ ಹಂಚಿಕೆಯ ಕ್ಷಣದಿಂದಲೂ ಕಂದಾಯ ಇಲಾಖೆಯ ಮೇಲೆ ಕಣ್ಣಿಟ್ಟಿದ್ದ ಕೃಷ್ಣ ಬೈರೇಗೌಡ ಅವರಿಗೆ ಬೆಂಗಳೂರು ನಗರಾಭಿವೃದ್ಧಿ ಖಾತೆ ಕೊಟ್ಟಿದ್ದು ಪೂರ್ಣ ಒಪ್ಪಿಗೆ ಇರಲಿಲ್ಲ. ಇದರೊಂದಿಗೆ ರಾಮಲಿಂಗಾರೆಡ್ಡಿ ಅವರ ರಾಜೀನಾಮೆ ಪ್ರಹಸನ, ಜಿಬಿಎ ಚುನಾವಣೆಯಿಂದ ಅಂತರ ಕಾಯ್ದುಕೊಳ್ಳುವುದಾಗಿ ರೆಡ್ಡಿ ಎಚ್ಚರಿಕೆ ನೀಡಿದ ಬೆನ್ನಲ್ಲೇ, ಈ ಖಾತೆ ನನಗೆ ಬೇಡ ಎನ್ನುವ ಕ್ಯಾತೆಯನ್ನು ಕೃಷ್ಣ ಬೈರೇಗೌಡ ಎತ್ತಿದ್ದಾರೆ. ಈ ಖಾತೆಯ ಬದಲು ಬೇರೆ ಖಾತೆಯ ಬೇಡಿಕೆಯನ್ನು ಡಿ.ಕೆ.ಶಿವಕುಮಾರ್ ಹಾಗೂ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮುಂದಿಟ್ಟಿದ್ದಾರೆ ಎಂದು ತಿಳಿದುಬಂದಿದೆ.



ಈ ನಡುವೆ ಬೆಂಗಳೂರು ನಗರಾಭಿವೃದ್ಧಿ ಖಾತೆಗೆ ಬಿಗಿಪಟ್ಟು ಹಿಡಿದು ರಾಜೀನಾಮೆಯ ಸವಾಲು ತೆಗೆದುಕೊಂಡಿದ್ದ ರಾಮಲಿಂಗಾರೆಡ್ಡಿ ಅವರು, ಕೃಷ್ಣಬೈರೇಗೌಡ ಅವರು ಖಾತೆ ಬಿಟ್ಟುಕೊಡಲು ಸಿದ್ಧರಿದ್ದರೂ, ಅವರು ಬಿಟ್ಟುಕೊಡುವ ಖಾತೆ ನಾನು ತೆಗೆದುಕೊಳ್ಳಲ್ಲ. ಈಗ ನೀಡಿರುವ ಜಲಸಂಪನ್ಮೂಲದಲ್ಲಿಯೇ ಮುಂದುವರಿಯುವೆ ಅಥವಾ ಬೇರೆ ಖಾತೆ ನೀಡಿ. ಆದರೆ ಬೆಂಗಳೂರು ನಗರಾಭಿವೃದ್ಧಿ ಮಾತ್ರ ಬೇಡ ಎಂದಿದ್ದಾರೆ. ಇದೀಗ ಅತ್ತ ಕೃಷ್ಣಬೈರೇಗೌಡ ಅವರಿಗೂ ಬೇಡವಾದ, ಇತ್ತ ರಾಮಲಿಂಗಾರೆಡ್ಡಿ ಅವರಿಗೂ ಬೇಡವಾದ ಸಂಪುಟದ ಪ್ರಮುಖ ಖಾತೆಯಾಗಿರುವ ಬೆಂಗಳೂರು ನಗರಾಭಿವೃದ್ಧಿ ಇಲಾಖೆ ಅನಾಥವಾಗಿ ಉಳಿಯುವ ಸಾಧ್ಯತೆಯಿದೆ. ಈ ಇಬ್ಬರಲ್ಲಿ ಒಬ್ಬರಿಗೆ ಹಂಚುವರೋ ಅಥವಾ ಮುಖ್ಯಮಂತ್ರಿಗಳೇ ನಿರ್ವಹಣೆ ಮಾಡುವರೇ ಎನ್ನುವ ಗೊಂದಲ ಪಕ್ಷದಲ್ಲಿ ಶುರುವಾಗಿದೆ ಎಂದು ಮೂಲಗಳು ತಿಳಿಸಿವೆ.

ನೀರಾವರಿಯಲ್ಲಿಯೇ ಮುಂದುವರಿಕೆ: ಡಿ.ಕೆ. ಶಿವಕುಮಾರ್, ಬಿ.ಕೆ.ಹರಿಪ್ರಸಾದ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ನಡೆದ ಸರಣಿ ಸಂಧಾನಸಭೆಯ ವೇಳೆ ಜಲಸಂಪನ್ಮೂಲದ ಬದಲಿಗೆ ವಸತಿ, ಸಹಕಾರ ಸೇರಿದಂತೆ ಹಲವು ಇಲಾಖೆಗಳನ್ನು ನೀಡುವ ಮಾತುಗಳನ್ನು ಆಡಿದ್ದಾರೆ. ಆದರೆ ಬೆಂಗಳೂರು ನಗರಾಭಿವೃದ್ಧಿ ಖಾತೆಯ ಪಟ್ಟು ಹಿಡಿದಿದ್ದ ರಾಮಲಿಂಗಾರೆಡ್ಡಿ ಅವರು, ಸಂಧಾನ ಮುಗಿಯುವ ಹೊತ್ತಿಗೆ ಜಲಸಂಪನ್ಮೂಲ ಖಾತೆಯಲ್ಲಿಯೇ ಮುಂದುವರಿಯುವೆ. ಇದರೊಂದಿಗೆ ಹೆಚ್ಚುವರಿ ಖಾತೆ ನೀಡಿದರೆ ನಿಭಾಯಿಸುವೆ ಅಥವಾ ನೀರಾವರಿ ಬದಲಿಗೆ ಬೇರೆ ಇಲಾಖೆ ಕೊಟ್ಟರೂ ನಿಭಾಯಿಸುವೆ. ಆದರೆ ಕೃಷ್ಣ ಬೈರೇಗೌಡ ಬಿಟ್ಟುಕೊಡುವ ಬೆಂಗಳೂರು ನಗರಾಭಿವೃದ್ಧಿ ಖಾತೆ ಮಾತ್ರ ವಹಿಸಿಕೊಳ್ಳುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ತಿಳಿದುಬಂದಿದೆ.

ರಾಜೀನಾಮೆ ನೀಡಿದ ಬಳಿಕ ರಾಮಲಿಂಗಾರೆಡ್ಡಿ ಅವರ ಮನವೊಲಿಸಲು ರಾಜ್ಯ ಕಾಂಗ್ರೆಸ್‌ನ ಪ್ರಮುಖ ನಾಯಕರು, ಹಲವು ಸಚಿವರು, ಬೆಂಗಳೂರಿನ ಕೆಲ ಆಪ್ತ ಶಾಸಕರು ಪ್ರಯತ್ನಿಸಿದರು. ಯಶಸ್ವಿಯಾಗದ ಬಳಿಕ ಸ್ವತಃ ಸಿಎಂ ಡಿ.ಕೆ. ಶಿವಕುಮಾರ್ ಜಯನಗರ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಸಿದರು. → 4

ಇದೇನು ಬೇಡಾಟ?

- ಕೃಷ್ಣ ಬೈರೇಗೌಡ ಬಿಟ್ಟುಕೊಡುವ ಬೆಂಗಳೂರು ನಗರಾಭಿವೃದ್ಧಿ ತನಗೆ ಬೇಡ ಎಂದಿದ್ದಾರೆ ರಾಮಲಿಂಗಾರೆಡ್ಡಿ
- ಕೃಷ್ಣ ಬೈರೇಗೌಡರಿಗೆ ಬೆಂಗಳೂರು ನಗರಾಭಿವೃದ್ಧಿ ನೀಡಿದ್ದರೂ, ಬಿಡಿಎ, ಜಲಮಂಡಳಿ ಡಿಕೆ ಬಳಿಯೇ ಇದೆ
- ಖೋತಾ ಆಗಿರುವ ನಗರಾಭಿವೃದ್ಧಿ ತನಗೆ ಬೇಡ ಎನ್ನುತ್ತಿದ್ದಾರೆ ಬೈರೇಗೌಡ? ಇತರೆ ಖಾತೆಯತ್ತ ಕೃಷ್ಣ ಚಿತ್ತ
- ಬೆಂಗಳೂರು ಹೊರಗಿನ ಶಾಸಕರಿಗೆ ನಗರಾಭಿವೃದ್ಧಿ ಸಿಕ್ಕಿರುವುದಕ್ಕೆ ಬೆಂಗಳೂರು ಶಾಸಕರಿಗೆ ಈ ಪರಿ ಬೇಸರ?
- ಅಂತಿಮವಾಗಿ ಬೆಂಗಳೂರು ನಗರಾಭಿವೃದ್ಧಿ ಖಾತೆ ಸಿಎಂ ಶಿವಕುಮಾರ್ ಬಳಿಯೇ ಉಳಿಯುತ್ತಾ?

ಜಿಬಿಎಯಿಂದ ರೆಡ್ಡಿ ಅಂತರ?

ಈ ನಡುವೆ ರಾಮಲಿಂಗಾರೆಡ್ಡಿ ಅವರು ಬೆಂಗಳೂರು ನಗರಾಭಿವೃದ್ಧಿ ಖಾತೆಯ ಪಟ್ಟು ಕೈಬಿಟ್ಟು, ಪಕ್ಷದ ನಾಯಕರು ನೀಡುವ ಖಾತೆಗಳನ್ನೇ ಒಪ್ಪಿಕೊಳ್ಳುವುದಾಗಿ ಹೇಳಿರುವುದು ಹೈಕಮಾಂಡ್‌ಗೆ ನಿರಾಳ ತಂದಿದ್ದರೂ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಚುನಾವಣೆ ವಿಷಯದಲ್ಲಿ ನಾನು ತಲೆಕೆಡಿಸಿಕೊಳ್ಳುವುದಿಲ್ಲ ಎನ್ನುವ ಮಾತನ್ನು ಹೇಳಿರುವುದು ಹೊಸ ತಲೆಬಿಸಿಯಾಗಿದೆ. ಕೆಲವೇ ತಿಂಗಳಲ್ಲಿ ಎದುರಾಗಲಿರುವ ಜಿಬಿಎ ಚುನಾವಣೆ ವೇಳೆ ಬಿಟಿಎಂ ಕ್ಷೇತ್ರ ಬಿಟ್ಟು ಹೊರ ಹೋಗದಿರಲು ಆಪ್ತರೊಂದಿಗೆ ನಡೆದ ಸಭೆಯಲ್ಲಿ ರಾಮಲಿಂಗಾರೆಡ್ಡಿ ಅವರು ತೀರ್ಮಾನಿಸಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಖಾತೆ ಇರುವವರೇ ಚುನಾವಣೆಯನ್ನು ನಡೆಸಬೇಕು ಎನ್ನುವ ರೆಡ್ಡಿ ಹಾಗೂ ಆಪ್ತವಾದವೂ ಕೃಷ್ಣಬೈರೇಗೌಡ ಅವರು ಖಾತೆಯ ಜವಾಬ್ದಾರಿ ವಹಿಸಿಕೊಳ್ಳದೇ ಇರಲು ಮತ್ತೊಂದು ಕಾರಣ ಎನ್ನಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಶಿವಪ್ಪಗೆ ಪಿಎಚ್.ಡಿ ಪದವಿ ಪ್ರದಾನ

ಕೋಲಾರ: ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಪುತ್ತೇರಿ ಗ್ರಾಮದ ವೈಲಮ್ಮ ಮತ್ತು ನಾಗರಾಜಪ್ಪ ದಂಪತಿಯ ಹಿರಿಯ ಪುತ್ರ ಬೆಂಗಳೂರು

ವಿಶ್ವವಿದ್ಯಾಲಯದ ಸಮಾಜ ಶಾಸ್ತ್ರ ವಿಭಾಗದ ಸಂಶೋಧ ನಾರ್ಥಿ ಶಿವಪ್ಪ ಎನ್ ಅವರಿಗೆ ಪಿಎಚ್.ಡಿ ಪದವಿ ಲಭಿಸಿದೆ. ಸಮಾಜಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ವೆಂಕಟರಮಣಪ್ಪ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಎ ಸೋಶಿಯಲಾಜಿಕಲ್ ಸ್ಟಡಿ ಆಫ್ ಕೆ.ಸಿ. (ಕೋರಮಂಗಲ ಚಲ್ಲಘಟ್ಟ) ವ್ಯಾಲಿ ವಾಟರ್‌ಪ್ರಾಜೆಕ್ಟ್ ಇನ್ ಕೋಲಾರ ಡಿಸ್ಟ್ರಿಕ್ಟ್' ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಕೆ-ಕಿಸಾನ್ ತಂತ್ರಾಂಶದ ಅಡಿ ರಸಗೊಬ್ಬರ ವಿತರಣೆ

ತುಮಕೂರು: ಮಧ್ಯ ಪ್ರಾಚ್ಯ ಯುದ್ಧದಿಂದ ರಸಗೊಬ್ಬರಗಳ ಕೊರತೆಯಾಗಿರುವುದರಿಂದ ಕೆಲವು ಮಾನದಂಡಗಳನ್ನು ಅನುಸರಿಸುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿದ್ದು, ಪ್ರತಿ ಮಾರಾಟಗಾರರು ರಾಜ್ಯ ಸರ್ಕಾರದ ಸುತ್ತೋಲೆಯಂತೆ ಕಡ್ಡಾಯವಾಗಿ ಯೂರಿಯಾ ರಸಗೊಬ್ಬರವನ್ನು ಮಾತ್ರ ಒಂದು ಚೀಲ ಒಬ್ಬ ರೈತನಿಗೆ ಒಂದು ಎಕರೆ ಪ್ರದೇಶಕ್ಕೆ ಸೀಮಿತಗೊಳಿಸಿ ಕೆ-ಕಿಸಾನ್ ತಂತ್ರಾಂಶದ ಮೂಲಕ ವಿತರಣೆ ಮಾಡಲು ತುಮಕೂರು ತಹಶೀಲ್ದಾರ್ ರಾಜೇಶ್ವರಿ ಸೂಚಿಸಿದ್ದಾರೆ. ಇತ್ತೀಚೆಗೆ ತಮ್ಮ ಕಚೇರಿಯಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲಾಧಿಕಾರಿಗಳು ಕಡ್ಡಾಯವಾಗಿ ಎಲ್ಲಾ ತಹಶೀಲ್ದಾರರು ರಸಗೊಬ್ಬರ ಮಾರಾಟ ಮಳಿಗೆಗಳಿಗೆ ಕಡ್ಡಾಯವಾಗಿ ಅನಿರೀಕ್ಷಿತ ಭೇಟಿ ನೀಡಿ ಎಫ್.ಸಿ.ಓ (Dew|io izew Aoq|woo Lwgew) ಮತ್ತು ಇ.ಸಿ.ಎ (Csseq|ibo Aommogi|¦ íAU) ಪ್ರಕಾರ ಕಾರ್ಯ ನಿರ್ವಹಿಸದೆಯಿರುವ ಮಾರಾಟಗಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ತಿಳಿಸಿರುವುದರಿಂದ ಎಲ್ಲಾ ಮಾರಾಟಗಾರರು ಕಡ್ಡಾಯವಾಗಿ ರಸಗೊಬ್ಬರ ದಾಸ್ತಾನು ದರಪಟ್ಟಿ ಹಾಗೂ ರಶೀದಿ ಪುಸ್ತಕ, ದಾಸ್ತಾನು ನಿರ್ವಹಣೆ ಮಾಡಬೇಕೆಂದು ಸೂಚಿಸಿದ್ದಾರೆ.

ಯುವ ನಿಧಿಗೆ ಸ್ವಯಂ ಘೋಷಣೆ ಅಗತ್ಯ

ತುಮಕೂರು: ರಾಜ್ಯ ಸರಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಯುವನಿಧಿ ಯೋಜನೆಯಲ್ಲಿ ನೋಂದಾವಣೆಯಾದ ಅಭ್ಯರ್ಥಿಗಳು ಪ್ರತಿ ತಿಂಗಳ 25ನೇ ತಾರೀಖಿನೊಳಗೆ ಸ್ವಯಂ ಘೋಷಣೆ ಮಾಡಿಕೊಳ್ಳಬೇಕೆಂದು ಜಿಲ್ಲಾ ಉದ್ಯೋಗ ವಿನಿಮಯಾಧಿಕಾರಿ ತಿಳಿಸಿದ್ದಾರೆ. ಯುವನಿಧಿ ಯೋಜನೆಯಲ್ಲಿ ನೋಂದಾವಣೆಯಾದ ಅಭ್ಯರ್ಥಿಗಳು h||ts://sevbsiqghusewviees.mbwqb|bmb.gov.iq ನಲ್ಲಿ ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಿಕೊಂಡು, ಈಗಾಗಲೇ ನೋಂದಾಯಿಸಿಕೊಂಡು ಹಣ ಪಡೆಯುತ್ತಿರುವ ಫಲಾನುಭವಿಗಳು ಯುವನಿಧಿ ಯೋಜನೆಯ ಸ್ವಯಂ ಘೋಷಣೆಯನ್ನು ಮಾಡಬೇಕು. ಸ್ವಯಂ ಘೋಷಣೆಯ ಅವಧಿಯು ತ್ರೈಮಾಸಿಕ ಬದಲಾಗಿ ಮಾಸಿಕವಾಗಿ ಪ್ರತಿ ತಿಂಗಳಿಗೊಮ್ಮೆ ಮಾಡಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ತುಮಕೂರು ದೂ.ವಾ.ಸಂ. 0816-2278488ನ್ನು ಸಂಪರ್ಕಿಸಬೇಕೆಂದು ಅವರು ತಿಳಿಸಿದ್ದಾರೆ.

ಬಾಗೇಪಲ್ಲಿಯಲ್ಲಿ ಪ್ರತಿಭಟನೆ 9ಕ್ಕೆ

ಬಾಗೇಪಲ್ಲಿ: ತಾಲ್ಲೂಕು ಚಿತ್ರಾವತಿ ಉಳಿಸಿ ಜನರ ಜೀವ ಉಳಿಸಿ ಸಮಿತಿಯಿಂದ ಬಾಗೇಪಲ್ಲಿಯ ಪ್ರಗತಿಪರ ಸಂಘಟನೆಗಳೊಂದಿಗೆ ಸಭೆಯನ್ನು ಹಮ್ಮಿಕೊಂಡು ಚರ್ಚಿಸಿ ಜೂನ್ 9 ರಂದು ಪ್ರತಿಭಟನೆ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಎ.ಜಿ.ಸುಧಾಕರ್‌ಮಾತನಾಡಿ, ಬಾಗೇ ಪಲ್ಲಿ ಪಟ್ಟಣದ ದಕ್ಷಿಣ ಭಾಗದ ಚಿತ್ರಾವತಿ ನದಿಗೆ ಚರಂಡಿ ನೀರನ್ನು ಹರಿಸಲು ಕೈಗೊಂಡಿರುವ ಕಾಮಗಾರಿಯನ್ನು ತಕ್ಷಣ ಸ್ಥಗಿತಗೊಳಿಸಬೇಕು. ಪಶ್ಚಿಮ ಭಾಗದ ನದಿಗೆ ಹರಿಸುತ್ತಿರುವ ಕೊಳಚೆ ನೀರನ್ನು ನಿಲ್ಲಿಸಬೇಕು. ಯುಜಿಡಿಯನ್ನು ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿ ಕೊಟ್ಟು ನದಿಗೆ ಗಲೀಜು ನೀರು ಹರಿಯದಂತೆ ಮಾಡಬೇಕು. ಗೂಳೂರು ವೃತ್ತವನ್ನು ಮಳೆಗಾಲದಲ್ಲಿ ಆಗುವ ಜಲ ಬಂಧನದಿಂದ ಪಾರು ಮಾಡಬೇಕು. ಇವು ತಕ್ಷಣದ ನಿರ್ಣಯಗಳು. ಮಂಗಳವಾರ ಎಲ್ಲಾ ಸಂಘ ಸಂಸ್ಥೆಗಳ, ಪರಿಸರವಾದಿಗಳ ನೇತೃತ್ವದಲ್ಲಿ ಪುರಸಭೆಯಿಂದ ಉಪ ನೋಂದಣಾಧಿಕಾರಿ ಬಳಿ ನಡೆಯುತ್ತಿರುವ ಕಾಮಗಾರಿವರೆಗೆ ಪ್ರತಿಭಟನಾ ಮೆರವಣಿಗೆ ಮಾಡಿ ಕೆಲಸ ನಿಲ್ಲಿಸಲು ಒತ್ತಾಯಿಸುವುದು ಎಂದರು. ಡಿ.ಟಿ. ಮುನಿಸ್ವಾಮಿ, ವಾಲ್ಮೀಕಿ ಅಶ್ವತ್ಥಪ್ಪ, ಚನ್ನರಾಯಪ್ಪ, ರಾಮಕೃಷ್ಣಪ್ಪ, ಸೋಮಶೇಖರ್, ಮಂಜುಳ, ರೂಪ, ಬಾಬಾಜಾನ್,ರವೀಂದ್ರ, ಹೊಸಹುಡ್ಯ ಶ್ರೀನಿವಾಸ್ ರೆಡ್ಡಿ ಬೈರೆಡ್ಡಿ ಹಾಗೂ ಇತರರು ಹಾಜರಿದ್ದರು.

{ಕೆ.ಎಚ್.ಮುನಿಯಪ್ಪ} ಸಚಿವ

ಉಪಮುಖ್ಯಮಂತ್ರಿ ಹುದ್ದೆ ನೀಡುವಂತೆ ಮನವಿ ಮಾಡಿದ್ದೇನೆ. ನಾನು ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಇಬ್ಬರಿಗೂ ಮನವಿ ಸಲ್ಲಿಸಿದ್ದೇನೆ. ಅದರ ಬಗ್ಗೆ ತೀರ್ಮಾನಿಸುವುದು ಅವರ ಜವಾಬ್ದಾರಿ. ರಾಹುಲ್ ಗಾಂಧಿ ಅವರು ಎಲ್ಲವನ್ನೂ ನೋಡಿಕೊಳ್ಳುವುದಾಗಿ ಹೇಳಿದ್ದಾರೆ. ಪಕ್ಷದ ಕೆಲಸವನ್ನು ಮುಂದುವರಿಸುವಂತೆ ನನಗೆ ಸೂಚಿಸಿದ್ದಾರೆ. ನಾನು ತೃಪ್ತನಾಗಿದ್ದೇನೆ.

ಕನಕಪುರದಲ್ಲಿ ವಿಜಯೋತ್ಸವ | ಸಾವಿರಾರು ಅಭಿಮಾನಿಗಳ ಸಂಭ್ರಮ | ಸೇಬು, ಬೆಳ್ಳುಳ್ಳಿ, ಮೆಣಸಿನ ಕಾಯಿ ಹಾರಗಳ ಸುರಿಮಳೆ

ತವರಿನಲ್ಲಿ ಸಿಎಂ ಡಿಕೆಶಿಗೆ ಅದ್ಧೂರಿ ಸ್ವಾಗತ

ಕನಕಪುರ: ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಹಾರೋಹಳ್ಳಿ ಹಾಗೂ ಕನಕಪುರ ತಾಲೂಕಿಗೆ ಭೇಟಿ ನೀಡಿದ ಡಿ.ಕೆ.ಶಿವಕುಮಾರ್‌ಅವರಿಗೆ ಅಭಿಮಾನಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ, ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಿ, ಬೃಹತ್ ಹಾರಗಳನ್ನು ಹಾಕುವ ಮೂಲಕ ಅಭೂತಪೂರ್ವವಾಗಿ ಬರಮಾಡಿಕೊಂಡರು.

ಹಾರೋಹಳ್ಳಿಯಲ್ಲಿ ಸಿ.ಎಂ. ಶಿವಕುಮಾರ್‌ಅವರಿಗೆ ದೃಷ್ಟಿಯಾಗದಿರಲಿ ಎಂದು ಹಸಿ ಮೆಣಸಿನಕಾಯಿ, ಒಣಮೆಣಸಿನಕಾಯಿ, ಬೆಳ್ಳುಳ್ಳಿಯಿಂದ ತಯಾರಿಸಿದ್ದ ಬೃಹತ್ ಹಾರ ಹಾಕಿ ಸ್ವಾಗತ ಕೋರಿದರು. ಸಿಎಂ ಆಗಮಿಸಿದ ಪ್ರತಿ ಗ್ರಾಮಗಳಲ್ಲಿಯೂ ಮೂಸಂಬಿ, ಸೇಬಿನ ಹಾರಗಳನ್ನು ಹಾಕಿ ನೆಚ್ಚಿನ ನಾಯಕನನ್ನು ಸ್ವಾಗತಿಸಲಾಯಿತು.

ಕಗ್ಗಲೀಪುರ, ತುಂಗಣಿ, ನಾರಾಯಣಪುರಗಳಲ್ಲಿ ಅಭಿಮಾನಿಗಳು ಸುಮಾರು 500 ಕೆಜಿಗೂ ಹೆಚ್ಚು ಸೇಬು ಬಳಸಿ ಬೃಹತ್ ಹಾರಗಳನ್ನು ಮಾಡಿಸಿ ಡಿ.ಕೆ. ಶಿವಕುಮಾರ್‌ಅವರ ಮೇಲಿನ ಅಭಿಮಾನ ಮೆರೆದರು. ತುಂಗಣಿಯಲ್ಲಿ ಎರಡು ಸೇಬಿನ ಹಾರಗಳು ಇದ್ದಿದ್ದು ವಿಶೇಷವಾಗಿತ್ತು.

ಹೆರಿಂದ್ಯಾಪನಹಳ್ಳಿಯಲ್ಲಿ ಮಾಡಿದ್ದ ಸೇಬಿನ ಹಾರ 30 ಅಡಿಗೂ ಹೆಚ್ಚು ಉದ್ದವಾಗಿತ್ತು.

ಸಿಎಂ ಆಗಮಿಸುವುದನ್ನು ಕಾತುರದಿಂದ ಕಾಯುತ್ತಿದ್ದ ಅಭಿಮಾನಿಗಳು ಬೃಹತ್ ಮೆರವಣಿಗೆ ನಡೆಸುವ ಜತೆಗೆ ಜೈಕಾರ ಕೂಗಿದರು. ಡಿಕೆ, ಡಿಕೆ ಘೋಷಣೆಗಳು ಮೊಳಗಿದವು.

ತೆರೆದ ವಾಹನದಲ್ಲಿ ಬಂದ ಮುಖ್ಯಮಂತ್ರಿಗಳಿಗೆ ದಾರಿಯುದ್ದಕ್ಕೂ ಜೆಸಿಬಿ ಮುಖಾಂತರ ಹೂಮಳೆ ಸುರಿಸಿದ ಕಾರ್ಯಕರ್ತರು ಹಾಗೂ ಅಭಿಮಾನಿಗಳು, ಗ್ರಾಮಗಳಿಗೆ ಬಂದ ಕಡೆಯಲ್ಲೆಲ್ಲಾ ಪಟಾಕಿ ಸಿಡಿಸಿ, ಸಿಹಿ ಹಂಚಿದರು. ಪ್ರಮುಖ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಕ್ಷೇತ್ರದ ಬಡವರಿಗೆ ತಲೆ ಮೇಲೆ ಸೂರು, ಸ್ಥಳೀಯರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ಕಡ್ಡಾಯ. ಮೆಡಿಕಲ್ ಕಾಲೇಜು ಶೀಘ್ರ ಪ್ರಾರಂಭ. ಸಮಸ್ಯೆಗಳನ್ನು ಆಲಿಸಲು ಅಧಿಕಾರಿ ನೇಮಕ' – ಹೀಗೆ ಕ್ಷೇತ್ರದ ಜನರಿಗೆ ಪಂಚ ವಚನಗಳನ್ನು ಸಿಎಂ ಡಿ.ಕೆ.ಶಿವಕುಮಾರ್‌ಅವರು ನೀಡಿದರು.

ಹಾರೋಹಳ್ಳಿ ಹಾಗೂ ಕನಕಪುರ ತಾಲೂಕಿಗೆ ಭೇಟಿ ನೀಡಿದ ಸಿಎಂ ಡಿ.ಕೆ.ಶಿವಕುಮಾರ್‌ಗೆ ಕಾಂಗ್ರೆಸ್ ಕಾರ್ಯಕರ್ತರು ಸೇಬುಗಳಿಂದ ಮಾಡಿದ ಬೃಹತ್ ಹಾರ ಹಾಕಿ ಅಭಿಮಾನ ಮೆರೆದರು.

ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಆದ್ಯತೆ: ಸಿಎಂ ಡಿಕೆಶಿ

ಕ್ಷೇತ್ರದಲ್ಲಿನ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಮೊದಲ ಆದ್ಯತೆ ನೀಡುವುದನ್ನು ಕಡ್ಡಾಯಗೊಳಿಸಲಾಗುವುದು. ನನ್ನ ಕ್ಷೇತ್ರದ ಜನ ವಲಸೆ ಹೋಗುವುದನ್ನು ತಪ್ಪಿಸಲು ಕೆಲಸ ಮಾಡಲಾಗುತ್ತಿದೆ. ದೊಡ್ಡಆಲಳ್ಳಿ, ಹೊಸದುರ್ಗಗಳಲ್ಲಿ ಸಿಎಸ್ ಆರ್ ಅನುದಾನ ಬಳಸಿ ಕೆಪಿಎಸ್ ಶಾಲೆಗಳನ್ನು ನಿರ್ಮಾಣ ಮಾಡಲಾಗಿದೆ. ಬೆಂಗಳೂರಿನಲ್ಲಿ ದೊರೆಯುವ ಶಿಕ್ಷಣ ಇಲ್ಲಿಯೇ ದೊರೆಯಬೇಕು. ನಿಮಗೆ ಆಶ್ರಯ, ಆರೋಗ್ಯ, ಅಕ್ಷರ ನೀಡುವುದು ನನ್ನ ಮೊದಲ ಆದ್ಯತೆ. ಇದೇ ವೇಳೆ ಭೂಮಿ ಮಾರಬೇಡಿ- ವ್ಯವಸಾಯ ಬಿಡಬೇಡಿ ಎಂದು ಸಿಎಂ ಡಿಕೆಶಿ ಕಿವಿಮಾತು ಹೇಳಿದರು.

ನನ್ನ ಕ್ಷೇತ್ರದ ಜನರಿಗೆ ನನ್ನ ಮನೆ ಬಾಗಿಲು ಸದಾ ತೆರೆದಿರುತ್ತದೆ. ನಾನು ನಿಮ್ಮ ಸೇವೆಗೆ ಇರುವವನು. ನಿಮ್ಮ ಆಶೀರ್ವಾದದಿಂದ ಮುಖ್ಯಮಂತ್ರಿ ಸ್ಥಾನಕ್ಕೇರಿದ್ದೇನೆ. ನನ್ನ ಕ್ಷೇತ್ರಕ್ಕೆ ಕಾಲಿಟ್ಟ ಕ್ಷಣದಿಂದ ನಾನು ಜನರ ಸೇವಕ. ಜಿಲ್ಲಾ ಪಂಚಾಯತಿ, ಟಿಎಪಿಸಿಎಂಎಸ್ ಮೂಲಕ ನನ್ನ ರಾಜಕೀಯ ಪ್ರಾರಂಭ ಮಾಡಿದೆ. ಪಕ್ಷಬೇಧ ಮರೆತು ನನ್ನನ್ನು ಬೆಳೆಸಿದ್ದೀರಿ .

– ಡಿ.ಕೆ.ಶಿವಕುಮಾರ್, ಸಿಎಂ

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಶಿವಕುಮಾರ್‌ಅವರು ಇದೇ ಮೊದಲ ಬಾರಿಗೆ ತವರು ಕ್ಷೇತ್ರ ಕನಕಪುರದ ವಿವಿಧ ಭಾಗಗಳಿಗೆ ಭಾನುವಾರ ಭೇಟಿ ನೀಡಿ ಜನರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದರು.

ಜಾನಪದ ಕಲಾಮೇಳ: ನಾರಾಯಣಪುರದಲ್ಲಿ ಪೂಜಾಕುಣಿತ ಕಲಾವಿದರು ಸ್ವಾಗತಿಸಿದರೆ, ಕೊಳಗೊಂಡನಹಳ್ಳಿಯಲ್ಲಿ ನಂದಿಧ್ವಜ, ಪಟ ಕುಣಿತ, ನಂದಿಧ್ವಜ ಹೊತ್ತ ಕಲಾವಿದರು ಸ್ವಾಗತಿಸಿದರು. ಪ್ರತಿ ಊರಿನಲ್ಲೂ ತಮಟೆ, ನಗಾರಿ ಸದ್ದು ಮೇಳೈಸಿತ್ತು. ಬೇಕುಪ್ಪೆಯಲ್ಲಿ ಮನೆದೇವರು ಕೆಂಕೇರಮ್ಮನಿಗೆ ಹಾಗೂ ತುಂಗಣಿಯಲ್ಲಿ ಚಾಮುಂಡೇಶ್ವರಿ ದೇವಾಲಯದಲ್ಲಿ ಸಹೋದರ ಡಿ.ಕೆ. ಸುರೇಶ್ ಅವರ ಜೊತೆಗೂಡಿ ಪೂಜೆ ಸಲ್ಲಿಸಿದರು. ಕ್ಷೇತ್ರದ ಗಡಿ ಭಾಗದಲ್ಲಿ ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು.

ಅಜ್ಜಯ್ಯನ ಮಾರ್ಗದರ್ಶನ: ಸಿಎಂ ರೋಡ್ ಶೋ ನಡೆಸಿದ ವಾಹನದ ಮುಂಭಾಗದಲ್ಲಿ ಅಜ್ಜಯ್ಯನ ಫೋಟೊ ಅಳವಡಿಸಿದ್ದು ವಿಶೇಷವಾಗಿತ್ತು. ವೀರ ಗಂಗಾಧರ ಅಜ್ಜಯ್ಯನ ಮಾರ್ಗದರ್ಶನದಲ್ಲಿ ಮುನ್ನಡೆಯುವ ಸಂದೇಶ ಕೊಟ್ಟರು.

ಬೇಕುಪ್ಪೆ ಗ್ರಾಮದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ವೇಳೆ ಆಂಬ್ಯುಲೆನ್ಸ್ ಬಂದ ಕಾರಣಕ್ಕೆ ಮಧ್ಯದಲ್ಲೇ ಭಾಷಣ ನಿಲ್ಲಿಸಿದ ಮುಖ್ಯಮಂತ್ರಿಯವರು ಜನರಿಗೆ ದಾರಿ ಬಿಡುವಂತೆ ಸೂಚಿಸಿದರು. ಆಂಬ್ಯುಲೆನ್ಸ್ ಹೋದ ನಂತರ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

ಡಿಕೆಶಿಗೆ ವೆಜ್ ಕಾರ್ಯಕರ್ತರಿಗೆ ನಾನ್‌ವೆಜ್: ಇನ್ನು ಡಿ.ಕೆ.ಶಿವಕುಮಾರ್ ಅವರಿಗೆ ಇಂದಿನ ಪ್ರವಾಸದಲ್ಲಿ ವೆಜ್ ಊಟ ಸಿದ್ದಪಡಿಸಲಾಗಿತ್ತು. ಕೋಡಿಹಳ್ಳಿಯಲ್ಲಿರುವ ಡಿಕೆಶಿ ತಾಯಿ ಮನೆಯಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಅವರಿಗಾಗಿ ಇಡ್ಲಿ, ಮುದ್ದೆ, ಹಿತುಕಿದ ಬೇಳೆ ಸಾರು, ವೆಜ್ ಪಲಾವ್, ಪನ್ನೀರ್ ಚಿಲ್ಲಿ, ಅನ್ನ, ನುಗ್ಗೆಕಾಯಿ ಸಾರು ತಯಾರು ಮಾಡಲಾಗಿತ್ತು. ತಡವಾಗಿ ಊಟಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಊಟ ಸೇವಿಸಿ ಕೆಲ ಕಾಲ ವಿಶ್ರಾಂತಿ ಪಡೆದರು. ಇನ್ನು ಕಾರ್ಯಕರ್ತರಿಗೆ ಹಾಗೂ ಅಭಿಮಾನಿಗಳಿಗೆ ಭರ್ಜರಿ ನಾನ್ವೆಜ್ ಊಟ ಮಾಡಿಸಲಾಗಿತ್ತು. ಚಿಕನ್ ಬಿರಿಯಾನಿ, ಚಿಕನ್ ಚಾಪ್ಸ್, ಅನ್ನ, ಸಾಂಬರು ವ್ಯವಸ್ಥೆ ಮಾಡಲಾಗಿತ್ತು. ನೂರಾರು ಮಂದಿ ಭಾಗವಹಿಸಿ ಊಟ ಸವಿದು ಡಿ.ಕೆ.ಶಿ ಜತೆಗೆ ಮುಂದಿನ ಗ್ರಾಮಗಳಿಗೆ ಹೆಜ್ಜೆ ಹಾಕಿದರು.

ಮನೆದೇವರಿಗೆ ಪೂಜೆ ಸಲ್ಲಿಕೆ

ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಕನಕಪುರಕ್ಕೆ ಆಗಮಿಸಿದ ಡಿ.ಕೆ. ಶಿವಕುಮಾರ್ ಹಾಗೂ ಡಿ.ಕೆ.ಸುರೇಶ್ ಅವರು ಕೆಂಕೇರಮ್ಮ ದೇವಾಲಯಕ್ಕೆ ಆಗಮಿಸಿ, ವಿಶೇಷ ಪೂಜೆ ಸಲ್ಲಿಸಿ, ಪ್ರಸಾದ ಸ್ವೀಕರಿಸಿದರು. ಇದರ ಜೊತೆಗೆ ತಮ್ಮ ಸಿಎಂ ಕನಸು ನನಸು ಮಾಡಿದ್ದಕ್ಕೆ ಈಡುಗಾಯಿ ಹೊಡೆದು ಹರಕೆ ತೀರಿಸಿದರು. ಈ ಸಂದರ್ಭದಲ್ಲಿ ನೂರಾರು ಮಂದಿ ಭಾಗವಹಿಸಿ ಡಿ.ಕೆ.ಸಹೋದರರಿಗೆ ಸಾಥ್ ನೀಡಿದರು. ತಾಲೂಕಿನಾದ್ಯಂತ ಸಂಚಾರ ಮಾಡಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದ ಡಿಕೆಶಿ, ಕೊನೆಗೆ ಕನಕಪುರ ನಗರಕ್ಕೆ ಆಗಮಿಸುವಷ್ಟರಲ್ಲಿ ತಡವಾಗಿತ್ತು. ತಡವಾಗಿ ಬಂದರೂ ಮಳೆಯನ್ನೂ ಲೆಕ್ಕಿಸದೆ ಕಾದು ಕುಳಿತು ನೆಚ್ಚಿನ ನಾಯಕನಿಗೆ ಶುಭ ಕೋರಿದರು.

ಮೆಡಿಕಲ್ ಕಾಲೇಜು ನನ್ನ ಕನಸಾಗಿತ್ತು

ತುಂಗಣಿ ಗ್ರಾಮದಲ್ಲಿ ಸಿಎಂ ಡಿಕೆಶಿ ಮಾತನಾಡಿ, 'ಅಕ್ಷರ, ಆಶ್ರಯ, ಆರೋಗ್ಯ ಹುಡುಕಿಕೊಂಡು ವಲಸೆ ಹೋಗಬೇಡಿ. ಅದೆಲ್ಲವೂ ಇಲ್ಲಿಯೇ ದೊರೆಯಲಿದೆ. ಕನಕಪುರದಲ್ಲಿ ದೊಡ್ಡ ಮೆಡಿಕಲ್ ಕಾಲೇಜು ಆಗಬೇಕು ಎನ್ನುವುದು ನನ್ನ ಕನಸಾಗಿತ್ತು. ಇಡೀ ರಾಜ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ ಮೆಡಿಕಲ್ ಕಾಲೇಜು ಇದ್ದರೆ ಅದು ಈ ಕ್ಷೇತ್ರದಲ್ಲಿ ಮಾತ್ರ. ಯಡಿಯೂರಪ್ಪ ಅವರು ನಮಗೆ ಘೋಷಣೆಯಾಗಿದ್ದ ಮೆಡಿಕಲ್ ಕಾಲೇಜನ್ನು ಚಿಕ್ಕಬಳ್ಳಾಪುರಕ್ಕೆ ನೀಡಿದ್ದರು. ನಾನು ಛಲಬಿಡದೇ ಕನಕಪುರಕ್ಕೆ ಮೆಡಿಕಲ್ ಕಾಲೇಜು ತಂದಿದ್ದೇನೆ' ಎಂದರು.

ಪರಿಸರ ಉಳಿವಿನಿಂದ ಮನುಕುಲ ಉಳಿವು

ಕೋಲಾರ: ಪರಿಸರ ಉಳಿವಿನಿಂದ ಮಾತ್ರ ಮನುಕುಲ ಉದ್ಧಾರ ಸಾಧ್ಯ ಎಂದು ಮಾರ್ಜೇನ ಹಳ್ಳಿ ಪಿಡಿಒ ಮಧುಮತಿ ಹೇಳಿದರು.

ವಿಶ್ವ ಪರಿಸರ ದಿನಚರಣೆ ಅಂಗವಾಗಿ ಮಾರ್ಜೇನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ನಡೆದ ಸಸಿ ನೆಡುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿರು.

ಪರಿಸರದ ಮೇಲಿನ ದಾಳಿಯಿಂದ ಪ್ರಕೃತಿ ಯಲ್ಲಿ ಅಸಮತೋಲನ ಉಂಟಾಗಿ ಹವಾಮಾನ ವೈಫರಿತ್ಯದ ಮೂಲಕ ನಾವಿಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಇನ್ನಾದರೂ ಎಚ್ಚೆತ್ತುಕೊಂಡು ಬ್ಯಾಟರಿ ಚಾಲಿತ ವಾಹನಗಳನ್ನು ಬಳಸುವ ಜತೆಗೆ ನೀರನ್ನು ಉಳಿಸಬೇಕು.

ಕಸವನ್ನು ವಿಂಗಡಣೆ ಮಾಡಿ ಸುರಕ್ಷಿತವಾಗಿ ವಿಲೇವಾರಿ ಮಾಡಬೇಕಿದ್ದು ಯಾವುದೇ ಕಾರಣಕ್ಕೂ ಸುಡಬಾರದು ಎಂದರು.

ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಅಶ್ವಥನಾರಾಯಣಗೌಡ ಸಾರಥ್ಯದಲ್ಲಿ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳಲ್ಲಿ ನೂರಾರು ಸಸಿ ನೆಟ್ಟು ಹಸಿರುಹಬ್ಬ ಆಚರಿಸಲಾಯಿತು.

ಸಸಿ ನೆಟ್ಟು ವ್ಯಾಟ್ಸಪ್, ಸ್ಟೇಟಸ್ನಲ್ಲಿ ಹಾಕಿಕೊಳ್ಳುವುದಕ್ಕಿಂತ ಸಸಿಯನ್ನು ಪೋಷಣೆ ಮಾಡಿ ಬೆಳೆಸಿ ದೊಡ್ಡದು ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಅಶ್ವತ್ಥನಾರಾಯಣಗೌಡ ನುಡಿದರು.

ಸರ್ಕಾರಿ ಶಾಲೆ ಮಕ್ಕಳು ಗ್ರಾಮದಲ್ಲಿ ಮೆರವಣಿಗೆ ನಡೆಸಿ ಸ್ವಚ್ಛ ಗ್ರಾಮ ಸುರಕ್ಷಿತ ಹವಾಮಾನದ ಜಾಗೃತಿ ಮೂಡಿಸಿದರು. ಮುಖ್ಯೋಪಾಧ್ಯಾಯಿನಿ ವಿಜಯ, ಸಿಎಚ್‌ಒ ಪ್ರಕಾಶ್, ಎನ್ಆರ್‌ಎಲ್‌ಎಂ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತೆಯರು ಸೇರಿದಂತೆ ಇತರರು ಇದ್ದರು.

ಪರಿಸರ ದಿನಾಚರಣೆ ಅಂಗವಾಗಿ ಮಾರ್ಜೇನಹಳ್ಳಿಯಲ್ಲಿ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿ ಜಾಗೃತಿ ಮೂಡಿಸಿದರು.

ವಿಶ್ವ ಸೈಕಲ್ ದಿನಾಚರಣೆ | ಬಿಇಒ ವೆಂಕಟೇಶಪ್ಪ ಸಲಹೆ

ಮಾಲಿನ್ಯ ತಗ್ಗಿಸಲು ಸೈಕಲ್ ಬಳಕೆ ಸೂಕ್ತ

ಬಾಗೇಪಲ್ಲಿ: ಕೈಗೆಟುಕುವ ದರದಲ್ಲಿ ಸಿಗುವ ಸೈಕಲ್ ಬಳಕೆ ಮಾಡುವುದು ಆರೋಗ್ಯ, ಆರ್ಥಿಕ ಹಾಗೂ ಪರಿಸರ ದೃಷ್ಟಿಯಿಂದ ಇಂದಿನ ದಿನಗಳಲ್ಲಿ ಅತ್ಯವಶ್ಯಕವಾಗಿದೆ ಎಂದು ಬಿಇಒ ಎನ್. ವೆಂಕಟೇಶಪ್ಪ ತಿಳಿಸಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಆವರಣದಲ್ಲಿ ವಿಶ್ವ ಸೈಕಲ್ ದಿನಾಚರಣೆ ಅಂಗವಾಗಿ ಸೈಕಲ್ ಜಾಗೃತಿ ಜಾಥಾ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, 'ಸೈಕಲ್ ಓಡಿಸುವುದರಿಂದ ದೈಹಿಕ, ಮಾನಸಿಕ ಹಾಗೂ ಆರೋಗ್ಯದ ಮೇಲೆ ಒಳ್ಳೆಯ ಪ್ರಭಾವ ಬೀರುತ್ತದೆ. ಇತ್ತೀಚಿನ ದಿನಗಳಲ್ಲಿ ಪೆಟ್ರೋಲ್, ಡಿಸೇಲ್ ಸೇರಿದಂತೆ ಇಂಧನ ದರ ಏರಿಕೆಯನ್ನು ಆರ್ಥಿಕವಾಗಿ ಸರಿದೂಗಿಸಲು ಸೈಕಲ್ ಬಳಕೆ ರಾಮಬಾಣ ವಾಗಿದೆ' ಎಂದರು

ವಿಶ್ವಸಂಸ್ಥೆಯು 201೮ ಏಪ್ರಿಲ್‌ನಲ್ಲಿ ಜೂನ್ 3 ಅನ್ನು ವಿಶ್ವ ಬೈಸಿಕಲ್ ದಿನವೆಂದು ಘೋಷಿಸಿತು. ಬೈಸಿಕಲ್ ಬಳಕೆಯು ಮಾಲಿನ್ಯ ತಗ್ಗಿಸಲು, ದೈಹಿಕ ಕ್ಷಮತೆ ಹೆಚ್ಚಿಸಲು ಮತ್ತು ಸಾರ್ವಜನಿಕ ಆರೋಗ್ಯ ಸುಧಾರಣೆ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶ ಹೊಂದಿದೆ.

ಇಂದಿನ ಮಾಲಿನ್ಯ ಮತ್ತು ಒತ್ತಡದ ಜೀವನದಲ್ಲಿ ಬೈಸಿಕಲ್ ಬಳಕೆ ಅತ್ಯಂತ ಮಹತ್ವದ್ದಾಗಿದೆ.

ಬಾಗೇಪಲ್ಲಿ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಆವರಣದಲ್ಲಿ ವಿಶ್ವ ಸೈಕಲ್ ದಿನಾಚರಣೆ ಅಂಗವಾಗಿ ಸೈಕಲ್ ಜಾಗೃತಿ ಜಾಥಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಇದು ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಅತ್ಯುತ್ತಮ ವ್ಯಾಯಾಮವಾಗಿದೆ.

ಇದು ಇಂಧನ ಉಳಿತಾಯ, ಆರ್ಥಿಕ ಮಿತವ್ಯಯ ಮತ್ತು ಪರಿಸರ ಸಂರಕ್ಷಣೆಗೆ ಕೊಡುಗೆ ನೀಡುತ್ತಿದೆ ಎಂದರು.

ಸೈಕಲ್ ಅತ್ಯಂತ ಕಡಿಮೆ ವೆಚ್ಚದ ಸಾರಿಗೆ ಸಾಧನವಾಗಿದ್ದು, ದೈನಂದಿನ ಪ್ರಯಾಣಕ್ಕೆ ಇದು ಅತ್ಯುತ್ತಮ ಆಯ್ಕೆಯಾಗಿದೆ.

ಶುದ್ಧ ಮತ್ತು ಪರಿಸರ ಸ್ನೇಹಿ ಸಾರಿಗೆಯಾಗಿದೆ. ಸೈಕಲನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು ಸುಸ್ಥಿರ ಮತ್ತು ಆರೋಗ್ಯಕರ ಭವಿಷ್ಯಕ್ಕೆ ನಾಂದಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಕ ನೌಕರರ ಸಂಘದ ಅಧ್ಯಕ್ಷ, ಆರ್.ಹನುಮಂತ ರೆಡ್ಡಿ, ಶಿಕ್ಷಣ ಸಮನ್ವಯಾಧಿಕಾರಿಗಳಾದ ಆರ್.ವೆಂಕಟರಾಮ್,ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ವೆಂಕಟರಾಯಪ್ಪ, ಪಿ.ನಾರಾಯಣ ಸ್ವಾಮಿ, ರಮೇಶ್,ಕೆ.ವಿ.ಆದಿಬಾರಾಯಣ ಎಂ.ವಿ.ರಂಗಾರೆಡ್ಡಿ,ಕದಿರಪ್ಪ ಶಿವಣ್ಣ, ಮಂಜುನಾಥ್, ನಾರಾಯಣ ಸ್ವಾಮಿ ಡಿ.ಕೊತ್ತಪಲ್ಲಿ ಹಾಗೂ ಶಾಲಾ ಮಕ್ಕಳು ಹಾಜರಿದ್ದರು

ಶಾಸಕ ಟಿ.ಬಿ.ಜಯಚಂದ್ರಗೆ ಸಚಿವ ಸ್ಥಾನ ನೀಡಿ

ಶಿರಾ: ಕರ್ನಾಟಕ ರಾಜ್ಯದ ಶಾಸಕರಲ್ಲಿ ಅತ್ಯಂತ ಹಿರಿಯರು ಹಾಗೂ ಕುಂಚಿಟಿಗ ಸಮಾಜದ ಏಕೈಕ ಶಾಸಕರಾದ ಟಿ.ಬಿ.ಜಯಚಂದ್ರ ಅವರು ಹಾಗೂ ಅವರ ಕುಟುಂಬದವರು ಕಾಂಗ್ರೆಸ್ ಪಕ್ಷದವರಾಗಿ. 1973ನೇ ಸಾಲಿನಿಂದ ಈವರೆಗೂ ಕಾಂಗ್ರೆಸ್ ಪಕ್ಷದ ಸೇವೆಯನ್ನು ಸಲ್ಲಿಸಿ 7 ಬಾರಿ ಶಾಸಕರಾಗಿ 2 ಬಾರಿ ಸಚಿವರಾಗಿ 2 ಬಾರಿ ದೆಹಲಿ ವಿಶೇಷ ಪ್ರತಿನಿಧಿಯಾಗಿ ಸೇವೆಯನ್ನು ಮಾಡಿ ಜನಮನ್ನಣೆಯನ್ನು ಪಡೆದಿರುತ್ತಾರೆ. ಆದ್ದರಿಂದ ಟಿ.ಬಿ.ಜಯಚಂದ್ರ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಶಿರಾ ತಾಲೂಕು ಲಂಬಾಣಿ ಶ್ರೇಯೋಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎನ್.ಶೇಷನಾಯಕ್ ಒತ್ತಾಯಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಭಾನುವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಟಿ.ಬಿ.ಜಯಚಂದ್ರ ತುಮಕೂರು ಜಿಲ್ಲೆಗೆ ನೀರಾವರಿ ಯೋಜನೆಗೆ ತರಲು ಶ್ರಮಿಸಿದವರಲ್ಲಿ ಅತ್ಯಂತ ಪ್ರಮುಖಪಾತ್ರವನ್ನು ವಹಿಸಿ ಸಚಿವರಾದ ಸಂದರ್ಭದಲ್ಲಿ ಭದ್ರಾಮೇಲ್ದಂಡೆ, ಹೇಮಾವತಿ, ಎತ್ತಿನಹೊಳೆ ಯೋಜನೆಯನ್ನು ತಂದು ಜಾರಿಗೊಳಿಸಿ ಸಾಕಷ್ಟು ರೈತರಿಗೆ ಅನುಕೂಲವನ್ನು ಮಾಡಿದ್ದಾರೆ. ಬರದ ನಾಡಿಗೆ ಹೇಮಾವತಿಯನ್ನು ಹರಿಸಿ ಕೀರ್ತಿಪಾತ್ರಕ್ಕೆ ಭಾಜನರಾಗಿದ್ದಾರೆ. ತನ್ನ ಜೀವನವೇ ರಾಜಕೀಯ ಕ್ಷೇತ್ರಕ್ಕೆ ಒತ್ತೆ ಇಟ್ಟು ಪ್ರತಿದಿನ ಜನರ ಸಮಸ್ಯೆಗಳನ್ನು ವಿಧಾನಸಭೆಯಲ್ಲಿ ಸಾಕಷ್ಟು ಚರ್ಚೆಯನ್ನು ಬಡವರ ಮಕ್ಕಳಿಗೆ ಸಹಕಾರಿಯಾಗಿರುತ್ತಾರೆ. ಆದ್ದರಿಂದ ಟಿ.ಬಿ.ಜಯಚಂದ್ರ ಅವರನ್ನು ಸಚಿವರನ್ನಾಗಿ ಮಾಡಬೇಕೆಂದು ಶಿರಾ ತಾಲೂಕು ಲಂಬಾಣಿ ಶ್ರೇಯೋಭಿವೃದ್ಧಿಸಂಘ ಹಾಗೂ ಸಮಾಜದ ಬಂಧುಗಳು ಕಾಂಗ್ರೆಸ್ ವರಿಷ್ಠರಲ್ಲಿ ಮನವಿ ಮಾಡುತ್ತೇವೆ ಎಂದರು.



ಶಿರಾದ ಪ್ರವಾಸಿ ಮಂದಿರದಲ್ಲಿ ಶಿರಾ ತಾಲೂಕು ಲಂಬಾಣಿ ಶ್ರೇಯೋಭಿವೃದ್ಧಿಸಂಘದಿಂದ ಪತ್ರಿಕಾಗೋಷ್ಠಿ ನಡೆಸಲಾಯಿತು.

ಕನಕ ಬ್ಯಾಂಕ್ ನಿರ್ದೇಶಕರು ಹಾಗೂ ನಗರಸಭೆ ಸದಸ್ಯರಾದ ಸುಶೀಲ ವಿರೂಪಾಕ್ಷ ಅವರು ಮಾತನಾಡಿ, ನೂತನ ಮುಖ್ಯಮಂತ್ರಿಯಾದ ಡಿ.ಕೆ.ಶಿವಕುಮಾರ್‌ಸಚಿವ ಸಂಪುಟದಲ್ಲಿ ಜನಪರ ಕಾಳಜಿಯುಳ್ಳ ತುಮಕೂರು ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಶ್ರಮವಹಿಸಿ ಕೆಲಸ ಮಾಡುತ್ತಿರುವ ಟಿ.ಬಿ.ಜಯಚಂದ್ರ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದರು.

ಭೂ ನ್ಯಾಯಮಂಡಳಿ ಸದಸ್ಯರಾದ ಮಹೇಶ್ ಕುರ್ಮಾ. ಎನ್ ಮಾತನಾಡಿ ಟಿ.ಬಿ.ಜಯಚಂದ್ರ ಅವರು ಸಚಿವರಾದಲ್ಲಿ ಈ ಹಿಂದೆ ಸಿದ್ದರಾಮಯ್ಯ ನವರ ಸರಕಾರದಲ್ಲಿ 42 ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಶುದ್ಧಹಸ್ತ ರಾಜಕಾರಣಿ ಎಂದು ಜನಮನ್ನಣೆಯನ್ನು ಪಡೆದಿದ್ದಾರೆ. ಹಾಗಾಗಿ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿ ಉತ್ತಮ ಖಾತೆಯನ್ನು ನೀಡಲು ವರಿಷ್ಠರಲ್ಲಿ ವಿನಂತಿಯನ್ನು ಮಾಡುತ್ತೇವೆ ಎಂದರು.

ಯುವ ಕಾಂಗ್ರೆಸ್ ನಗರ ಅಧ್ಯಕ್ಷ ಅಂಜನ್ ಕುಮಾರ್, ಶಿರಾ ತಾಲೂಕು ಲಂಬಾಣಿ ಶ್ರೇಯೋಭಿವೃದ್ಧಿ ಸಂಘದ ಸಂಘಟನಾ ಕಾರ್ಯದರ್ಶಿ ಆನಂದ್ ಕುಮಾರ್, ಮುಖಂಡರಾದ ನಾಗರಾಜ ನಾಯ್ಕ, ಸರೋಜ ಎಸ್. ನಾಯ್ಕ್, ಪ್ರವೀಣ್ ನಾಯ್ಕ್, ಕೇಶವ್ಮೂರ್ತಿ, ಠಾಕೂರ್‌ನಾಯ್ಕ್, ಸತೀಶ್ ಹಾಜರಿದ್ದರು.

ಕೊತ್ತಲವಾಡಿಯಲ್ಲಿ ವಿಶ್ವ ಪರಿಸರ ದಿನಾಚರಣೆ | ಪ್ರೊ. ಮಲ್ಲಿಕಾರ್ಜುನಪ್ಪ ಅಭಿಮತ

ಪರಿಸರ ಜಾಗೃತಿ ಮೂಡಿಸಿದ ಕೀರ್ತಿ ಮೋದಿಗೆ

ಚಾಮರಾಜನಗರ: ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶ ಹಾಗೂ ಜಾಗತಿಕ ಮಟ್ಟದಲ್ಲಿ ಪರಿಸರ ಸಂರಕ್ಷಣೆ ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದೊಡ್ಡ ಮಟ್ಟದ ಅಭಿಯಾನಗಳು ನಡೆದಿವೆ. ಅವು ದೇಶದ ಜನರಲ್ಲಿ ಪರಿಸರ ಜಾಗೃತಿ ಉಂಟು ಮಾಡುವಲ್ಲಿ ಯಶಸ್ವಿಯಾಗಿವೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ಹೇಳಿದರು.

ತಾಲೂಕಿನ ಕೊತ್ತಲವಾಡಿ ಗ್ರಾಮದಲ್ಲಿ ಬಿಜೆಪಿ ಗ್ರಾಮಾಂತರ ಮಂಡಲ ವತಿಯಿಂದ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ನೀರೆರೆದು ಅವರು ಮಾತನಾಡಿದರು.

ನರೇಂದ್ರ ಮೋದಿ ಅವರು ಮೊದಲ ಬಾರಿಗೆ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ದೃಢ ನಿರ್ಧಾರ ಕೈಗೊಂಡು, ಸ್ವಚ್ಛ ಭಾರತ ಅಭಿಯಾನದ ಮೂಲಕ ಪರಿಸರವನ್ನು ಉಳಿಸಬೇಕು ಹಾಗೂ ಪರಿಸರ ಉಳಿದರೆ ಪ್ರತಿಯೊಬ್ಬರ ಜೀವನವೂ ಉಳಿಯುತ್ತದೆ ಎಂಬ ಧ್ಯೇಯದೊಂದಿಗೆ ಆಡಳಿತ ಆರಂಭಿಸಿದರು ಎಂದರು.

ದೇಶದಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ಪರಿಸರ ಸಂರಕ್ಷಣೆ ಹಾಗೂ ಪ್ರತಿಯೊಬ್ಬರ ಗೌರವ ಕಾಪಾಡುವ ಉದ್ದೇಶದಿಂದ ಸ್ವಚ್ಛ ಭಾರತ ಅಭಿಯಾನದಡಿ ಸುಮಾರು 12 ಕೋಟಿಗೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಈ ಮೂಲಕ ಜನರಲ್ಲಿ ಪರಿಸರ ಜಾಗೃತಿ ಮೂಡಿಸಿದ ಕೀರ್ತಿ ನರೇಂದ್ರ ಮೋದಿಯವರಿಗೆ ಸಲ್ಲುತ್ತದೆ ಎಂದು ಹೇಳಿದರು.

ತಾಲೂಕಿನ ಕೊತ್ತಲವಾಡಿ ಗ್ರಾಮದಲ್ಲಿ ಬಿಜೆಪಿ ಗ್ರಾಮಾಂತರ ಮಂಡಲ ವತಿಯಿಂದ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ನೀರೆರೆದು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪ್ರಧಾನಿ ನರೇಂದ್ರ ಮೋದಿಯವರ ಆಶಯದಂತೆ ಪ್ರತಿಯೊಬ್ಬರೂ ಒಂದೊಂದು ಗಿಡ ನೆಟ್ಟು ಪರಿಸರವನ್ನು ಉಳಿಸಿ ಬೆಳೆಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ಕಾರ್ಯಕ್ರಮದ ಸಂಚಾಲಕ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಬೇಂದ್ರಪ್ಪ, ನಟರಾಜ್ ಗೌಡ, ಅರಕಲವಾಡಿ ನಾಗೇಂದ್ರ, ಸಾಹಿತಿ ಕೋಡಿಉಗನೆ ಮಂಜು, ನಿಕಟಪೂರ್ವ ಅಧ್ಯಕ್ಷ ಅರಕಲವಾಡಿ ಮಹೇಶ್, ಗ್ರಾಮಾಂತರ ಮಂಡಲ ಪ್ರಧಾನ ಕಾರ್ಯದರ್ಶಿ ಮಾದಪ್ಪ ಕೊತ್ತಲವಾಡಿ, ಉಪಾಧ್ಯಕ್ಷ ಎಂ.ಎಸ್. ಮಹಾದೇವಸ್ವಾಮಿ, ಕಾರ್ಯದರ್ಶಿ ಮೋಹನ್ ಕುಮಾರ್, ನಾಗರಾಜು ಬಸಪ್ಪನಪಾಳ್ಯ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಎಂ. ಕುಮಾರಸ್ವಾಮಿ, ಡಿ. ಮಂಜು, ಶಕ್ತಿಕೇಂದ್ರ ಅಧ್ಯಕ್ಷ ಶೇಖರ್ ಹಾಗೂ ಇತರರು ಉಪಸ್ಥಿತರಿದ್ದರು.

ಚೇಂಬರ್ ಸಂಸ್ಥೆಯ ರಾಜ್ಯ ಸಮ್ಮೇಳನದಲ್ಲಿ ಶಕ್ತಿಗೆ ಗೌರವ

ಮಡಿಕೇರಿ: ತುಮಕೂರಿನಲ್ಲಿ ಆಯೋಜಿತ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ರಾಜ್ಯ ಸಮ್ಮೇಳನದಲ್ಲಿ ಕೊಡಗು ಜಿಲ್ಲೆಯ 'ಶಕ್ತಿ ಪತ್ರಿಕೆಯ ಸೇವೆಯನ್ನು ಪ್ರಶಂಸಿಸಿ ಸನ್ಮಾನಿಸಲಾಯಿತು

ಅಲ್ಲಿನ ಗಂಗಾಧರಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನಡೆದ ರಾಜ್ಯ ಸಮ್ಮೇಳನ ಹಾಗೂ ತುಮಕೂರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಬೆಳ್ಳಿ ಮಹೋತ್ಸವ ಆಚರಣೆ ಸಂದರ್ಭ ಶಾಸಕ ಜ್ಯೋತಿ ಗಣೇಶ್ ಅವರು ಸಾಧಕರನ್ನು ಗೌರವಿಸಿದರು. 70 ವರ್ಷಗಳ ಇತಿಹಾಸ ಇರುವ 'ಶಕ್ತಿ' ಪತ್ರಿಕೆಯ ಪರವಾಗಿ ಸಂಪಾದಕ ಜಿ ಚಿದ್ವಿಲಾಸ್ ಸನ್ಮಾನ ಸ್ವೀಕರಿಸಿದರು.

ಈ ಸಂದರ್ಭ ಎಫ್.ಕೆ.ಸಿ.ಸಿ.ಐ. ನ ಅಧ್ಯಕ್ಷೆ ಉಮಾರೆಡ್ಡಿ, ಹಿರಿಯ ಉಪಾಧ್ಯಕ್ಷ ಸಾಯಿ ರಾಮ್ ಪ್ರಸಾದ್,ಉಪಾಧ್ಯಕ್ಷ ಶಶಿಧರ್, ಮಾಜಿ ಅಧ್ಯಕ್ಷ ಶಿವಕುಮಾರ್, ತುಮಕೂರು ಚೇಂಬರ್ ಅಧ್ಯಕ್ಷ ಪಾಂಡುರಂಗ, ತುಮಕೂರು ಚೇಂಬರ್ ಪದಾಧಿಕಾರಿ ಹಾಗೂ ಎಫ್.ಕೆ.ಸಿ.ಸಿ.ಐ. ನ ಜಿಲ್ಲಾ ಸಮನ್ವಯ ಸಮಿತಿಯ ಅಧ್ಯಕ್ಷ ಸುಬ್ಬನ್ ಹಿರೇಮಠ್ ವೇದಿಕೆಯಲ್ಲಿದ್ದರು. ಕಾರ್ಯಕ್ರಮದಲ್ಲಿ ಎಲ್ಲಾ ಜಿಲ್ಲಾ ಚೇಂಬರ್ ಅಧ್ಯಕ್ಷರನ್ನು ಗೌರವಿಸಲಾಯಿತು.

ಕೊಡಗು ಜಿಲ್ಲಾ ಚೇಂಬರ್‌ಆಫ್ ಕಾಮರ್ಸ್ ಅಧ್ಯಕ್ಷ ಬಿ. ಆರ್. ನಾಗೇಂದ್ರ ಪ್ರಸಾದ್ ಅವರು ಗೌರವವನ್ನು ಸ್ವೀಕರಿಸಿದರು. ಕೊಡಗು ಜಿಲ್ಲೆಯಿಂದ ಚೇಂಬರ್ ಉಪಾಧ್ಯಕ್ಷ ನವೀನ್ ಅಂಬೆಕಲ್, ರಾಜ್ಯ ಚೇಂಬರ್‌ನಿರ್ದೇಶಕ ಕೆ.ಬಿ.ಗಿರೀಶ್ ಗಣಪತಿ, ಜಿಲ್ಲಾ ಚೇಂಬರ್‌ನಿರ್ದೇಶಕ ದಿನೇಶ್, ಕೊಡ್ಲಿಪೇಟೆ ಚೇಂಬರ್ ಅಧ್ಯಕ್ಷ ಯತೀಶ್, ಮಡಿಕೇರಿ ಚೇಂಬರ್ ಕಾಮರ್ಸ್ ಅಧ್ಯಕ್ಷ ಸಂತೋಷ್ ಅಣ್ವೇಕರ್ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಮಡಿಕೇರಿಯಲ್ಲಿ ನಡೆದ ರಾಜ್ಯ ಸಮ್ಮೇಳನ ಹಾಗೂ ತುಮಕೂರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಬೆಳ್ಳಿ ಮಹೋತ್ಸವ ಆಚರಣೆ ಸಂದರ್ಭದಲ್ಲಿ 70 ವರ್ಷಗಳ ಇತಿಹಾಸ ಇರುವ 'ಶಕ್ತಿ' ಪತ್ರಿಕೆಯ ಪರವಾಗಿ ಸಂಪಾದಕ ಜಿ ಚಿದ್ವಿಲಾಸ್ ಅವರನ್ನು ಶಾಸಕ ಜ್ಯೋತಿ ಗಣೇಶ್ ಪ್ರಶಸ್ತಿ ನೀಡಿ ಗೌರವಿಸಿದರು.

ಸಮಾಚಾರ ಸಣ್ಣದಲ್ಲ

ವಿಶೇಷಚೇತನ ಮಕ್ಕಳಿಗೆ ಅವಕಾಶ ನೀಡಿ

ಕೆ.ಆರ್.ಪೇಟೆ: ದೈಹಿಕ ಮತ್ತು ಮಾನಸಿಕ ವಿಕಲತೆ ಹೊಂದಿರುವ ಮಕ್ಕಳು ಬಗ್ಗೆ ಪಾಲಕರು ಕೀಳರಿಮೆ ಹೊಂದಬಾರದು. ಅವರಲ್ಲಿ ವಿಶೇಷ ಸಾಮರ್ಥ್ಯವಿರುತ್ತದೆ. ಪಾಲಕರು ಇಂತಹ ಮಕ್ಕಳಿಗೆ ಕೇವಲ ಅನುಕಂಪ ತೋರದೇ ಅವಕಾಶಗಳನ್ನು ಕಲ್ಪಿಸುವ ದಿಸೆಯಲ್ಲಿ ಪ್ರಯತ್ನಿಸಬೇಕೆಂದು ಎಂದು ಕಾಪನಹಳ್ಳಿ ಗವಿಮಠ ಪೀಠಧ್ಯಕ್ಷ ಶ್ರೀ ಚನ್ನವಿರ ಮಹಾಸ್ವಾಮಿ ತಿಳಿಸಿದರು. ಪಟ್ಟಣದ ಪುರಸಭಾ ಆವರಣದಲ್ಲಿ ತಾಲ್ಲೂಕಿನ ಶ್ರೀ ರಮಣ ಮಹರ್ಷಿ ಅಕಾಡೆಮಿ ಫಾರ್‌ದಿ ಬ್ಲಾಂಡ್ ವತಿಯಿಂದ ಹಾಗೂ ಸಮುದಾಯ ಆದಾರಿತ ಪುನರ್‌ವಸತಿ ಕೇಂದ್ರ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ನಡೆದ ವಿಶೇಷ ಚೇತನ ಮಕ್ಕಳಿಗೆ ಕ್ರೀಡಾಕೂಟ ಉದ್ಘಾಟನೆ ಹಾಗೂ ವಿಜೇಯಿತ ವಿಶೇಷ ಚೇತನ ಮಕ್ಕಳಿಗೆ ಬಹುಮಾನ ವಿತರಿಸಿ ಮಾತನಾಡಿದರು. ಶ್ರೀ ರಮಣ ಮಹರ್ಷಿ ಅಕಾಡೆಮಿ ಫಾರ್‌ದಿ ಬ್ಲಾಂಡ್ ಕೆ.ಆರ್.ಪೇಟೆ ತಾಲ್ಲೂಕು ಸಂಯೋಜಕ ಹೊನ್ನೇನಹಳ್ಳಿ ಪ್ರತಾಪ್ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಕೆ.ಆರ್.ಪೇಟೆ ತಾಲ್ಲೂಕು ಅಂಗವಿಕಲ ಸಂಘ ಅಧ್ಯಕ್ಷ ಬೂಕನಕೆರೆ ಮಂಜುನಾಥ್, ಮಹಿಳಾ ಮತ್ತು ಮಕ್ಕಳು ಇಲಾಖೆ ಮೇಲ್ವಿಚಾರಕಿ ಶಾಂತವ್ವ, ವಿಶೇಷ ಚೇತನ ಮಕ್ಕಳು ಸೇರಿದಂತೆ ಉಪಸ್ಥಿತರಿದ್ದರು.

ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಜಯಭೇರಿ

ಕೆ.ಆರ್.ಪೇಟೆ: ತಾಲೂಕು ಬೂಕನಕೆರೆ ಹೋಬಳಿ ಬಣ್ಣೇನಹಳ್ಳಿ ಡೇರಿ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ. ಸಂಘದ ಸಭಾಂಗಣದಲ್ಲಿ ಮುಂದಿನ ಐದು ವರ್ಷದ ಆಡಳಿತ ಅವಧಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಶಾಸಕ ಹೆಚ್.ಟಿ ಮಂಜು ಬಣದ ಬೆಂಬಲಿತ ಅಭ್ಯರ್ಥಿಗಳಾದ ಧನಂಜಯ್,ಬಿ.ಜೆ. ರವಿಕುಮಾರ್, ಸಿ. ನಾಗರಾಜು, ವೀಣಾ ಆರ್.ಎಲ್, ರಾಜಮ್ಮ, ನಟೇಶ್, ಜಯಲಕ್ಷ್ಮಿ, ಚಂದ್ರಯ್ಯ, ಪಿಂಜರಿಗೌಡ (8 ಅಭ್ಯರ್ಥಿಗಳು) ಪ್ರಚಂಡ ಜಯಭೇರಿ ಬಾರಿಸಿದ್ದಾರೆ ಮನ್ಮುಲ್ ನಿರ್ದೇಶಕ ಡಾಲು ರವಿ ಹಾಗೂ ಎಂ.ಬಿ ಹರೀಶ್ ಬಣದ ಬೆಂಬಲಿತ ಅಭ್ಯರ್ಥಿಗಳಾದ ದೇವರಾಜೆಗೌಡ ಬಿ.ಕೆ ರಾಮೇಗೌಡ ಗೆಲವು ಸಾಧಿಸಿದ್ದಾರೆ.ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಅಧಿಕಾರಿ ಶೋಭಾ ಕಾರ್ಯನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಶೋಭಾ ಕಾರ್ಯನಿರ್ವಹಿಸಿದರು. ಪಿ.ಎಲ್.ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹಾಲಿ ನಿರ್ದೇಶಕ ಬಣ್ಣೆನಹಳ್ಳಿ ಧನಂಜಯ್ ಅವರು ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡ ಬಿ.ಎಸ್ ಬೋರೇಗೌಡ, ಆನಂದ್, ವಾಟಾಳ್ ನಾಗರಾಜು, ವೆಂಕಟೇಶ್, ಚಲುವರಾಜು, ಉದ್ಯಮಿ ವೆಂಕಟೇಶ್, ಡಾಲಿ ದಿನೇಶ್, ನಟೇಶ್, ರಂಗರಾಜು, ಅಂಗಡಿ ಬಾಲು, ರಾಮು, ಅನಿಲ್, ಜಗದೀಶ್, ಪಾರ್ಥ, ಧರಣಿ, ಗ್ರಾಮಸ್ಥರು ಸೇರಿದಂತೆ ಉಪಸ್ಥಿತರಿದ್ದರು.

ಕೊಣಸಾಲೆಯ ವ್ಯಕ್ತಿ ಆತ್ಮಹತ್ಯೆಗೆ ಶರಣು



ಮದ್ದೂರು: ವ್ಯಕ್ತಿಯೋರ್ವ ಮನನೊಂದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಬೆಸಗರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕೊಣಸಾಲೆ ಗ್ರಾಮದಲ್ಲಿ ಶನಿವಾರ ರಾತ್ರಿ ಜರುಗಿದೆ. ತಾಲೂಕಿನ ಕೊಣಸಾಲೆ ಗ್ರಾಮದ ಕೃಷ್ಣ ಎಂಬುವರ ಪುತ್ರ ಅಭಿಷೇಕ್ 31 ಆತ್ಮಹತ್ಯೆಗೆ ಶರಣಾದ ವ್ಯಕ್ತಿಯಾಗಿದ್ದಾನೆ. ಮೃತ ಅಭಿಷೇಕ್ ದಿನನಿತ್ಯ ಎಳನೀರು ಕುಯ್ಯುವುದಾಗಿ ಅದೇ ಗ್ರಾಮದ ತಿಮ್ಮ ಎಂಬುವರ ಬಳಿ ಸಾಲ ಪಡೆದಿದ್ದು ಸರಿಯಾಗಿ ಕೆಲಸಕ್ಕೆ ಹೋಗದ ಹಿನ್ನೆಲೆಯಲ್ಲಿ ಆ ವ್ಯಕ್ತಿ ರೇಗಾಡಿದ ಹಿನ್ನೆಲೆಯಲ್ಲಿ ಮನನೊಂದು ತನ್ನ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಘಟನಾ ಸ್ಥಳಕ್ಕೆ ಗ್ರಾಮಾಂತರ ವೃತ್ತ ನಿರೀಕ್ಷಕ ನಾರಾಯಣ ಹಾಗೂ ಪಿಎಸ್‌ಐ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಈ ಸಂಬಂಧ ಮೃತರ ಅಜ್ಜಿ ನೀಡಿದ ದೂರಿನ ಮೇರೆಗೆ ಬೆಸಗರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಸತೀಶ ಜಾರಕಿಹೊಳಿ } ಸಚಿವ

ಸಚಿವ ಸಂಪುಟ ವಿಸ್ತರಣೆ ಅಥವಾ ಹಂಚಿಕೆ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಸದ್ಯ ಬಿಡುಗಡೆಯಾಗಿರುವುದು ಮೊದಲ ಪಟ್ಟಿ ಮಾತ್ರ. ಜಿಲ್ಲೆಯ ನಾಯಕರಿಗೆ ಮತ್ತು ಜನರಿಗೆ ಈ ಕುರಿತು ಯಾವುದೇ ಆತಂಕ ಬೇಡ. ಸಚಿವ ಸಂಪುಟದ ಮುಂದಿನ ಪಟ್ಟಿಯಲ್ಲಿ ಬೆಳಗಾವಿ ಜಿಲ್ಲೆಗೆ ಖಂಡಿತವಾಗಿಯೂ ಆದ್ಯತೆ ಸಿಗಲಿದೆ.



ತಿಪ್ಪಯ್ಯನ ಕೆರೆಗೆ ಸಂಸದ ಯದುವೀರ್ ಒಡೆಯರ್ ಭೇಟಿ, ಪರಿಶೀಲನೆ | ಅವೈಜ್ಞಾನಿಕ ಒಳಚರಂಡಿ ವ್ಯವಸ್ಥೆ ಬಗ್ಗೆ ಬೇಸರ

ಚಾಮುಂಡಿಬೆಟ್ಟದ ಪರಿಸರ ಸಂರಕ್ಷಣೆ ಸಂಕಲ್ಪ

ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ತಿಪ್ಪಯ್ಯನ ಕೆರೆಗೆ ಸಂಸದ ಯದುವೀರ್ ಒಡೆಯರ್ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರು: ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ತಿಪ್ಪಯ್ಯನ ಕೆರೆಗೆ ಒಳಚರಂಡಿ ನೀರು ಸೇರಿ ಸಂಪೂರ್ಣ ಮಲೀನಗೊಂಡಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ ಸಂಸದ ಯದುವೀರ್‌ಕೃಷ್ಣದತ್ತ ಚಾಮರಾಜ ಒಡೆಯರ್‌ಅವರು, ಇದಕ್ಕೆ ಶೀಘ್ರದಲ್ಲೇ ಕಾಯಕಲ್ಪ ಕಲ್ಪಿಸುವುದಾಗಿ ಭರವಸೆ ನೀಡಿದರು.

ಪೊಲೀಸ್ ಬಡಾವಣೆಗೆ ಹೊಂದಿಕೊಂಡಿರುವ ಐತಿಹಾಸಿಕ ತಿಪ್ಪಯ್ಯನ ಕೆರೆ ಬಗ್ಗೆ ವ್ಯಾಪಕವಾಗಿ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಭಾನುವಾರ ಕೆರೆ ಬಳಿ ಆಗಮಿಸಿ ಪರಿಶೀಲನೆ ನಡೆಸಿದ ಅವರು, ಕೆರೆಗೆ ಅಕ್ಕಪಕ್ಕದ ಆರೇಳು ಬಡಾವಣೆಗಳ ಒಳಚರಂಡಿಯ ಮಲೀನ ನೀರು ಸೇರುತ್ತಿರುವುದರ ಬಗ್ಗೆ ತೀವ್ರ ಬೇಸರ ಹೊರಹಾಕಿದರು.

ರಿಂಗ್ ರಸ್ತೆಗೆ ತಾಕಿಕೊಂಡಿದ್ದು, ಚಾಮುಂಡಿ ಬೆಟ್ಟದ ಪಕ್ಕದಲ್ಲೇ ಇರುವ ಕೆರೆಯ ಈ ದುಸ್ಥಿತಿ ಬಗ್ಗೆ ಬಡಾವಣೆಯ ನಿವಾಸಿಗಳು ಇಂಚಿಂಚೂ ಮಾಹಿತಿ ನೀಡಿದರು. ಬಡಾವಣೆಯ ನಿರ್ಮಾಣದ ವೇಳೆ ಒಳಚರಂಡಿ ವ್ಯವಸ್ಥೆ ಅನುಷ್ಠಾನ ಸಂದರ್ಭದಲ್ಲಿ ಮಾಡಲಾದ ಅವೈಜ್ಞಾನಿಕ ಕಾಮಗಾರಿ ಹಾಗೂ ಸೆಪ್ಟಿಕ್ ಟ್ಯಾಂಕ್ ನಿಂದಾಗಿ ಇಂದು ಇಡೀ ಕೆರೆ ಮಲೀನಗೊಂಡಿರುವುದರ ಬಗ್ಗೆ ಮಾಹಿತಿ ತಿಳಿದ ಒಡೆಯರ್, ಕೆರೆ ಸಂರಕ್ಷಣೆ ಕುರಿತು ತ್ವರಿತವಾಗಿ ಕ್ರಮ ತೆಗೆದುಕೊಳ್ಳಲಾಗುವುದು. ಅದಕ್ಕೆ ಪೂರಕವಾಗಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಮೂರು ವರ್ಷದ ಹಿಂದೆ ತಿಳಿನೀರಿನಿಂದ ಹೊಳೆಯುತ್ತಿದ್ದ 'ತಿಪ್ಪಯ್ಯನ ಕೆರೆ' ಈಗ ಕತ್ತೆ ಕಿವಿ ಎಂಬ ತೇಲುಕಳೆಯ ತಿಪ್ಪೆಯಾಗಿದೆ. ಜಲಚರಗಳು ಉಸಿರುಗಟ್ಟಿ ಸತ್ತರೆ, ಬಾನಾಡಿಗಳು ಕಾಣದಾಗಿವೆ ಎಂದು ಸ್ಥಳೀಯರು ಸಂಸದರಲ್ಲಿ ದೂರಿದರು.

ಕೆರೆಯತ್ತ ವಿಹಾರ ಬರಬೇಕೆಂಬ ಮನಸು ಮಾಡಿದವರೂ, ಜಲನಿಧಿಯ ಸೌಂದರ್ಯಕ್ಕೆ ಹತ್ತಿರದಲ್ಲೇ ನಿವೇಶನ ಖರೀದಿಸಿ ಮನೆ ಕಟ್ಟಿಸಿದವರ ಪಾಲಿಗೆ ಕೆರೆಯೀಗ ರೌರವ ನರಕ ತೋರಿಸುತ್ತಿದೆ. ಹಂದಿ, ಸೊಳ್ಳೆ ಕಾಟ ಸೇರಿದಂತೆ ರೋಗರುಜಿನಗಳನ್ನೇ ಹೊತ್ತು ಕೂತಿದೆ ಎಂದು ಆರೋಪಿಸಿದರು.

ರಿಂಗ್ ರಸ್ತೆ ಹಾಗೂ ಸರ್ದಾರ್ ವಲ್ಲಭಬಾಯ್ ಪಟೇಲ್ ನಗರದ ಮಧ್ಯೆ ಚಾಚಿರುವ ಕೆರೆಗೆ ನೇರವಾಗಿ ಒಳಚರಂಡಿ ನೀರು ಸೇರುತ್ತಿದೆ. ಮಳೆ ಬಂದು ಕೆರೆಯ ನೀರಿನ ಮಟ್ಟ ಏರಿದರೂ ನೀರು ತಿಳಿಯಾಗಿಲ್ಲ. ಕೊಳಚೆ ನೀರಿನಿಂದ 'ಕತ್ತೆ ಕಿವಿ' ತೇಲುಕಳೆ ತುಂಬಿಹೋಗಿದ್ದು, ಆಟದ ಮೈದಾನದಂತೆ ಕಾಣುತ್ತದೆ ಎಂದರು.

ಈ ಕೆರೆಗೆ ಇದರ ಮೇಲ್ಭಾಗದಲ್ಲಿರುವ 'ಸಾತಿ ಕೆರೆ'ಗೆ ಸಂಪರ್ಕಿಸಿರುವ ರಾಜಕಾಲುವೆಯಲ್ಲಿ ಚರಂಡಿ ನೀರು ಹರಿಯುತ್ತಿದೆ. ಆ ಕೆರೆಯ ರಕ್ಷಣೆಯೂ ಆಗಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಾಜಿ ಶಾಸಕ ಎಲ್. ನಾಗೇಂದ್ರ, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತಕುಮಾರ್‌ಗೌಡ, ಸ್ಥಳೀಯರಾದ ಥಾಮಸ್, ಶಿವಕುಮಾರ್, ಶ್ರೀಲಕ್ಷ್ಮಿ, ಭೋಜಪ್ಪ, ಮಹೇಶ್, ಮಹಾದೇವಪ್ಪ, ಸಿದ್ದರಾಮಪ್ಪ, ಹೊನ್ನಪ್ಪ ಸೇರಿದಂತೆ ನೂರಾರು ಮಂದಿ ಇದ್ದರು.

ಜಲಚರಗಳೇ ನಾಪತ್ತೆ

ಸುಮಾರು 400 ವರ್ಷಗಳ ಹಿಂದೆ ಚಾಮುಂಡಿ ಬೆಟ್ಟದಿಂದ ಹರಿದು ಬರುವ ನೀರನ್ನು ಹಿಡಿದಿಡಲು ಬೆಟ್ಟದ 4 ಕಡೆಯೂ ಒಂದೊಂದು ಕೆರೆಯನ್ನು ನಿರ್ಮಿಸಲಾಗಿತ್ತು. ತಿಪ್ಪರಾಯ ಎಂಬ ಸೇನಾದಂಡನಾಯಕ ತನ್ನ ಕುದುರೆಗಳಿಗೆ ಇಲ್ಲಿ ನೀರು ಕುಡಿಸುತ್ತಿದ್ದುದರಿಂದ ಹಾಗೂ ಅವನೇ ಈ ಕೆರೆ ನಿರ್ವಹಣೆ ಮಾಡಿದ್ದರಿಂದ ಅವನ ಹೆಸರಿನಿಂದಲೇ ಕರೆಯಲಾಗುತ್ತಿದೆ. ತಿಪ್ಪರಾಯನ ಕೆರೆ, ತಿಪ್ಪಯ್ಯನ ಕೆರೆ ಆಗಿದೆ.

ಕೆರೆಯ ಚಿತ್ರಣ:

ಲಲಿತಾದ್ರಿಪುರ ಗ್ರಾಮದ ಸರ್ವೆ ಸಂಖ್ಯೆ 31ರಲ್ಲಿ 6.17 ಎಕರೆ ಹಾಗೂ 30ರಲ್ಲಿ 9.01 ಎಕರೆ ವಿಸ್ತೀರ್ಣವನ್ನು ಹೊಂದಿರುವ ಕೆರೆ, ರಿಂಗ್ ರಸ್ತೆಯ ಪಕ್ಕದಲ್ಲೇ ಇದೆ. ಗಿರಿದರ್ಶಿನಿ ಬಡಾವಣೆ, ಪೊಲೀಸ್ ಬಡಾವಣೆ, ಆಲನಹಳ್ಳಿಯ ಒಳಚರಂಡಿ ನೀರು ರಾಜ ಕಾಲುವೆಯ ಮೂಲಕ ಕೆರೆಯ ಒಡಲು ಸೇರುತ್ತಿದೆ. ಅದಲ್ಲದೆ, ಕೆರೆ ಸಮೀಪದಲ್ಲೇ ಮ್ಯಾನ್ಹೋಲ್‌ಗಳ ಬಾಯಿ ಕಳಚಿದ್ದು, ಹಂದಿಗಳ ಆವಾಸಸ್ಥಾನವಾಗಿದೆ.

ನಗರದ ಪೂರ್ವಭಾಗದ ಬಡಾವಣೆಗಳ ಚರಂಡಿ ನೀರನ್ನು ಸಂಸ್ಕರಿಸುವ ಘಟಕ ತೆರೆಯುವ ಕೆಲಸವನ್ನು ಪಾಲಿಕೆ, ಮುಡಾ ಮಾಡಿಲ್ಲ. ಸಮನ್ವಯದ ಕೊರತೆಯಿಂದ ಕೆರೆಯ ಜೀವ ಹಾರಿಹೋಗಿದೆ.

ಜೀವಕಳೆ ಕಳೆದ ತೇಲುಕಳೆ:

ರಂದೀಪ್ ಜಿಲ್ಲಾಧಿಕಾರಿಯಾಗಿದ್ದಾಗ 2016-17ರಲ್ಲಿ ಆಟೋಮೋಟೀವ್ ಆ್ಯಕ್ಸಿಲ್ ಕಾರ್ಖಾನೆಯ ಸಿಎಸ್‌ಆರ್‌ಹಣದಿಂದ ಕೆರೆಗೆ ಕಾಯಕಲ್ಪ ನೀಡಲಾಗಿತ್ತು. ಹೂಳು ತೆಗೆದು ಏರಿ ಮರು ನಿರ್ಮಿಸಲಾಗಿತ್ತು.

2018ರ ಏಪ್ರಿಲ್ನಲ್ಲಿ ಕೆರೆ ನಿರ್ವಹಣೆಯನ್ನು ಜಿಲ್ಲಾಡಳಿತ ಮೃಗಾಲಯ ಪ್ರಾಧಿಕಾರಕ್ಕೆ ಹಸ್ತಾಂತರಿಸಿತ್ತು. ಅರಣ್ಯೀಕರಣ ಹುಲ್ಲುಗಾವಲು ನಿರ್ಮಾಣವಾಗಿ ಸೌಂದರ್ಯವೂ ಇಮ್ಮಡಿಸಿತ್ತು.

2022ರಲ್ಲಿ ಎಸ್ಟಿಪಿ ಟ್ಯಾಂಕ್‌ಗಳನ್ನು ನಿರ್ಮಿಸಿ ಕೊಳಚೆ ನೀರು ಬರದಿರಲು ಕ್ರಮವಹಿಸುವುದಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಹೇಳಿತ್ತು. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ.

ಸ್ವಚ್ಛ, ಶುದ್ಧ ಪರಿಸರದಿಂದ ಆರೋಗ್ಯ ವೃದ್ಧಿ: ಎಡಿಸಿ

ನಗರದ ಎಂ.ಸಿ.ಎಸ್. ಪ್ರೌಢಶಾಲೆಯಲ್ಲಿಂದು ವಿಶ್ವ ಪರಿಸರ ದಿನಾಚರಣೆ' ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಉದ್ಘಾಟಿಸಿ ಎಡಿಸಿ ಟಿ. ಜವರೇಗೌಡ ಅವರು ಮಾತನಾಡಿದರು.

ಚಾಮರಾಜನಗರ: ಪ್ರಕೃತಿ ಮನುಷ್ಯನ ಎಲ್ಲ ಅವಶ್ಯಕತೆಗಳನ್ನು ಪೂರೈಸುತ್ತದೆ. ನೆಲ, ಜಲ, ಗಾಳಿ ಸ್ವಚ್ಛ ಶುದ್ಧವಾಗಿದ್ದಷ್ಟು ನಮ್ಮ ಅರೋಗ್ಯ ವೃದ್ಧಿಸುತ್ತದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ತಿಳಿಸಿದರು.

ನಗರದ ಸೋಮವಾರಪೇಟೆ ಬಡಾವಣೆಯಲ್ಲಿರುವ ಎಂ.ಸಿ.ಎಸ್. ಪ್ರೌಢಶಾಲೆಯಲ್ಲಿಂದು ಯುವ ವ್ಯವಹಾರಗಳ ಮತ್ತು ಕ್ರೀಡಾ ಸಚಿವಾಲಯ, ಮೈ ಭಾರತ್ ಕೇಂದ್ರ, ಎಂ.ಸಿ.ಎಸ್. ಶಿಕ್ಷಣ ಸಂಸ್ಥೆ ಹಾಗೂ ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ವಿಶ್ವ ಪರಿಸರ ದಿನಾಚರಣೆ' ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಅರೋಗ್ಯವಾಗಿರಲು ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿರಬೇಕು. ನಮ್ಮ ಮನೆಯನ್ನು ಮಾತ್ರ ನಾವು ಸ್ವಚ್ಛವಾಗಿ ಇಟ್ಟುಕೊಂಡರೆ ಸಾಕು, ಮನೆಯ ಹೊರಗಿನ ಪರಿಸರ ಸ್ವಚ್ಛತೆ ಕಾರ್ಯ ನಮ್ಮದಲ್ಲ ಎನ್ನುವ ಭಾವನೆ ನಮ್ಮಲ್ಲಿದೆ ಅದನ್ನು ಬಿಡಬೇಕು. ನಮ್ಮ ಸುತ್ತಲಿನ ಪರಿಸರ ನಮ್ಮದೆ ಎನ್ನುವ ಮನೋಭಾವ ಪ್ರತಿಯೊಬ್ಬರಲ್ಲೂ ಮೂಡಬೇಕು ಎಂದರು.

ಮನುಷ್ಯನ ದುರಾಸೆಯಿಂದ ಭೂಮಿಯಲ್ಲಿರುವ ಖನಿಜಗಳನ್ನು ಹೊರತೆಗೆದು ಪ್ರಕೃತಿಗೆ ಹಾನಿ ಮಾಡುತ್ತಿದ್ದೇವೆ. ಇದು ಕಡಿಮೆಯಾಗಬೇಕು, ಸ್ವಚ್ಛ ಪರಿಸರದಿಂದ ನಾವು ಆರೋಗ್ಯವಾಗಿ ಬದುಕಬೇಕು. ಮುಂದಿನ ಪೀಳಿಗೆಗೂ ಪರಿಸರವನ್ನು ಸ್ವಚ್ಛ ಮತ್ತು ಶುದ್ಧವಾಗಿಟ್ಟುಕೊಳ್ಳಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರು ತಿಳಿಸಿದರು. ಕುದೇರು ಚಾಮುಲ್ ನಿರ್ದೇಶಕ ಎಸ್. ಬಸವರಾಜು ಅವರು ಮಾತನಾಡಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಏರ್ಪಡಿಸಲಾಗಿದ್ದ ಚಿತ್ರಕಲೆ, ರಸಪ್ರಶ್ನೆ, ಪ್ರಬಂಧ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ. ಬಂಗಾರು ಅವರು ಬಹುಮಾನ ವಿತರಿಸಿ ಶುಭ ಹಾರೈಸಿದರು.

ಎಂಸಿಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಕೆ. ಶಶಿಧರ್ಮೂರ್ತಿ, ಆಡಳಿತ ಅಧಿಕಾರಿ ಎಂ. ನಾಗರಾಜು, ಮುಖ್ಯಶಿಕ್ಷಕ ಎಚ್.ಎಂ ಮಹಾದೇವಸ್ವಾಮಿ, ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ ರಂಗರಾಜು, ವಕೀಲರಾದ ಎನ್. ಮಹೇಶ್, ಪರಿಸರ ಪ್ರೇಮಿ ಹಾಗೂ ಸಮಾಜ ಸೇವಕ ದಿಲೀಪ್ ಕುದರ್, ಚಿತ್ರಕಲಾ ಶಿಕ್ಷಕ ಸಿ.ಎಂ ಸಂಪತ್ತುಕುಮಾರ್, ಮೈ ಭಾರತ್ ಕೇಂದ್ರದ ಸಹನಾ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

22ರಂದು ಜೆಡಿಎಸ್ ಕಾರ್ಯಕರ್ತರ ಸಮಾವೇಶ

ಪಟ್ಟಣದ ಬಸವೇಶ್ವರನಗರದಲ್ಲಿರುವ ಜೆಡಿಎಸ್ ಕಚೇರಿಯ ಆವರಣದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇನಹಳ್ಳಿ ಎಂ.ಮೋಹನ್ ಅವರು ಮಾತನಾಡಿದರು.

ಕೆ.ಆರ್.ಪೇಟೆ: ಕ್ಷೇತ್ರದ ಜನಪ್ರಿಯ ಶಾಸಕರಾದ ಎಚ್.ಟಿ.ಮಂಜಣ್ಣ ಅವರನ್ನು ಮುಂಬರುವ 2028ಕ್ಕೂ ಮತ್ತೊಮ್ಮೆ ಶಾಸಕರನ್ನಾಗಿ ಮಾಡುವುದು ತಾಲೂಕಿನ ನಿಷ್ಠಾವಂತ ಜೆಡಿಎಸ್ ಕಾರ್ಯಕರ್ತರೆಲ್ಲರ ಒಮ್ಮತಾಭಿಪ್ರಾಯವಾಗಿದೆ ಅದಕ್ಕಾಗಿ ಈಗಿನಿಂದಲೇ ಪಕ್ಷವನ್ನು ಸಂಘಟಿಸುವ ಸಲುವಾಗಿ ಇದೇ ಜೂ.22 ಹಾಗೂ 23ರಂದು ಪಟ್ಟಣದ ಪುರಸಭಾ ಆವರಣದ ಮೈದಾನದಲ್ಲಿ ತಾಲೂಕು ಮಟ್ಟದ ಬೃಹತ್ ಜೆಡಿಎಸ್ ಕಾರ್ಯಕರ್ತರ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇನಹಳ್ಳಿ ಎಂ. ಮೋಹನ್ ತಿಳಿಸಿದರು.

ಅವರು ಪಟ್ಟಣದ ಬಸವೇಶ್ವರನಗರದಲ್ಲಿರುವ ಜೆಡಿಎಸ್ ಕಚೇರಿಯ ಆವರಣದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜೂ.22ರ ಸಮಾವೇಶಕ್ಕೆ ಕನಿಷ್ಠ 40ಸಾವಿರ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು. ಜೂ.22ರಂದು ನಡೆಯುವ ಜೆಡಿಎಸ್ ಕಾರ್ಯಕರ್ತರ ಸಮಾವೇಶ ದಲ್ಲಿ ರೈತರಿಗೆ ತೆಂಗಿನ ಸಸಿಗಳು ಹಾಗೂ ವಿವಿಧ ಬಗೆಯ ಹೂವು ಮತ್ತು ಹಣ್ಣಿನ ಸಸಿಗಳನ್ನು ವಿತರಣೆ ಮಾಡಲಾಗುವುದು. ಸಮಾವೇಶವನ್ನು ರಾಜ್ಯ ಯುವ ಜೆಡಿಎಸ್ ಅಧ್ಯಕ್ಷ ನಿಖಿಲ್ಕುಮಾರಸ್ವಾಮಿ ಉದ್ಘಾಟನೆ ಮಾಡುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್ಗೌಡ, ಚನ್ನರಾಯಪಟ್ಟಣ ಶಾಸಕ ಸಿ.ಎನ್.ಬಾಲಕೃಷ್ಣ, ಹಾಸನ ಶಾಸಕ ಸ್ವರೂಪ್ ಪ್ರಕಾಶ್, ನಾಗಮಂಗಲ ಮಾಜಿ ಶಾಸಕ ಕೆ.ಸುರೇಶ್ಗೌಡ, ಮಳವಳ್ಳಿ ಮಾಜಿ ಶಾಸಕ ಡಾ.ಕೆ.ಅನ್ನಧಾನಿ ಸೇರಿದಂತೆ ವಿವಿಧ ಗಣ್ಯರು ಭಾಗವಹಿಸುವರು.

ಪೂರ್ವಭಾವಿ ಸಭೆಯಲ್ಲಿ ತಾಲೂಕು ಜೆಡಿಎಸ್ ಪಕ್ಷದ ಕಾರ್ಯಾಧ್ಯಕ್ಷರಾದ ವಳಗೆರೆ ಮೆಣಸ ಮಹಾದೇವೇಗೌಡ, ಗೌರವಾಧ್ಯಕ್ಷ ತೋಟಪ್ಪಶೆಟ್ಟಿ, ಜೆಡಿಎಸ್ ರಾಜ್ಯ ಪರಿಷತ್ ಸದಸ್ಯ ಅಕ್ಕಿಹೆಬ್ಬಾಳು ರಘುಸೇರಿದಂತೆ ಸುಮಾರು ಎರಡು ಸಾವಿರಕ್ಕೂ ಅಧಿಕ ಕಾರ್ಯಕರ್ತರು ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದರು.

ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿ: ಸಿದ್ದಲಿಂಗಶ್ರೀ

ತಿ.ನರಸೀಪುರ: ಶೈಕ್ಷಣಿಕ ಅರ್ಹತೆಯೊಂದೇ ವ್ಯಕ್ತಿಯ ಸಾಧನೆಗೆ ಮಾನದಂಡವಾಗುವಲ್ಲ. ಸಂಸ್ಕಾರಯುಕ್ತ ನಡತೆ, ಉತ್ತಮ ಗುಣಗಳು ಕೂಡ ಒಬ್ಬ ವ್ಯಕ್ತಿಯನ್ನು ಪರಿಪೂರ್ಣವಾಗಿಸುತ್ತದೆ. ಹಾಗಾಗಿ ಪೋಷಕರು ತಮ್ಮ ಮಕ್ಕಳನ್ನು ಕೇವಲ ಅಂಕಗಳಿಕೆಗಾಗಿ ಪೀಡಿಸಬಾರದು ಎಂದು ಶ್ರೀ ಮದ್ವಾಟಾಳು ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸಲಹೆ ನೀಡಿದರು. ತಾಲೂಕಿನ ಹೊಸೂರುಹುಂಡಿ ಗ್ರಾಮದ ಮಠದಲ್ಲಿ ವೀರಶೈವ ಲಿಂಗಾಯತ ಸಮಾನ ಮನಸ್ಕರ ವೇದಿಕೆ ವತಿಯಿಂದ 2025-26ಸಾಲಿನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು. ಸುತ್ತೂರು ಕ್ಷೇತ್ರದ ಸಹಾಯಕ ಆಡಳಿತಾಧಿಕಾರಿ ತ್ರಿಪುರಾಟತಕ ಅವರು ಮಾತನಾಡಿದರು. ಇದೇ ವೇಳೆ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಹೊಸೂರು ಮಠದ ಶ್ರೀ ರಾಜಶೇಖರ ಸ್ವಾಮೀಜಿ, ನೆರಗ್ಯಾತನಹಳ್ಳಿ ಇಮ್ಮಡಿ ಶಿವಕುಮಾರ ಸ್ವಾಮೀಜಿ, ಬಸವ ಬಳಗದ ನಿಕಟ ಪೂರ್ವ ಜಿಲ್ಲಾಧ್ಯಕ್ಷ ಪ್ರದೀಪ್ ಕುಮಾರ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಸಿ.ಎಂ.ಪ್ರಕಾಶ್, ತಾಪಂ ಮಾಜಿ ಸದಸ್ಯ ಸೀಹಳ್ಳಿ ಗುರುಮೂರ್ತಿ ಹಾಜರಿದ್ದರು.

ಯುಜಿಡಿ ಸಂಪರ್ಕ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಮದ್ದೂರ ನಗರವ್ಯಾಪ್ತಿಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿ ಯನ್ನು ಶಾಸಕ ಕೆ.ಎಂ ಉದಯ ಅಧಿಕಾರಗಳೊಟ್ಟಿಗೆ ಪರಿಶೀಲನೆ ನಡೆಸಿ ಸಾರ್ವಜನಿಕ ರಿಂದ ಮಾಹಿತಿ ಪಡೆದರು.

ಮದ್ದೂರು: ನಗರ ವ್ಯಾಪ್ತಿಯಲ್ಲಿ ಕಂಡು ಬರುತ್ತಿರುವ ಯು.ಜಿ.ಡಿ ಸಂಪರ್ಕ ಹಾಗೂ ಮ್ಯಾನ್ ಹೋಲ್ ದುರಸ್ತಿ ಕಾರ್ಯಕ್ಕೆ ಅಗತ್ಯ ಕ್ರಮವಹಿಸುವಂತೆ ತಪ್ಪಿದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸುವುದಾಗಿ ಶಾಸಕ ಕೆ.ಎಂ ಉದಯ ಎಚ್ಚರಿಕೆ ನೀಡಿದ್ದಾರೆ.

ನಗರ ವ್ಯಾಪ್ತಿಯ ಗೊರವನಹಳ್ಳಿ ಮಾರ್ಗದಲ್ಲಿ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲನೆ ಮತ್ತು ಸ್ಥಳೀಯ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಬಳಿಕ ಮಾತನಾಡಿದರು.

ಕಳೆದ ಹಲವು ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿರುವ ಯು.ಜಿ ಡಿ ಸಂಪರ್ಕ ಹಾಗು ಮ್ಯಾನ್ ಹೋಲ್ ದುರಸ್ತಿ ಕಾರ್ಯಕ್ಕೆ ಶಾಶ್ವತ ಯೋಜನೆಯನ್ನು ರೂಪಿಸಬೇಕೆಂಬ ನಿಟ್ಟಿನಲ್ಲಿ ಈಗಾಗಲೇ ಸಂಬಅಧಿಸಿದ ಅಧಿಕಾರಿಗಳಿಂದ ಮಾಹಿತಿ ಪಡೆದು ಅಗತ್ಯ ರೂಪು-ರೇಷೆ ಸಿದ್ದಪಡಿಸಿರುವುದಾಗಿ ಹೇಳಿದರು.

ಈ ಹಿಂದೆ ನಡೆದ ಯುಜಿಡಿ ಸಂಪರ್ಕದ ಅವೈಜ್ಞಾನಿಕ ಕಾಮಗಾರಿಯಿಂದಾಗಿ ತ್ಯಾಜ್ಯ ನೀರು ಕೆಮ್ಮಣ್ಣು ನಾಲೆಗೆ ಸೇರ್ಪಡೆಗೊಂಡು ನೀರು ಕಲುಷಿತ ಗೊಳ್ಳುವ ಜೊತೆಗೆ ನಾಲೆಯಲ್ಲಿ ತ್ಯಾಜ್ಯ ಮತ್ತು ಹೂಳು ತುಂಬಿಕೊಂಡು ಕೊನೆ ಭಾಗದ ರೈತರ ಜಮೀನುಗಳಿಗೆ ಸಮರ್ಪಕವಾಗಿ ಹರಿಯದೆ ಹಲವು ಸಮಸ್ಯೆಗಳನ್ನು ಎದರಿಸುತ್ತಿದ್ದರು. ತಾವು ಶಾಸಕರಾದ ಬಳಿಕ ಯು.ಜಿ.ಡಿ ಸಂಪರ್ಕದ ಕಾಮಗಾರಿಗೆ ಮತ್ತು ಕೆಮ್ಮಣ್ಣು ನಾಲೆಗೆ ಶಾಶ್ವತ ಯೋಜನೆಯನ್ನು ರೂಪಿಸಬೇಕೆಂಬ ನಿಟ್ಟಿನಲ್ಲಿ ಸುಮಾರು 100 ಕೋಟಿಗೂ ಹೆಚ್ಚು ಅನುದಾನವನ್ನು ತಂದು ಶಾಶ್ವತ ಯೋಜನೆಯನ್ನು ಕಲ್ಪಿಸಿ ಈ ಭಾಗದ ರೈತರಿಗೆ ಅನುಕೂಲ ಕಲ್ಪಿಸಿದ್ದು ಮತ್ತು ಮುಂದಿನ ಮೂರು ತಿಂಗಳಲ್ಲಿ ಯುಜಿಡಿ ಸಂಪರ್ಕದ ಕಾಮಗಾರಿಗೆ ಶಾಶ್ವತ ಯೋಜನೆ ರೂಪಿಸಿ ಬಹುದಿನದ ಸಮಸ್ಯೆಗೆ ಪರಿಹಾರ ಕಂಡುಕೊಂಡಿರುವುದಾಗಿ ತಿಳಿಸಿದರು. ಈ ವೇಳೆ ನಗರಸಭೆ ಮಾಜಿ ಸದಸ್ಯ ಸಚಿನ್ ಪೌರಾಯುಕ್ತೆ ರಾಧಿಕಾ, ಒಳಚರಂಡಿ ವಿಭಾಗದ .ಎ.ಇ.ಇ ನಲಪಾಡ್, ಹನುಮಂತು, ಕಂದಾಯ ನಿರೀಕ್ಷಕ ಪುಟ್ಟಸ್ವಾಮಿ, ಲೋಕೇಶ್ ಇತರರಿದ್ದರು.

ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಜಿಎಸ್ಟಿ, ಆದಾಯ ತೆರಿಗೆ ಕುರಿತ ಕಾರ್ಯಕ್ರಮ

ರೈತರ ಬದುಕಿಗೆ ಸಹಕಾರ ಸಂಘಗಳು ಬೆನ್ನಲುಬು: ರಾಬಿನ್ ದೇವಯ್ಯ ಬಣ್ಣನೆ

ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಜಿಎಸ್ಟಿ, ಆದಾಯ ತೆರಿಗೆ ಕುರಿತ ಕಾರ್ಯಕ್ರಮವನ್ನು ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ ಅವರು ಉದ್ಘಾಟಿಸಿದರು.

ಮಡಿಕೇರಿ: ಸಹಕಾರ ಕ್ಷೇತ್ರ ರೈತರ ಬೆನ್ನುಲುಬಾಗಿದ್ದು, ಇಂತಹ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ತಮ್ಮ ಕೆಲಸವನ್ನು ದೇಶ ಸೇವೆ ಎಂದು ಅರಿತುಕೊಂಡು ತೃಪ್ತಿದಾಯಕವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ ಕರೆ ನೀಡಿದರು.

ಕರ್ನಾಟಕ ರಾಜ್ಯ ಸಹಕಾರ ಮಾಹಾ ಮಂಡಳ ಬೆಂಗಳೂರು, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಪ್ಯಾಕ್ಸ್, ಪಿಕಾರ್ಡ್ ಬ್ಯಾಂಕ್, ಎಪಿಸಿಎಂಎಸ್, ಜೇನು ಸಹಕಾರ ಸಂಘ, ಪತ್ತಿನ ಹಾಗೂ ಮಾರಾಟ ಸಹಕಾರ ಸಂಘಗಳ ಲೆಕ್ಕಿಗರು, ಸಹಾಯಕ ಸಿಬ್ಬಂದಿಗಳಿಗೆ ಜಿಎಸ್ಟಿ ಮತ್ತು ಆದಾಯ ತೆರಿಗೆ ಕುರಿತು ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಶಿಕ್ಷಣ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಪಿಯು.ರಾಬಿನ್ ದೇವಯ್ಯ, ಮೊಟ್ಟ ಮೊದಲು ಗದಗ ಜಿಲ್ಲೆಯಲ್ಲಿ ಆರಂಭ ಕಂಡ ಸಹಕಾರ ಕ್ಷೇತ್ರ ಇಂದು ಬೃಹತ್ತಾಗಿ ಬೆಳೆದಿದ್ದು, ದೇಶ ವ್ಯಾಪಿ ಕಟ್ಟ ಕಡೆಯ ರೈತನನ್ನು ತಲುಪಲು ಸಾಧ್ಯವಾಗಿದೆ. ಕೇಂದ್ರ ಸರಕಾರ ಕೂಡ ರೈತರ ಅಭಿವೃದ್ದಿಗಾಗಿ ಸಹಕಾರ ಖಾತೆಯನ್ನು ಸೃಷ್ಟಿಸಿದ್ದು, 5 ವರ್ಷಗಳನ್ನು ಪೂರೈಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಹಕಾರ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು, ತಿದ್ದುಪಡಿಗಳು, ನೀತಿ ನಿಯಮ, ಕಾನೂನುಗಳನ್ನು ಆಯಾ ಕಾಲಗಟ್ಟದಲ್ಲಿ ಮಾರ್ಪಾಡು ಮಾಡಲಾಗುತ್ತದೆ. ಇಂತಹ ವಿಚಾರಗಳ ಕುರಿತು ಸಹಕಾರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಸಿಬ್ಬಂದಿಗಳು ಅರಿತುಕೊಳ್ಳುವುದು ಅತೀ ಅವಶ್ಯವಾಗಿದೆ ಎಂದು ಹೇಳಿದರು. ಇದನ್ನು ನಿಮ್ಮ ಕೆಳ ಹಂತದ ಸಿಬ್ಬಂದಿಗಳಿಗೂ ಮನವರಿಕೆ ಹಾಗೂ ಅರಿವು ಮೂಡಿಸುವ ಕೆಲಸವೂ ನಿಮ್ಮದಾಗಿದೆ. ರೈತರಿಗೆ ಈ ಕುರಿತು ಮಾಹಿತಿ ನೀಡುವ ಉತ್ತರದಾಯಿತ್ವ ಕೂಡ ನಿಮ್ಮ ಮೇಲಿದೆ ಎಂದು ಹೇಳಿದರು.

ದೇಶದ ಗಡಿಯಲ್ಲಿ ನಿಂತು ದೇಶ ರಕ್ಷಣೆ ಮಾಡುವ ಅವಕಾಶ ಎಲ್ಲರಿಗೂ ದೊರಕಲಾರದು. ಆದರೆ ತಾವು ಮಾಡುವ ಕೆಲಸವೂ ದೇಶ ಸೇವೆ ಎಂದು ಅರಿತುಕೊಂಡು ತೃಪ್ತಿದಾಯಕ ಸೇವೆಯನ್ನು ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಬೇಕು. ಇದರಿಂದ ಸೇವಾ ನಿವೃತ್ತಿಯ ಬಳಿಕವೂ ಆತ್ಮ ತೃಪ್ತಿ ಇರಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಜಿಲ್ಲಾ ಕೇಂದ್ರ ಬ್ಯಾಂಕ್ ಮತ್ತು ಜಿಲ್ಲಾ ಯೂನಿಯನ್ ಮೂಲಕ ಉತ್ತಮ ಸಹಕಾರ ಸಂಘಗಳಿಗೆ ಪ್ರತಿ ವರ್ಷ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಇಂತಹ ಪ್ರತಿಷ್ಠಿತ ಪ್ರಶಸ್ತಿ ಪಡೆಯಲು ಅಲ್ಲಿನ ಸಿಬ್ಬಂದಿಗಳ ಅಳಿಲು ಸೇವೆಯೂ ಮುಖ್ಯವಾಗುತ್ತದೆ ಎಂಬುದನ್ನು ನೆನಪಿಡಬೇಕು ಎಂದು ಸಲಹೆ ನೀಡಿದರು.

ಸಹಕಾರ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು, ತಿದ್ದುಪಡಿಗಳು, ನೀತಿ ನಿಯಮ, ಕಾನೂನುಗಳನ್ನು ಆಯಾ ಕಾಲಗಟ್ಟದಲ್ಲಿ ಮಾರ್ಪಾಡು ಮಾಡಲಾಗುತ್ತದೆ. ಇಂತಹ ವಿಚಾರಗಳ ಕುರಿತು ಸಹಕಾರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಸಿಬ್ಬಂದಿಗಳು ಅರಿತುಕೊಳ್ಳುವುದು ಅತೀ ಅವಶ್ಯವಾಗಿದೆ.

-ಪಿ.ಯು.ರಾಬಿನ್ ದೇವಯ್ಯ, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ

ಅತಿಥಿ ಉಪನ್ಯಾಸಕ ಹಾಗೂ ಹಾಸನದ ಸನ್ನದ್ದು ಲೆಕ್ಕಿಗರಾದ ಸಿ.ಎ. ಶಂಭುಲಿಅಗಪ್ಪ ಅವರು ಜಿಎಸ್ಟಿ, ಆದಾಯ ತೆರಿಗೆ ವಿಚಾರಗಳ ಕುರಿತು ಉಪನ್ಯಾಸ ನೀಡಿದರು. 2017ರಿಂದ ದೇಶದಲ್ಲಿ ಏಕರೂಪದ ತೆರಿಗೆ ಎಂಬ ನೀತಿಯ ಅಡಿಯಲ್ಲಿ ಜಿಎಸ್ಟಿಯನ್ನು ಜಾರಿಗೆ ತರಲಾಗಿದೆ. ಈ ನಿಯಮ ರೂಪಿಸುವ ಸಂದರ್ಭ ಕನಿಷ್ಟ 6 ಸಾವಿರ ತಿದ್ದುಪಡಿಗಳನ್ನು ಮಾಡಲಾಗಿದೆ. ಈ ಕುರಿತು ಸಂಪೂರ್ಣ ಮಾಹಿತಿ ಪಡೆದುಕೊಳ್ಳುವುದು ಕಷ್ಟಸಾಧ್ಯವಾದರೂ ಇದರ ಬಗ್ಗೆ ಸಹಕಾರ ಕ್ಷೇತ್ರದ ಪ್ರತಿ ಸಿಬ್ಬಂದಿಯೂ ಕನಿಷ್ಟ ಮಾಹಿತಿಯನ್ನು ಕಡ್ಡಾಯವಾಗಿ ಹೊಂದಿರಬೇಕು ಎಂದು ಹೇಳಿದರು.

2010ರಲ್ಲಿ ಜಾರಿಯಲ್ಲಿದ್ದ 'ವ್ಯಾಟ್ ತೆರಿಗೆ ಪದ್ಧತಿ' ಇಂದು ರದ್ದುಗೊಂಡಿದ್ದು, ಜಿಎಸ್ಟಿ ರೂಪದಲ್ಲಿ ಹೊಸ ತೆರಿಗೆ ನೀತಿ ಜಾರಿಯಲ್ಲಿದೆ. ಪೆಟ್ರೋಲಿಯಂ ಮತ್ತು ಮಾನವನ ಬಳಕೆಯ ಮದ್ಯವನ್ನು ಮಾತ್ರವೇ ಜಿಎಸ್ಟಿ ಇಂದ ಹೊರಗಿಡಲಾಗಿದ್ದು, ಉಳಿದಂತೆ ಎಲ್ಲವೂ ಜಿಎಸ್ಟಿ ವ್ಯಾಪ್ತಿಗೆ ಒಳಪಡುತ್ತದೆ ಎಂದು ವಿವರಿಸಿದರು. ಸಹಕಾರ ಸಂಸ್ಥೆ ರೈತ ಉಪಯೋಗಿ ವಸ್ತುಗಳನ್ನು ಡೀಲರ್ಗಳಿಂದ ಖರೀದಿಸುವ ಸಂದರ್ಭ ಎಸ್ಜಿಎಸ್ಟಿ, ಸಿಜಿಎಸ್ಟಿ ಸಹಿತ ಇನ್ವೈಸ್ ಬಿಲ್ ಹೊಂದುವುದು ಕಡ್ಡಾಯವಾಗಿದೆ. ಇಲ್ಲವಾದಲ್ಲಿ ಸಹಕಾರ ಸಂಸ್ಥೆಗಳು ತೆರಿಗೆಯ ನಷ್ಟವನ್ನು ಎದುರಿಸಬೇಕಾಗುತ್ತದೆ. ಜಿಎಸ್ಟಿ ನೋಂದಾಯಿತ ಡೀಲರ್ಗಳಿಂದ ಮಾತ್ರವೇ ಖರೀದಿ ವ್ಯವಹಾರ ನಡೆಸಬೇಕು. ಈ ನಿಟ್ಟಿನಲ್ಲಿ ಅಗತ್ಯವಾಗಿ ಜಾಗೃತಿ ವಹಿಸಬೇಕು ಎಂದು ಸಲಹೆ ನೀಡಿದರು.

ಇನ್ಪುಟ್ ಟ್ಯಾಕ್ಸ್, ಔಟ್ಪುಟ್ ಟ್ಯಾಕ್ಸ್, ಔಟ್ಪುಟ್ ಟ್ಯಾಕ್ಸ್ ಕ್ರೆಡಿಟ್, ರಿವರ್ಸ್ ಚಾರ್ಜ್ ಮೆಕಾನಿಸಂ ಮತ್ತಿತ್ತರ ವಿಚಾರಗಳ ಕುರಿತು ಸಹಕಾರ ಸಂಸ್ಥೆ ಸಿಬ್ಬಂದಿಗಳು ಅರಿವು ಹೊಂದಿರಬೇಕು. ಇಲ್ಲವಾದಲ್ಲಿ ಜಿಎಸ್ಟಿ ಪದ್ಧತಿಯ ಲಾಭದಿಂದ ಸಹಕಾರ ಸಂಸ್ಥೆಗಳು ಹೊರಗೆ ಉಳಿದು ಬಿಡುತ್ತವೆ ಎಂದು ಎಚ್ಚರಿಸಿದರು. ಸಹಕಾರ ಸಂಸ್ಥೆಗಳು 'ವಾರ್ಷಿಕ ಪಾವತಿ' ಕುರಿತು ಕೊನೆ ದಿನದವರೆಗೆ ಕಾಯಬಾರದು. ಸೂಕ್ತ ಸಮಯದಲ್ಲಿ ಎಲ್ಲಾ ಪಾವತಿಗಳನ್ನು ಪೂರ್ಣಗೊಳಿಸಬೇಕು. ಇದರಿಂದ ಪ್ರತಿ ದಿನದ ದುಬಾರಿ ದಂಡ ಮೊತ್ತದಿಂದ ಪಾರಾಗಲು ಸಹಾಯವಾಗಲಿದೆ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರುಗಳಾದ ಎ. ಎಸ್. ಶ್ಯಾಂಚಂದ್ರ, ಎಂ.ಎಂ. ಶ್ಯಾಮಲ, ಎಂ.ಟಿ. ಸುಬ್ಬಯ್ಯ, ಜಿಲ್ಲಾ ಸಹಕಾರ ಯೂನಿಯನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯೋಗೇಂದ್ರ, ನಾಯಕ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಸಚಿವ ಖರ್ಗೆ ವಿರುದ್ಧ ಅವಹೇಳನಕಾರಿ ಕಮೆಂಟ್: ಬಂಧನ

ಕಾರ್ಕಳ: ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಫೇಸ್‌ಬುಕ್‌ನಲ್ಲಿ ಜಾತಿ ನಿಂದನೆ ಹಾಗೂ ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ಕಾರ್ಕಳದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಕೆರ್ವಾಶೆ ಗ್ರಾಮದ ನಲ್ಕೆದ ಬೆಟ್ಟು ನಿವಾಸಿ ಸುಧೀರ್ ಬಂಗೇರ (48) ಬಂಧಿತ ಆರೋಪಿ. ನಿಟ್ಟೆ ಗ್ರಾಮದ ಅತ್ತೂರು ಚೇತನಹಳ್ಳಿಯ ನಿವಾಸಿ ಸುರೇಶ್ ಎಂಬುವರು ಜೂ.7 ರಂದು ತಮ್ಮ ಮೊಬೈಲ್‌ನಲ್ಲಿ ಫೇಸ್‌ಬುಕ್ ನೋಡುತ್ತಿದ್ದಾಗ, ಫೆಅಖುಬುಅ KARLA ಎಂಬ ಫೇಸ್ ಬುಕ್ ಪೇಜ್‌ನಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಫೋಟೊ ಇರುವ ಪೋಸ್ಟ್ ಒಂದನ್ನು ಗಮನಿಸಿದ್ದಾರೆ. ಆ ಪೋಸ್ಟ್‌ನಲ್ಲಿ ಆರ್.ಎಸ್.ಎಸ್ ಇನ್ನು ಎರಡು ವರ್ಷ ಅವಧಿಯಲ್ಲಿ ಕೋಮುವಾದವನ್ನು ಉಸಿರಾ ಡುವುದಿಲ್ಲ. ಕಾರಣ ಗೃಹಮಂತ್ರಿ ಸ್ಥಾನದಲ್ಲಿ ಸೌಮ್ಯ ಸ್ವಭಾವದ ಸಚಿವರಿಲ್ಲ. ಪ್ರಿಯಾಂಕ್ ಖರ್ಗೆ ಎಂದು ಬರೆಯ ಲಾಗಿತ್ತು. ಈ ಪೋಸ್ಟ್‌ಗೆ ಜೂ.6 ರಂದು ಪ್ರತಿಕ್ರಿಯಿಸಿದ್ದ ಆರೋಪಿ ಸುಧೀರ್ ಬಂಗೇರ, ಒಬ್ಬ ದಲಿತ ಮಂತ್ರಿಯವರ ವಿರುದ್ಧ ಅತ್ಯಂತ ಅವಹೇ ಳನಕಾರಿಯಾಗಿ ಕಮೆಂಟ್ ಮಾಡಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕಳೆದ 6 ತಿಂಗಳಲ್ಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ 6 ಮಂದಿ ಸಾವು, 8 ವರ್ಷಗಳಲ್ಲಿ 91 ಮಂದಿ ಬಲಿ

ಕೊಡಗಿನಲ್ಲಿ ನಿಲ್ಲದ ಕಾಡಾನೆ-ಮಾನವ ಸಂಘರ್ಷ

ಅನಿಲ್ ಎಚ್.ಟಿ. ಮಡಿಕೇರಿ:

ಕೊಡಗು ಜಿಲ್ಲೆ ಪ್ರಕೃತ್ತಿ ಸೌಂದರ್ಯಕ್ಕೆ ಹೆಸರಾದ ಜಿಲ್ಲೆ. ಪ್ರಕೃತಿ ಎಂದ ಮೇಲೆ ನಿಸರ್ಗದೊಳಗಿನ ವನ್ಯಜೀವಿಗಳು ಕೂಡ ಇಲ್ಲಿನ ಸದಸ್ಯರೇ. ಆಗಾಗ್ಗೆ ಮಾನವರ ಮೇಲೆ ಆನೆಗಳು ದಾಳಿ ನಡೆಸಿ ಪ್ರಾಣ ಹರಣ ಮಾಡುವು ಸಾಮಾನ್ಯ. ಜಿಲ್ಲೆಯಲ್ಲಿ ಕಾಡಾನೆ- ಮಾನವನ ನಡುವಿನ ಸಂಘರ್ಷಕ್ಕೆ ಅಂತ್ಯವೇ ಇಲ್ಲದಂತಾಗಿದೆ. ಕಾಡಾನೆಗಳು ಇಲ್ಲದ ಕಾಫಿ ತೋಟ, ಆನೆ ದಾಳಿಯಿಲ್ಲದ ಗ್ರಾಮಗಳೇ ಇಲ್ಲ ಎಂಬಂಥ ಪರಿಸ್ಥಿತಿ ಕೊಡಗಿನಲ್ಲಿದೆ.

ಅನೇಕ ತೋಟಗಳಲ್ಲಿ ವರ್ಷಾ ನುಗಟ್ಟಲೆಯಿಂದ ಬೀಡುಬಿಟ್ಟ ಕಾಡಾನೆಗಳು ಇಲ್ಲಿಯೇ ಮರಿಹಾಕಿವೆ. ಈ ಆನೆ ಮರಿಗಳು ಕಾಡನ್ನೇ ನೋಡದೇ ತೋಟದಲ್ಲಿ ಬೆಳೆಯುತ್ತಿವೆ. ಹೆಸರಿಗೆ ಮಾತ್ರ ಇವು ಕಾಡಾನೆಗಳು.. ಆದರೆ ಇವುಗಳು ಕಾಡು ನೋಡಿಯೇ ಇಲ್ಲದಂಥ ಸ್ಥಿತಿಯಲ್ಲಿದೆ. ಕಾಫಿ ತೋಟಗಳಲ್ಲಿ ದೊರಕುವ ಹಲಸು, ಬಿದಿರು, ಕೆರೆಯಲ್ಲಿನ ನೀರು, ಸೊಪ್ಪು ತಿಂದು ಕುಡಿದು ಕಾಡಿಗಿಂತ ಸುಖವಾದ ಜೀವನವನ್ನು ಆನೆ ಪರಿವಾರ ಕಾಫಿ ತೋಟಗಳಲ್ಲಿ ಕಂಡಿವೆ. ಹೀಗಾಗಿಯೇ ತೋಟ ಬಿಟ್ಟು ಕಾಡಿನತ್ತ ಹೆಜ್ಜೆ ಹಾಕದ ಆನೆಗಳು, ಆಗಿಂದಾಗ್ಗೆ ತಮ್ಮತ್ತ ಬರುವ ಮನುಷ್ಯರ ಮೇಲೆ ಧಾಳಿ ನಡೆಸಿ ಪ್ರಾಣಹರಣಕ್ಕೆ ಕಾರಣವಾಗಿದೆ.

ಕಳೆದ 8 ವರ್ಷ ಗಳಲ್ಲಿ ಕೊಡಗಿನಲ್ಲಿ ಕಾಡಾನೆ ದಾಳಿಯಿಂದ 91 ಮಂದಿ ಸಾವನ್ನಪ್ಪಿದ್ದಾರೆ. ಶುಕ್ರವಾರ ಕೋಣನಕಟ್ಟೆ ಗ್ರಾಮದಲ್ಲಿ ದೆಹಲಿಯ ಡಿಜಿಪಿ ಪತ್ನಿ ಸಂಧ್ಯಾ ಅಚ್ಚಯ್ಯ ಅವರ ಸಾವಿನ ಪ್ರಕರಣ ಸೇರಿದಂತೆ 2026ರಲ್ಲಿ 6 ತಿಂಗಳಿನಲ್ಲಿ 6 ಮಂದಿ ಕಾಡಾನೆ ದಾಳಿಯಿಂದ ಸಾವನ್ನಪ್ಪಿದ್ದಾರೆ. ತೋಟದ ಮಾಲೀಕರು ತೋಟಕ್ಕೆ ತೆರಳಲು ಭಯ ಪಡುವಂಥ ಪರಿಸ್ಥಿತಿಯಿದ್ದರೆ ಕಾರ್ಮಿ ಕರು ಕಾಡಾನೆ ಇರುವ ತೋಟಗಳಲ್ಲಿ ಕೂಲಿಕೆಲ ಸಕ್ಕೆ ತೆರಳುವುದಿಲ್ಲ ಎಂದು ನಿರ್ಧರಿಸಿದ್ದಾರೆ. ಆನೆ ದಾಳಿಯ ಆತಂಕದಿಂದ ತೋಟ ಕಾರ್ಮಿಕ ಮಕ್ಕಳು ಶಾಲೆಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಇದೇ ಕಾರಣದಿಂದಾಗಿ ಅನೇಕ ಕಾರ್ಮಿಕರು ತಮ್ಮ ಮಕ್ಕಳನ್ನು ಪೇಟೆ-ಪಟ್ಟಣಗಳ ಹಾಸ್ಟೆಲ್‌ಗಳಲ್ಲಿ ಇರಿಸಿ ಶಿಕ್ಷಣ ಕೊಡಿಸುತ್ತಿದ್ದಾರೆ. ಕಳೆದ 23 ವರ್ಷಗಳಿಂದ ಕೊಡಗಿನಲ್ಲಿ ನಿರಂತರ ವಾಗಿರುವ ಕಾಡಾನೆ ದಾಳಿಗೆ ಶಾಶ್ವತ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ವಿಫಲವಾಗಿದೆ. ಕಂದಕ ನಿರ್ಮಾಣ, ಸೋಲಾರ್ ಬೇಲಿ ನಿರ್ಮಾಣ, ರೈಲ್ವೆ ಬ್ಯಾರಿಕೇಟ್ ಅಳವಡಿಕೆ ಮುಂತಾದ ಯೋಜನೆಗಳು ಸರಕಾರಿ ಕಾಗದ ದಲ್ಲಿಯೇ ಉಳಿದಿವಿಯೇ ವಿನಾ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ಸಿಬ್ಬಂದಿ, ಅಧಿಕಾರಿಗಳು, ವಾಹನಗಳ ಕೊರತೆಯನ್ನು ತೀವ್ರವಾಗಿ ಎದುರಿಸುತ್ತಿರುವ ಅರಣ್ಯ ಇಲಾಖೆಯಿಂದ ಕಾಡಾನೆ ದಾಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಭರವಸೆಯೇ ಉಳಿದಿಲ್ಲ. ಕಾಡು ಕಾಯುವ ಅಧಿಕಾರಿ ಕಾಡಾನೆಗಳನ್ನೂ ತೋಟಗಳಿಗೆ ಬಾರದಂತೆ ಕಾಯಬೇಕಾದ ಸ್ಥಿತಿಯಲ್ಲಿ ಕರ್ತವ್ಯ ನಿರ್ವಹಿಸುವುದು ಕಷ್ಟವಾಗಿದೆ. ಕೊಡಗಿನ ಸುಮಾರು 899 ಕಿ.ಮೀ. ವಿಸ್ತಾರ ಪ್ರದೇಶ ದಲ್ಲಿ ಕಾಡಾನೆ ಹಾವಳಿ ಕಂಡುಬಂದಿದೆ. ಮಡಿಕೇರಿ, ವಿರಾಜಪೇಟೆ, ನಾಗರ ಹೊಳೆ ವ್ಯಾಪ್ತಿಯಲ್ಲಿ 421 ಕಿ.ಮೀ. ಕಂದಕ, 544 ಕಿ.ಮೀ. ಸೋಲಾರ್ ಬೇಲಿ, 139 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಪೂರ್ಣಗೊಂಡಿದೆ.

2025-26 ನೇ ಸಾಲಿನಲ್ಲಿ 116 ಲಕ್ಷ ರು. ವೆಚ್ಚದಲ್ಲಿ 69 ಕಿ.ಮೀ. ಕಂಕದ ನಿರ್ವಹಣೆ, ವಿರಾಜಪೇಟೆ ಮತ್ತು ನಾಗರಹೊಳೆ ವ್ಯಾಪ್ತಿಯಲ್ಲಿ 114 ಲಕ್ಷ ರು. ವೆಚ್ಚದಲ್ಲಿ 125 ಕಿ.ಮೀ. ನೂತನ ಕಂದಕ ನಿರ್ಮಾಣ, 76 ಲಕ್ಷ ರು. ವೆಚ್ಚದಲ್ಲಿ ಸೋಲಾರ್ ಬೇಲಿ ನಿರ್ವಹಣೆ, 367 ಲಕ್ಷ ರು. ವೆಚ್ಚದಲ್ಲಿ 49 ಕಿ.ಮೀ. ಸೋಲಾರ್ ಬೇಲಿ ನಿರ್ಮಿಸಲಾಗಿದೆ. 342 ಲಕ್ಷ ರು. ವೆಚ್ಚದಲ್ಲಿ 193 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ವಹಣೆ, 2561 ಲಕ್ಷ ರು. ವೆಚ್ಚದಲ್ಲಿ 13.95 ಕಿ.ಮೀ. ನೂತನ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲಾಗಿದೆ. 316 ಲಕ್ಷ ರು. ವೆಚ್ಚದಲ್ಲಿ ಕಾಡಾನೆ ಹಾವಳಿ ತಡೆಗೆ ವಿಶೇಷ ಮಾದರಿ ಕಾಮಗಾರಿ ಮಾಡಲಾಗಿದೆ. ಇಷ್ಟೆಲ್ಲಾ ಪ್ರಯತ್ನ, ವೆಚ್ಚ ಮಾಡಿದ್ದರೂ ಕಾಡಾನೆಗಳು ಮಾತ್ರ ತೋಟಗಳಲ್ಲಿ, ನಾಡಿನಂಚಿನಲ್ಲಿ ಬಿಂದಾಸ್ ಆಗಿ ತಿರುಗಾಡುತ್ತಾ, ಮಾನವ ಪ್ರಾಣಹಾನಿ, ಕಾಫಿ ಫಸಲು ಹಾನಿ ಮುಂ ದುವರಿಸುತ್ತಲೇ ಇವೆ.

ಹೊಸ ಹುಮ್ಮಸ್ಸಿನೊಂದಿಗೆ ಆಡಳಿತಕ್ಕೆ ಮುಂದಾಗಿರುವ ಡಿ.ಕೆ. ಶಿವಕುಮಾರ್ ನೇತೃತ್ವದ ಸರಕಾರ, ಕೊಡಗು ಮಾತ್ರವಲ್ಲದೇ ಮಲೆನಾಡು ಜಿಲ್ಲೆಗಳಲ್ಲಿ ಕಾಡಾನೆ ದಾಂಧಲೆ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ವಿಶೇಷ ಪ್ರಯತ್ನದಿಂದ ಕಾಡಾನೆಗಳನ್ನು ಕೃಷಿ ವಲಯದಿಂದ ಕಾಡಿಗೆ ಅಟ್ಟುವಲ್ಲಿ ಸಫಲವಾದರೆ ಕಾಡಾನೆ ಪೀಡಿತ ನಾಡಿನ ಜನತೆ ಖಂಡಿತವಾಗಿಯೂ ಈ ಸರಕಾರವನ್ನು ಸದಾ ಹೆಮ್ಮೆಯಿಂದ ಸ್ಮರಿಸುತ್ತಾರೆ.

ಕಾಡಾನೆ ದಾಳಿಗೆ ಹಲವರು ಸಾವು

ವರ್ಷ	ಸಾವನ್ನಪ್ಪಿದವರು
2017-16	05
2018-10	0
2019-20	06
2020- 2021	13
2021-22	15
2022-23	10
2023-24	15
2024-25	08
2025-26	14
2026 (ಜೂನ್)	6

ಮಾನವ ಆನೆ ಸಂಘರ್ಷ ತಡೆಗೆ ಸಲಹೆಗಳು

- ಕೊಡಗು ಜಿಲ್ಲೆಯ ಎಲ್ಲಾ ಅರಣ್ಯ ಮತ್ತು ಖಾಸಗಿ ಜಾಗದ ಮಧ್ಯೆ ಶಾಶ್ವತ ಅತ್ಯಾಧುನಿಕ ಕಂದಕ /ಬೇಲಿ ನಿರ್ಮಾಣ
- ಅರಣ್ಯದಲ್ಲಿ ಪ್ರಾಣಿಗಳಿಗೆ ಬೇಕಾಗುವ ಮರ, ಹಣ್ಣುಗಳ ಗಿಡ ನೆಡುವುದು
- ಪ್ರಾಣಿಗಳಿಗೆ ಕಾಡಿನಲ್ಲಿ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆ
- ಅರಣ್ಯ ಗಡಿಯಲ್ಲಿ ಬಿಎಸ್‌ಎಫ್‌ನಂತೆ 24 ಗಂಟೆ ಟಾಸ್ಕ್ ಫೋರ್ಸ್ ನೇಮಕ
- ಅರಣ್ಯ, ಪೊಲೀಸ್ ಇಲಾಖೆ ಜತೆಗೂಡಿ ಟಾಸ್ಕ್ ಫೋರ್ಸ್ ರಚನೆ
- 112 ನಂತೆ ಪ್ರತ್ಯೇಕವಾಗಿ ಗ್ರಾಮ ಸಂಪರ್ಕಕ್ಕೆ ಅರಣ್ಯ ಸಿಬ್ಬಂದಿಗೆ ವಾಹನ
- ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸಿ, ನಿಗಾವಹಿಸುವುದು.
- ಆನೆಗಳ ಸಂತತಿ ಹೆಚ್ಚಾಗದಂತೆ ಕ್ರಮ ಕೈಗೊಳ್ಳುವುದು
- ಆನೆ ಕಾವಲು ವಿಶೇಷ ತಂಡ ರಚನೆ, ಕಾಡು ಪ್ರಾಣಿ ಮೇಲೆ ಬಂದೂಕು ಬಳಸಲು ಅನುಮತಿ.
- ಅರಣ್ಯದಲ್ಲಿ ವಾಸಿಸುವ ಜನರಿಗೆ ಪರ್ಯಾಯ ವ್ಯವಸ್ಥೆ ಮಾಡಿ, ಅರಣ್ಯವನ್ನು ಕಾಡು ಪ್ರಾಣಿಗಳ ಓಡಾಟಕ್ಕೆ ಅನುಕೂಲ ಮಾಡಿಕೊಡುವುದು.

ವಾರದಲ್ಲಿ 900 ವೈದ್ಯ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ: ಸಚಿವ ಖಾದರ್

ಶೀಘ್ರದಲ್ಲೇ ಎಂಬಿಬಿಎಸ್ ವೈದ್ಯರ ನೇಮಕ

ಮಂಗಳೂರು: ಸರಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಕಾಯಂ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಎಂಬಿಬಿಎಸ್ ಪದವೀಧರರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದರು.

ಸಚಿವರಾದ ಬಳಿಕ ಭಾನುವಾರ ಮೊದಲ ಬಾರಿಗೆ ಮಂಗಳೂರಿಗೆ ಆಗಮಿಸಿದ ಅವರು, ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ದರ್ಶನ ಪಡೆದು ಸುದ್ದಿಗಾರರ ಜತೆ ಮಾತನಾಡಿದರು. ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಸುಮಾರು 900 ಎಂಬಿಬಿಎಸ್ ವೈದ್ಯರ ಹುದ್ದೆಗಳು ಖಾಲಿ ಇವೆ. ನಿಯ ಮಾನುಸಾರ ಕಾಯಂ ನೇಮಕಾತಿ ನಡೆಯುವವರೆಗೆ ಸಾರ್ವ ಜನಿಕರಿಗೆ ತೊಂದರೆಯಾಗಬಾರದು ಎಂಬ ನಿಟ್ಟಿನಲ್ಲಿ ಗುತ್ತಿಗೆ ನೇಮಕಾತಿಗೆ ಹಸಿರು ನಿಶಾನೆ ನೀಡಲಾಗಿದೆ. ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಇರುವ ಎಂಬಿಬಿಎಸ್ ಪದವೀಧರರು ಆಯಾ ಜಿಲ್ಲೆಯ ಜಿಲ್ಲಾ ಆರೋಗ್ಯ ಆರೋಗ್ಯಾ ಧಿಕಾರಿಗಳಿಗೆ (ಡಿಎಚ್‌ಒ) ನೇರವಾಗಿ ಅರ್ಜಿ ಸಲ್ಲಿಸಬಹುದು ಎಂದರು.

ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ' ಯೋಜನೆಯಡಿ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ವಿಮೆ ಸೌಲಭ್ಯ ವಿಸ್ತರಿಸುವ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಈ ಯೋಜನೆಯನ್ನು ವಿಸ್ತರಿಸಲು ಎದುರಾಗಿರುವ ತಾಂತ್ರಿಕ ತೊಡಕುಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಇದು ಜನಸಾಮಾನ್ಯರಿಗೆ ಮತ್ತು ಹಿರಿಯ ನಾಗರಿಕರಿಗೆ ಅನುಕೂಲಕರವಾಗುವುದಾದರೆ, ಖಂಡಿತವಾಗಿಯೂ ಉಚಿತ ಚಿಕಿತ್ಸಾ ವ್ಯಾಪ್ತಿಯನ್ನು ವಿಸ್ತರಿಸಲು ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಮುಖ್ಯಮಂತ್ರಿಗಳು ಯಾವುದೇ ಜಿಲ್ಲೆಯ ಉಸ್ತುವಾರಿ ಜವಾಬ್ದಾರಿ ನೀಡಿದರೂ ನಿಭಾಯಿಸಲು ಸಿದ್ದನಿದ್ದೇನೆ. ಶೀಘ್ರದಲ್ಲೇ ಸಚಿವ ಸಂಪುಟ ವಿಸ್ತರಣೆಯಾಗುವ ಸಾಧ್ಯತೆಯಿದೆ. ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುತ್ತೇನೆ, ಜಿಲ್ಲೆಯ ಗೌರವಕ್ಕೆ ಧಕ್ಕೆ ತರುವ ಯಾವುದೇ ಕೆಲಸ ಮಾಡುವುದಿಲ್ಲ.

-ಯು.ಟಿ.ಖಾದರ್, ಆರೋಗ್ಯ ಸಚಿವ

ಡಿಎಚ್‌ಒ ವಿಳಂಬ ಧೋರಣೆ ಸಲ್ಲ

ಅರ್ಜಿ ಸಲ್ಲಿಸಿದ ಒಂದು ವಾರದ ಒಳಗಾಗಿ ಸಂಬಂಧಪಟ್ಟ ಡಿಎಚ್‌ಒಗಳು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬೇಕು. ಒಂದು ವೇಳೆ ಈ ಪ್ರಕ್ರಿಯೆಯಲ್ಲಿ ವಿಳಂಬ ಧೋರಣೆ ಅನುಸರಿಸಿದರೆ ಅಥವಾ ಆದೇಶ ನೀಡಲು ಸತಾಯಿಸಿದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಸಚಿವರು ಕಟು ಎಚ್ಚರಿಕೆ ನೀಡಿದರು. ಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳುವ ಪ್ರತಿ ವೈದ್ಯರಿಗೆ ಮಾಸಿಕ 60,000 ಗೌರವಧನ ನೀಡಲಾಗುವುದು ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿದರು.

ಯಾರಿಗೂ ಬೇಡವಾದ ಬೆಂಗಳೂರು ನಗರಾಭಿವೃದ್ಧಿ ಖಾತೆ?

← ಮೊದಲಪುಟದಿಂದ

ಇದಕ್ಕೂ ಬಗ್ಗದಿದ್ದಾಗ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕರೆ ಮಾಡಿ, ಮಾತನಾಡಿದ್ದಾರೆ. ಖರ್ಗೆ ಸೂಚನೆಯ ಬಳಿಕ ರಾಜೀನಾಮೆ ತೀರ್ಮಾನದಿಂದ ಹಿಂದೆ ಸರಿಯಲು ರಾಮಲಿಂಗಾರೆಡ್ಡಿ ಸಮ್ಮತಿಸಿದರು. ಆದರೆ ಈ ವೇಳೆ ನೀರಾವರಿ ಇಲಾಖೆಯೊಂದಿಗೆ ಹೆಚ್ಚುವರಿ ಖಾತೆ ನೀಡುವ ಭರವಸೆ ನೀಡಿದರೂ, ನೀವು ಕೊಡುವ ಖಾತೆ ನಿರ್ವಹಿಸುವೆ ಎಂದು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹಾಗೆ ನೋಡಿದರೆ ಬೆಂಗಳೂರು ನಗರಾಭಿವೃದ್ಧಿಗೆ ರಾಮಲಿಂಗಾರೆಡ್ಡಿ ಪಟ್ಟುಹಿಡಿಯಲು ಬೆಂಗಳೂರಿನ ಕೆಲ ಹಿರಿಯ ಶಾಸಕರ ಬೆಂಬಲವೂ ಇತ್ತು ಎನ್ನಲಾಗಿದೆ. ಕಳೆದ ಒಂದು ದಶಕದಿಂದ ಬೆಂಗಳೂರು ನಗರಾಭಿವೃದ್ಧಿ ಇಲಾಖೆಯನ್ನು ಬೆಂಗಳೂರಿನ ಶಾಸಕರಿಗೆ ನೀಡಿಲ್ಲ. ಡಾ.ಜಿ. ಪರಮೇಶ್ವರ, ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಡಿ.ಕೆ.ಶಿವಕುಮಾರ್ ಸೇರಿದಂತೆ ಇಲಾಖೆ ಜವಾಬ್ದಾರಿ ವಹಿಸಿಕೊಂಡಿರುವ ಎಲ್ಲರೂ ಬೆಂಗಳೂರಿನ ಆಚೆಯ ಶಾಸಕರು. ಇನ್ನು ಕೃಷ್ಣಬೈರೇಗೌಡ ಅವರು ಬ್ಯಾಟರಾಯನಪುರ ಶಾಸಕರಾಗಿದ್ದರೂ, ಮೂಲತಃ ಪಕ್ಕದ ಜಿಲ್ಲೆಯವರು. ಬೆಂಗಳೂರಿನಲ್ಲಿ ಪಕ್ಷ ಸಂಘಟಿಸಿದವರ ಬದಲು ಹೊರಗಿನಿಂದ ಬಂದವರಿಗೆ ಖಾತೆ ನೀಡುತ್ತಾ ಹೋದರೆ, ಬೆಂಗಳೂರು ಶಾಸಕರು ಏನು ಮಾಡಬೇಕು ಎನ್ನುವ ಅಸಮಾಧಾನ ಬೆಂಗಳೂರಿನ ಶಾಸಕರಿಗಿದೆ. ಈ ಎಲ್ಲ ಗೊಂದಲಗಳ ನಡುವೆ ಇದೀಗ ಇತ್ತ ರಾಮಲಿಂಗಾರೆಡ್ಡಿ, ಅತ್ತ ಕೃಷ್ಣಬೈರೇಗೌಡ ಇಬ್ಬರೂ ಬೆಂಗಳೂರು ನಗರಾಭಿವೃದ್ಧಿ ಖಾತೆಯಿಂದ ಅಂತರ ಕಾಯ್ದುಕೊಳ್ಳುತ್ತಿರುವುದರಿಂದ ಪುನಃ ಈ ಖಾತೆ ಡಿ.ಕೆ.ಶಿವಕುಮಾರ್ ಅವರೇ ಹಿಂಪಡೆಯುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಬಿಡಿಎ, ಜಲಮಂಡಳಿ ಸಿಎಂ ಬಳಿ

ಆರಂಭದಲ್ಲಿ ಬೆಂಗಳೂರು ನಗರಾಭಿವೃದ್ಧಿ ನೀಡುವುದಾಗಿ ನಾಯಕರು ಹೇಳಿದಾಗ ಬಿಡಿಎ, ಬೆಂಗಳೂರು ಜಲಮಂಡಳಿ, ಬಿಎಂಆರ್‌ಡಿಎ ಸೇರಿದಂತೆ ಎಲ್ಲ ಇಲಾಖೆಗಳನ್ನು ಸೇರಿಸಿ ಕೊಡಬಹುದು ಎನ್ನುವ ನಿರೀಕ್ಷೆಯಲ್ಲಿ ಕೃಷ್ಣ ಬೈರೇಗೌಡ ಅವರು ಒಪ್ಪಿದ್ದರು. ಆದರೆ ಖಾತೆ ಹಂಚಿಕೆ ವೇಳೆ ಗ್ರೇಟರ್ ಬೆಂಗಳೂರಿನ ಐದು ನಗರಪಾಲಿಕೆ, ಬಿಎಂಆರ್‌ಡಿಎ ಮಾತ್ರ ಕೃಷ್ಣಬೈರೇಗೌಡ ಅವರಿಗೆ ಹಂಚಿಕೆ ಮಾಡಿ, ಬಿಡಿಎ, ಬೆಂಗಳೂರು ಜಲಮಂಡಳಿ, ಬಿಎಂಆರ್‌ಡಿಎ ನಂತಹ ಪ್ರಮುಖ ಇಲಾಖೆಗಳು ಡಿ.ಕೆ.ಶಿವಕುಮಾರ್ ಅವರೇ ಉಳಿಸಿಕೊಂಡಿದ್ದಾರೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚನ್ನರಾಯಪಟ್ಟಣ ಬಿ.ಎಂ. ರೋಡ್, ಹಾಸನ ಜಿಲ್ಲೆ,
ಇ-ಮೇಲ್: apmccrpatna@rediffmail.com ದೂ:08176-252247
ಸಂಖ್ಯೆ: ಕೃಉಮಾಸ(ಚನ್ನರಾಯಪಟ್ಟಣ) 111 /2026-27 ದಿನಾಂಕ: 04/06/2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ -2ನೇ ಕರೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚನ್ನರಾಯಪಟ್ಟಣ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಮಳಿಗೆಗಳ ಮುಂಭಾಗಕ್ಕೆ ಚರಂಡಿಯೊಂದಿಗೆ ಡೆಕ್‌ಸ್ಲ್ಯಾಬ್ ನಿರ್ಮಿಸುವ ಕಾಮಗಾರಿಯ. (ಐಟಂವಾರು ಟೆಂಡರ್) ಟೆಂಡರಿಗಿಟ್ಟ ಮೊತ್ತ ರೂ. 10,53,073-30 ಹಾಗೂ ಇ.ಎಂ.ಡಿ ಮೊತ್ತ ರೂ.26,400-00 ಗಳ ವೆಚ್ಚಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಸಿವಿಲ್ ಗುತ್ತಿಗೆದಾರರಿಂದ KW-1 ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. ಕಾಮಗಾರಿಗಳ ಐಟಂವಾರು ಶೆಡ್ಯೂಲ್ ಹಾಗೂ ಟೆಂಡರ್ ದಾಖಲೆಗಳನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 22/06/2026 ರಂದು: 17:30 ಗಂಟೆ, ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 24/06/2026 ರಂದು ಬೆಳಗ್ಗೆ 11:00 ಗಂಟೆ ಮತ್ತು ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 29/06/2026 ಬೆಳಗ್ಗೆ 11.00 ಗಂಟೆ. ಟೆಂಡರ್ ಅಪ್ ಲೋಡಿಂಗ್ಗೆ ಸಂಬಂಧಿಸಿದಂತೆ ಇ- ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: 080-22485867 ಅಥವಾ 080-25501216 ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಹಾಗೂ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃ,ಉ,ಮಾ.ಸ, ಚನ್ನರಾಯಪಟ್ಟಣ
ಸಹಿ/-ಆಡಳಿತಾಧಿಕಾರಿ, ಕೃ,ಉ,ಮಾ.ಸ, ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/204/ಕೆಎಸ್‌ಎಂಸಿಎ/2026-27

ಜೆಡಿಎಸ್‌ಗೆ ಬಾಗಿಲು ತೆರೆದ ಡಿಕೆ

← ಮೊದಲಪುಟದಿಂದ

ಮೂಲ ವನ್ನು ಬದಲಾಯಿಸಲು ಯಾರಿಗೂ ಸಾಧ್ಯವಿಲ್ಲ. ಮೊದಲು ಇದು ಬೆಂಗಳೂರು ನಗರ ಜಿಲ್ಲೆಯಾ ಗಿತ್ತು. ನಾನು ಬೆಂಗಳೂರು ಜಿಲ್ಲಾ ಸದಸ್ಯನಾ ಗಿದ್ದೆ. ನಂತರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಾಯಿತು. ರಾಮನಗರ ಜಿಲ್ಲೆ ಎಂದು ಹೆಸರಿಸಲಾಗಿತ್ತು. ಈಗ ಬೆಂಗಳೂರು ದಕ್ಷಿಣ ಜಿಲ್ಲೆಯಾಗಿದೆ. ಈ ಭಾಗದ ಅಭಿವೃದ್ಧಿಗೆ ಏನೆಲ್ಲಾ ಕೆಲಸಗಳಾಗಬೇಕೆಂಬ ಬಗ್ಗೆ ಪ್ರತ್ಯೇಕ ಸಭೆ ನಡೆಸಿ, ಚರ್ಚಿಸಲಾಗುವುದು ಎಂದರು.

ಮಲೇಷ್ಯಾ ಪ್ರಧಾನಿ ಶುಭಾಶಯ

ನೂತನ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಭಾನುವಾರ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ವಿಡಿಯೋ ಕರೆ ಮಾಡಿ ಶುಭಾಶಯ ಕೋರಿದ್ದಾರೆ. ಕರ್ನಾಟಕ ರಾಜ್ಯ ಮತ್ತು ಮಲೇಷ್ಯಾ ದೇಶದ ನಡುವಿನ ಸಂಬಂಧವನ್ನು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಿದರು, ಮಲೇಷ್ಯಾಕ್ಕೆ ಬರುವಂತೆ ಆಹ್ವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ದಕ್ಷಿಣ ಜಿಲ್ಲೆಗೇಕೆ ಆದ್ಯತೆ?

ರಾಮನಗರವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ನಾಮಕರಣ ಮಾಡಿದ್ದರಿಂದ ಜಮೀನಿನ ಬೆಲೆ ಏನಾಗಿದೆ ಎಂದು ಎಲ್ಲರಿಗೂ ಅರಿವಾಗಿದೆ. ನಾನು ಹೊಸದಾಗಿ ಏನನ್ನೂ ಮಾಡಿಲ್ಲ. ನಾವೆಲ್ಲಾ ಬೆಂಗಳೂರಿಗೆ ಸೇರಿದವರು. ಮೂಲವನ್ನು ಬದಲಾಯಿಸಲು ಯಾರಿಗೂ ಸಾಧ್ಯವಿಲ್ಲ. ಮೊದಲು ಇದು ಬೆಂಗಳೂರು ನಗರ ಜಿಲ್ಲೆಯಾಗಿತ್ತು. ನಾನು ಬೆಂಗಳೂರು ಜಿಲ್ಲಾ ಸದಸ್ಯನಾಗಿದ್ದೆ. ನಂತರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಾಯಿತು. ರಾಮನಗರ ಜಿಲ್ಲೆ ಎಂದು ಹೆಸರಿಸಲಾಗಿತ್ತು. ಈಗ ಬೆಂಗಳೂರು ದಕ್ಷಿಣ ಜಿಲ್ಲೆಯಾಗಿದೆ. ಈ ಭಾಗದ ಅಭಿವೃದ್ಧಿಗೆ ಏನೆಲ್ಲಾ ಕೆಲಸಗಳಾಗಬೇಕೆಂಬ ಬಗ್ಗೆ ಪ್ರತ್ಯೇಕ ಸಭೆ ನಡೆಸಿ, ಚರ್ಚಿಸಲಾಗುವುದು. ಜನರ ಸಮಸ್ಯೆ ಆಲಿಸಲು ವಿಶೇಷ ಅಧಿಕಾರಿ ನಿಯೋಜಿಸಲಾಗುವುದು ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ಅಲ್ಲದೆ, ಯಾರೂ ವ್ಯವಸಾಯ ಬಿಡಬಾರದು, ಜಿಲ್ಲೆಯ ಎಲ್ಲಾ ಕೆರೆಗಳನ್ನು ತುಂಬಿಸಲಾಗುತ್ತದೆ. ಸಿಲ್ಕ್-ಮಿಲ್ಕ್ ಉತ್ಪಾದನೆಗೆ ಆದ್ಯತೆ ನೀಡಲಾಗುವುದು. ಇಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳು ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಬೇಕೆಂದು ಕಟ್ಟುನಿಟ್ಟಿನ ಆದೇಶ ನೀಡುತ್ತೆನೆ.ಉದ್ಯಮ ಮತ್ತು ಕೈಗಾರಿಕೆಗಳಲ್ಲಿ ಕೆಲಸ ಮಾಡುವವರು, ಸಂಘಟನೆ, ಪ್ರತಿಭಟನೆ ಮಾಡಿ ತೊಂದರೆ ಮಾಡಬೇಡಿ. ಕೈಗಾರಿಕೆಗಳು ಇಲ್ಲಿಯೇ ಇರಬೇಕು. ಬೆಂಗಳೂರು ದಕ್ಷಿಣ ಹಾಗೂ ಗ್ರಾಮಾಂತರ ಜಿಲ್ಲೆಯ ಮಗನಾಗಿ ನಾನು ಇಲ್ಲಿಗೆ ಬಂದಿದ್ದೇನೆ. ಕಷ್ಟ ಕಾಲದಲ್ಲಿ ಜಿಲ್ಲೆಯ ಜನರು ನನ್ನ ಜೊತೆಗಿದ್ದರು. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ಫಲ ನೀಡುತ್ತದೆ ಎಂದು ನಾನು ನಂಬಿದ್ದೆ. ನಿಮ್ಮೆಲ್ಲರ ಪ್ರಾರ್ಥನೆಯ ಫಲವಾಗಿ ನಾನಿಂದು ಉತ್ತಮ ಅವಕಾಶ ಪಡೆದಿದ್ದೇನೆ ಎಂದರು.

ಕನಕಾಧಿಪತಿಗೆ ಅದ್ದೂರಿ ಸ್ವಾಗತ

ಕನಕಪುರ ವಿಧಾನಸಭಾ ಕ್ಷೇತ್ರದ ಹಾರೋಹಳ್ಳಿ ಸರ್ಕಲ್, ತುಂಗಣಿ, ಟಿ.ಬೇಕುಪ್ಪೆ ಸರ್ಕಲ್, ನಾರಾಯಣಪುರ, ಕೋಡಿಹಳ್ಳಿ, ಹೇರಿಂದ್ಯಾಪನಹಳ್ಳಿ, ಕೊಳಗೊಂಡನಹಳ್ಳಿ, ಹುಣಸನಹಳ್ಳಿ, ಹೊಸ ದುರ್ಗಾ, ಹೂಕುಂದ, ಮುಳ್ಳಳ್ಳಿ, ನಲ್ಲಳ್ಳಿ, ದೊಡ್ಡ ಆಲಹಳ್ಳಿ, ಸಾತನೂರು, ಕಬ್ಬಾಳು, ಕುರುಬರಹಳ್ಳಿ ಗೇಟ್, ಸೋಮದ್ಯಾಪನಹಳ್ಳಿ, ಹಳ್ಳಿ ಮಾರನ ಹಳ್ಳಿ, ಹಳೇ ಪೊಲೀಸ್ ಸ್ಟೇಷನ್ ಸರ್ಕಲ್, ಮೇಗಳ ಬೀದಿ, ಕನಕಪುರ ನಗರ, ಚನಬಸಪ್ಪನ ಸರ್ಕಲ್ ಸೇರಿದಂತೆ ಹಲವು ಕಡೆಗಳಲ್ಲಿ ಡಿ.ಕೆ.ಶಿವಕುಮಾರ್ ರೋಡ್ ಶೋ ಹಾಗೂ ಜನಸಂಪರ್ಕ ಸಭೆಗಳನ್ನು ನಡೆಸಿದರು.

ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ತವರು ಕ್ಷೇತ್ರಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸಲು ಜನಸಾಗರವೇ ನೆರೆದಿತ್ತು. ಮನೆಯ ಮಗ ಉನ್ನತ ಹುದ್ದೆಗೇರಿದ ಸಂಭ್ರಮ ಪ್ರತಿಯೊಬ್ಬರ ಮುಖದಲ್ಲೂ ಎದ್ದು ಕಾಣುತ್ತಿತ್ತು. ಮುಖ್ಯಮಂತ್ರಿಯ ಭೇಟಿ ಹಿನ್ನೆಲೆಯಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳು ರಾರಾಜಿಸುತ್ತಿದ್ದವು. ಕನಕಪುರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಮೆಟ್ರೋ ಏರಿದ ಸಿಎಂ!

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ತಮ್ಮ ಸ್ವಕ್ಷೇತ್ರ ಕನಕಪುರಕ್ಕೆ ಭೇಟಿ ನೀಡಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜಧಾನಿ ಜನತೆಗೆ ಯಾವುದೇ ತೊಂದರೆಯಾಗದಂತೆ ಮಾದರಿ ಹೆಜ್ಜೆಯಿಟ್ಟರು. ಸದಾಶಿವನಗರದ ತಮ್ಮ ನಿವಾಸದಿಂದ ಕನಕಪುರ ರಸ್ತೆಯವರೆಗೂ ಮುಖ್ಯಮಂತ್ರಿಗಳ ಕಾರಿಗೆ ಬೆಂಗಾವಲು ವ್ಯವಸ್ಥೆ ಕಲ್ಪಿಸಲು 'ಜೀರೋ ಟ್ರಾಫಿಕ್' ವ್ಯವಸ್ಥೆ ಕಲ್ಪಿಸಿದರೆ ಪೀಕ್ ಅವರ್‌ನಲ್ಲಿ ಸಾರ್ವಜನಿಕರ ವಾಹನ ಸಂಚಾರಕ್ಕೆ ಭಾರೀ ದಟ್ಟಣೆ ಉಂಟಾಗಲಿದೆ ಎಂಬುದನ್ನು ಮನಗಂಡ ಸಿಎಂ, ವಿಧಾನಸೌಧದಿಂದ ನಮ್ಮ ಮೆಟ್ರೋ ರೈಲಿನಲ್ಲಿ ಪ್ರಯಾಣಿಸುವ ಮೂಲಕ ಗಮನ ಸೆಳೆದರು. ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ರಾಜ್ಯಪಾಲರ ಸಂಚಾರಕ್ಕಾಗಿ ಟ್ರಾಫಿಕ್ ನಿರ್ಬಂಧಿಸಿದಾಗ ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದ ಘಟನೆ ಹಸಿರಾಗಿರುವಾಗಲೇ, ಮುಖ್ಯಮಂತ್ರಿಗಳ ಈ ಜನಸ್ನೇಹಿ ನಡೆ ವಿಐಪಿ ಸಂಸ್ಕೃತಿಗೆ ಭಿನ್ನವಾದ ಮಾದರಿ ಹಾಕಿಕೊಟ್ಟಿದೆ.

ಒಣ- ಹಸಿ ಮೆಣಸಿನಕಾಯಿ, ಬೆಳ್ಳುಳ್ಳಿ ಹಾರ

ನೂತನ ಸಿಎಂ ಅವರಿಗೆ ಯಾರ ದೃಷ್ಟಿಯೂ ತಾಕದಿರಲಿ ಎಂದು ಮೆಣಸಿನಕಾಯಿ ಹಾಗೂ ಬೆಳ್ಳುಳ್ಳಿ ಪೋಣಿಸಿ ಮಾಡಿದ್ದ ಬೃಹತ್ ಹಾರವನ್ನು ಹಾರೋಹಳ್ಳಿಯ ಜನರು ಹಾಕಿದ್ದು ವಿಶೇಷವಾಗಿತ್ತು. ಸುಮಾರು 50 ಕೆಜಿ ಒಣ ಮೆಣಸಿನಕಾಯಿ, 70 ಕೆಜಿಗೂ ಹೆಚ್ಚು ಹಸಿಮೆಣಸಿನಕಾಯಿ ಮತ್ತು 50 ಕೆಜಿಗೂ ಹೆಚ್ಚು ಬೆಳ್ಳುಳ್ಳಿ ಬಳಸಲಾಗಿತ್ತು. ಕ್ರೇನ್ ಮೂಲಕ ಬೃಹತ್ ಸೇಬಿನ ಹಾರವನ್ನು ಹಾಕಿ ಅಭಿಮಾನಿಗಳು ಸಂಭ್ರಮಿಸಿದರು. ಕಗ್ಗಲೀಪುರ, ತುಂಗಣಿ, ನಾರಾಯಣಪುರಗಳಲ್ಲಿ ಅಭಿಮಾನಿಗಳು ಸುಮಾರು 500 ಕೆಜಿಗೂ ಹೆಚ್ಚು ಸೇಬು ಬಳಸಿ ಬೃಹತ್ ಹಾರಗಳನ್ನು ಮಾಡಿಸಿ ಡಿ.ಕೆ. ಶಿವಕುಮಾರ್ ಅವರ ಮೇಲಿನ ಅಭಿಮಾನ ಮೆರೆದರು. ತುಂಗಣಿಯಲ್ಲಿ ಎರಡು ಸೇಬಿನ ಹಾರಗಳು ಇದ್ದಿದ್ದು ವಿಶೇಷವಾಗಿತ್ತು. ಹೆರಿಂದ್ಯಾಪನಹಳ್ಳಿಯಲ್ಲಿ ಮಾಡಿದ್ದ ಸೇಬಿನ ಹಾರ 30 ಅಡಿಗೂ ಹೆಚ್ಚು ಉದ್ದವಾಗಿತ್ತು.

ಪರಪ್ಪನ ಕಾರಾಗೃಹದಲ್ಲಿ ಮತೀಯಘೋಷಣೆ, ಉಗ್ರ ಕೈದಿ ಪುಂಡಾಟ

← ಮೊದಲಪುಟದಿಂದ

ವಾರ್ಡರ್ ಕ್ರಮವನ್ನು ತೀವ್ರವಾಗಿ ವಿರೋಧಿಸಿದ ಈ ಕೈದಿಗಳ ಗುಂಪು, ಜೈಲಿನ ಅಧಿಕಾರಿಗಳ ವಿರುದ್ಧವೇ ತಿರುಗಿಬಿದ್ದಿದ್ದಾರೆ. ಅಷ್ಟಕ್ಕೇ ನಿಲ್ಲದ ಕೈದಿಗಳ ಉದ್ರಿಕ್ತ ಗುಂಪು, ಜೈಲಿನೊಳಗೇ ನಿಂತು ಒಂದು ನಿರ್ದಿಷ್ಟ ಮತದ ಪರವಾಗಿ ಅತ್ಯಂತ ಜೋರಾಗಿ ಘೋಷಣೆಗಳನ್ನು ಕೂಗುತ್ತಾ ಜೈಲು ನಿಯಮಾವಳಿಗಳನ್ನು ಅಣಕಿಸಿದ್ದಾರೆ. ಈ ವೇಳೆ ಕರ್ತವ್ಯ ನಿರತರಾಗಿದ್ದ ಜೈಲು ವಾರ್ಡರ್ ಮೇಲೆ ಸಾಮೂಹಿಕವಾಗಿ ಹಲ್ಲೆ ನಡೆಸಲು ಸಹ ಪುಂಡ ಕೈದಿಗಳು ಮುಂದಾಗಿದ್ದಾರೆ.

ಪರಿಸ್ಥಿತಿ ತಣ್ಣಗಾಗಿಸಿದ ಅಧಿಕಾರಿಗಳು

ಜೈಲಿನೊಳಗೆ ಪರಿಸ್ಥಿತಿ ಕೈಮೀರುತ್ತಿರುವುದನ್ನು ಗಮನಿಸಿದ ಜೈಲು ಕಂಟ್ರೋಲ್ ರೂಮ್ ಸಿಬ್ಬಂದಿ ತಕ್ಷಣವೇ ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸರಣಿ ವಿವಾದಗಳಿಂದ ಸುದ್ದಿಯಾಗುತ್ತಿರುವ ಪರಪ್ಪನ ಅಗ್ರಹಾರಕ್ಕೆ ತಕ್ಷಣವೇ ಜೈಲಿನ ಹಿರಿಯ ಅಧಿಕಾರಿಗಳು ಹಾಗೂ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ನೇತೃತ್ವದ ಪೊಲೀಸ್ ಪಡೆ ಧಾವಿಸಿದೆ. ಸ್ಥಳಕ್ಕೆ ಬಂದ ಅಧಿಕಾರಿಗಳು ಪ್ರತಿಭಟನೆ ಹಾಗೂ ದಾಂಧಲೆ ನಡೆಸುತ್ತಿದ್ದ ಉಗ್ರ ಕೈದಿಗಳ ಮನವೊಲಿಸಲು ಯತ್ನಿಸಿ, ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಸದ್ಯ ಜೈಲಿನಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ ಹಾಗೂ ಉದ್ರಿಕ್ತ ಕೈದಿಗಳನ್ನು ಪ್ರತ್ಯೇಕ ಬ್ಯಾರಕ್‌ಗಳಲ್ಲಿ ಇರಿಸಲಾಗಿದೆ.

ತಾಯಿಗೂ ಚಾಕು ಇರಿದು, ತನಗೆ ತಾನೇ ಚಾಕು ಹಾಕಿಕೊಂಡ ವಿದ್ಯಾರ್ಥಿ

ಪಬ್ಜಿ ಹುಚ್ಚಾಟ: ತಂದೆ, ಅಕ್ಕನ ಕೊಲೆ

ಗಂಗಾವತಿ: ಏಕಾಏಕಿ ತನ್ನ ಸಂತಃ ಅಕ್ಕನ ಮೇಲೆ ಚಾಕುವಿನಿಂದ ದಾಳಿ ಮಾಡಿರುವ ವಿದ್ಯಾರ್ಥಿ, ದಾಳಿ ತಡೆಯಲು ಮುಂದಾದ ತಂದೆ- ತಾಯಿ ಮೇಲೆಯೂ ದಾಳಿ ಮಾಡಿದ್ದಾನೆ. ಕೊನೆಗೆ ತನಗೆ ತಾನೇ ಚಾಕು ಇರಿದುಕೊಂಡಿರುವ ಘಟನೆ ಗಂಗಾವತಿ ತಾಲೂಕು ಹಳೇ ಅಯೋಧ್ಯೆ ಗ್ರಾಮದಲ್ಲಿ ನಡೆದಿದೆ.

ಪಿಯುಸಿ 2ನೇ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿ ಸಾಯಿ ವೆಂಕಟಮಣಿ ದೀಪ (18) ಕೃತ್ಯ ಎಸಗಿ, ತಾನು ಹಲ್ಲೆ ಮಾಡಿಕೊಂಡಿರುವ ಯುವಕ. ಚಾಲುವಿನಿಂದ ಹಲ್ಲೆಗೆ ಒಳಗಾದ ಆರೋಪಿಯ ಅಕ್ಕ ಪ್ರಗತಿ(19) ಸ್ಥಳದಲ್ಲೇ ಮತಪಟ್ಟಿದ್ದಾಳೆ. ಹಲ್ಲೆ ತಡೆಯಲು ಮುಂದಾಗಿದ್ದ ತಂದೆ ವೆಂಕಟ ನಾಯ್ಡು ಸಾವು(45) ಚಿಕಿತ್ಸೆ ಫಲಕಾರಿಯಾಗದೇ ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ತಾಯಿ ಸೌಜನ್ಯ(40) ಗಂಭೀರವಾಗಿ ಗಾಯಗೊಂಡಿದ್ದು, ಸಾವು- ಬದುಕಿನ ನಡುವೆ ಹೋರಾಡುತ್ತಿದ್ದಾರೆ. ಹಲ್ಲೆ ಮಾಡಿ, ತಾನೂ ಚಾಕು ಹಾಕಿಕೊಂಡಿರುವ ಆರೋಪಿ ಸಾಯಿ ವೆಂಕಟಮಣಿ ದೀಪ ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತ ವೆಂಕಟನಾಯ್ಡು ತಂದೆ ತಾತಾರಾವ್ ನೀಡಿದ ದೂರು ಆಧರಿಸಿ, ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏಕಾಏಕಿ ದಾಳಿ: ಶನಿವಾರ ರಾತ್ರಿ 8.30ರ ಸುಮಾರಿಗೆ ಆರೋಪಿ ಏಕಾಏಕಿ ಅಕ್ಕನ ಮೇಲೆ ಚಾಕುಚಿನಿಂದ ದಾಳಿ ಮಾಡಿದ್ದಾರೆ. ಬಿಡಿಸಿಕೊಳ್ಳಲು ಹೋಗಿರುವ ತಂದೆ- ತಾಯಿ ಮೇಲೆಯೂ ಚಾಕುವಿನಿಂದ ನಿರಂತವಾಗಿ ದಾಳಿ ಮಾಡಿದ್ದಾನೆ. ಕಂಗಾಲಾಗಿರುವ ವೆಂಕಟನಾಯ್ಡು ಬಾಗಿಲು ತೆರೆಯುವಂತೆ ಕಿರುಚಾಡಿದ್ದಾನೆ. ಒಳಗಿನಿಂದ ಬಾಗಿಲು ಲಾಕ್ ಆಗಿದ್ದರಿಂದ ಆರೋಪಿಯ ಅಜ್ಜ ಪಕ್ಕದ ಮನೆಯವರ ನೆರವಿನಿಂದ ಬಾಗಿಲು ಹೊಡೆದು ಒಳಗೆ ಹೋಗಿದ್ದಾರೆ.

ಈ ವೇಳೆ ಹಲ್ಲೆ ಮಾಡಿರುವ ಆರೋಪಿ ನಡೆದುಕೊಂಡು ಹೊರಗೆ ಬಂದಿದ್ದಾನೆ. ಇನ್ನು ಹಲ್ಲೆಗೆ ಒಳಗಾಗಿ ಮನೆಯಲ್ಲಿ ಬಿದ್ದಿದ್ದ ವೆಂಕಟ ನಾಯ್ಡು ಮತ್ತು ಸೌಜನ್ಯರನ್ನು ಸಾರ್ವಜನಿಕರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಆರೋಪಿ ಅಕ್ಕ ಸ್ಥಳದಲ್ಲೇ ಮೃತಪಟ್ಟಿದ್ದು ಕಂಡು ಬಂದಿದೆ. ಆಸ್ಪತ್ರೆಗೆ ಸಾಗಿಸುವ ವೇಳೆ ಹಲ್ಲೆಗೆ ಒಳಗಾದ ಸೌಜನ್ಯ ಮಾತನಾಡಿ, ನನ್ನ ಮಗ ಏಕಾಏಕಿ ಚಾಕುವಿನಿಂದ ನಮ್ಮ ಹಲ್ಲೆ ಮಾಡಿ, ತಾನೂ ಚಾಕು ಇರಿದುಕೊಂಡಿದ್ದಾನೆ. ಮೈ ಮೇಲೆ ದೆವ್ವ ಬಂದವರಂತೆ ಚಾಲುವಿನಿಂದ ದಾಳಿ ಮಾಡಿದ್ದಾನೆ ಎಂದು ಮಾಹಿತಿ ನೀಡಿದ್ದಾರೆ.

ವಿದ್ಯಾರ್ಥಿ ಸಾಯಿ ವೆಂಕಟಮಣಿ ದೀಪ ಎಂಬ ವಿದ್ಯಾರ್ಥಿ ಏಕಾಏಕಿ ತನ್ನ ಅಕ್ಕ, ತಂದೆ- ತಾಯಿ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದಾನೆ. ನಂತರ ನಾನೂ ಚಾಕುವಿನಿಂದ ಇರಿದುಕೊಂಡಿದ್ದಾನೆ ಎಂದು ಮೃತ ವೆಂಕಟ ನಾಯ್ಡು ತಂದೆ ತಾತಾರಾವ್ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ಕೃತ್ಯಕ್ಕೆ ಕಾರಣ ಏನು ಎಂಬುದು ತನಿಖೆಯಲ್ಲಿ ಗೊತ್ತಾಗಬೇಕಿದೆ.

- ಡಾ.ರಾಮ್ ಎಲ್.ಅರಸಿದ್ದಿ, ಎಸ್ಪಿ, ಕೊಪ್ಪಳ

ಕೃತ್ಯಕ್ಕೆ ಆನ್ ಲೈನ್ ಗೇಮ್ ಪ್ರೇರಣೆ?

ಆರೋಪಿ ಸಾಯಿಮಣಿ ದೀಪ ಆನ್ ಲೈನ್ ಗೇಮ್ ಗೆ ದಾಸನಾಗಿ, ಗೇಮ್ ನಿಂದ ಪ್ರೇರಣೆಗೊಂಡು ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ. ಕ್ರೌರ್ಯ ಪ್ರೇರೇಪಿಸುವ ಗೇಮ್ ನಿಂದ ಹೀಗಾಗಿದೆ ಎಂಬ ಮಾತುಗಳು ಕೇಳಿ ಬಂದಿವೆ. ಶ್ರೀರಾಮನಗರ ಪ್ರತಿಷ್ಠಿತ ಶ್ರೀ ವಿದ್ಯಾನಿಕೇತನ ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದು, ಪ್ರತಿಭಾವಂತ ವಿದ್ಯಾರ್ಥಿ ಆಗಿದ್ದ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಪೋಷಕರು ಮತ್ತು ಪಾಲಕರು ತಮ್ಮ ಮಕ್ಕಳ ಮೊಬೈಲ್ ಬಳಕೆ ಬಗ್ಗೆ ಅತ್ಯಂತ ಜಾಗರೂಕತೆಯಿಂದ ಇರುವ ಅಗತ್ಯವನ್ನು ಈ ಘಟನೆ ನೆನಪಿಸುತ್ತದೆ.

ಮುಂಕಾರು ಒಡೆತ: ರೆಡ್ ಅಲರ್ಟ್

← ಮೊದಲಪುಟದಿಂದ

ಅದೇ ರೀತಿ ನಗರದ ಹೊರವಲಯದ ಅಂದ್ರಾಳ್ ಹಳ್ಳದಲ್ಲಿ ಅಪರಿಚಿತ ಮಹಿಳೆಯೊಬ್ಬರ ಮೃತದೇಹ ಭಾನುವಾರ ಬೆಳಗ್ಗೆ ಪತ್ತೆಯಾಗಿದೆ. ಶನಿವಾರ ರಾತ್ರಿ ಜಿಲ್ಲೆಯಾದ್ಯಂತ ಸುರಿದ ಭಾರಿ ಮಳೆಗೆ ಹಳ್ಳದಲ್ಲಿ ಉಂಟಾದ ಪ್ರವಾಹದಲ್ಲಿ ಮಹಿಳೆ ಕೊಚ್ಚಿ ಹೋಗಿರುವ ಶಂಕೆ ವ್ಯಕ್ತವಾಗಿದೆ.

ಹುಬ್ಬಳ್ಳಿಯಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಭಾರೀ ಮಳೆಯಿಂದ ಹಲವು ತಗ್ಗು ಪ್ರದೇಶಗಳು, ಅಂಡರ್ ಬ್ರಿಡ್ಜ್‌ಗಳು ಹಾಗೂ ದಾಜಿಬಾನಪೇಟೆ ಸೇರಿದಂತೆ ಪ್ರಮುಖ ರಸ್ತೆಗಳು ಜಲಾವೃತಗೊಂಡಿವೆ. ಹಾವೇರಿ ಜಿಲ್ಲೆಯಲ್ಲಿ ಮುಂಗಾರು ಅಬ್ಬರ ಜೋರಾಗಿದ್ದು, ಶನಿವಾರ, ಭಾನುವಾರ ಸುರಿದ ಮಳೆಯಿಂದ ಅಗಡಿ ಗ್ರಾಮದ ಮುಖ್ಯರಸ್ತೆಯಲ್ಲಿ ಅಡ್ಡಲಾಗಿ ದೊಡ್ಡ ಹಳ್ಳವು ತುಂಬಿ ಹರಿದಿದೆ. ಗುತ್ತಲ-ಹಾವೇರಿ ಮುಖ್ಯರಸ್ತೆ ಜಲಾವೃತ ಆಗಿತ್ತು. ರಸ್ತೆ ಸಂಪರ್ಕ ಕಡಿತಗೊಂಡ ಹಿನ್ನೆಲೆಯಲ್ಲಿ ಹಲವು ಗಂಟೆಗಳ ಕಾಲ ಸಂಚರಿಸಲಾಗದೇ ಪ್ರಯಾಣಿಕರು ಪರದಾಡಿದರು.

ಸಮಾಚಾರ ಸಣ್ಣದಲ್ಲ

ಜಮೀರ್‌ಗೆ ಮತ್ತೊಮ್ಮೆ ಸಿಗಲಿದೆ ಸಚಿವ ಸ್ಥಾನ

ಹಾಸನ: ನಮ್ಮ ಜಮೀರ್ ಸಾಹೇಬ್ರು ಮತ್ತೊಮ್ಮೆ ಮಂತ್ರಿಮಂಡಲ ಸೇರುತ್ತಾರೆ ಎಂದು ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ಜಮೀರ್ ಅವರ ಆಡಿಯೋ ವಿಚಾರ ಅಪಪ್ರಚಾರದ ಉದ್ದೇಶದಿಂದ ಆಗಿದೆ. ಇನ್ನೊಂದು ದೊಡ್ಡ ಅಪಪ್ರಚಾರ ಇತ್ತು. ಇದು ಮೊದಲು ಬಂದು ಆ ಅಪಪ್ರಚಾರ ಮುಚ್ಚಿ ಹೋಗುತ್ತಿದೆ. ಜಮೀರ್ ಹೆದರುವ ಅವಶ್ಯಕತೆ ಇಲ್ಲ. ಅವರು ಮತ್ತೊಮ್ಮೆ ಮಂತ್ರಿ ಮಂಡಲ ಸೇರುತ್ತಾರೆ ಎಂದಿದ್ದಾರೆ. ಅವರ ಜತೆಗೆ ನಮ್ಮ ಶಿವಲಿಂಗೇಗೌಡರಿಗೂ ಮಂತ್ರಿ ಸ್ಥಾನ ಸಿಗುತ್ತದೆ. ಯೋಚನೆ ಮಾಡುವುದು ಬೇಡ. ಸಂಬಂಧಪಟ್ಟವರ ಜತೆ ನಾನು ಈಗಾಗಲೇ ಮಾತನಾಡಿದ್ದೇನೆ. ನಾಳೆಯೂ ಮಾತನಾಡುತ್ತೇನೆ. ಯಾವ ಕಾರಣಕ್ಕೂ ಜಮೀರ್ ಇಲ್ಲದ ಸರಕಾರ ಆಗಲ್ಲ. ಜಮೀರ್ ಇದ್ದರೆ ಮಾತ್ರ ಅದು ಸರಕಾರ ಎನಿಸಿಕೊಳ್ಳುತ್ತದೆ. ಆ ದೃಷ್ಟಿಯಿಂದ ಅವರು ಮತ್ತೊಮ್ಮೆ ಮಂತ್ರಿ ಆಗುತ್ತಾರೆ. ಯಾವುದೇ ಕಾರಣಕ್ಕೂ ಆಕ್ರೋಶಕ್ಕೆ ಒಳಗಾಗಬೇಡಿ. ಶಾಂತಿಯಿಂದ ಇರಿ. ಇದರ ಬಗ್ಗೆ ನಾನು ಪ್ರಯತ್ನ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ.

ಈಜಲು ತೆರಳಿದ ಅಣ್ಣ-ತಮ್ಮ ಸಾವು

ಮೂಡಲಗಿ: ಈಜಲು ಹೋದ ಅಣ್ಣ-ತಮ್ಮ ಇಬ್ಬರೂ ನೀರುಪಾಲಾಗಿರುವ ಘಟನೆ ತಾಲೂಕಿನ ಧರ್ಮಟ್ಟಿ ಗ್ರಾಮದಲ್ಲಿ ನಡೆದಿದೆ. ಬೆಳಗಾವಿ ಜಿಲ್ಲೆ ಮೂಡಲಗಿ ತಾಲೂಕಿನ ಧರ್ಮಟ್ಟಿ ಗ್ರಾಮ ಸಾಗರ ಬಾಬು, ಪ್ರವೀಣ ಬಾಬು ಎಂಬ ಬಾಲಕರು ಶನಿವಾರ ಹಳ್ಳಕ್ಕೆ ಈಜಲು ತೆರಳಿದ್ದಾರೆ. ಈ ವೇಳೆ ಒಬ್ಬ ನೀರಿಗೆ ಇಳಿದು ಮುಳುಗಿದ್ದಾನೆ. ಆಗ ಅವನ ರಕ್ಷಣೆಗೆ ಹೋದ ಇನ್ನೊಬ್ಬನು ನೀರಲ್ಲಿ ಮುಳುಗಿ ಜಲಸಮಾಧಿ ಆಗಿದ್ದಾನೆ. 16-15 ವರ್ಷದ ಅಣ್ಣ-ತಮ್ಮರಿಬ್ಬರೂ ಸಾವನ್ನಪ್ಪಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಈ ಸಂಬಂಧ ಮೂಡಲಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇಂದ್ರದ ದುಬಾರಿ ನೀತಿಗೆ ಬೇಸತ್ತ ಜನ

ಬೆಳಗಾವಿ: ಅಡುಗೆ ಅನಿಲದ ಬೆಲೆ ಮತ್ತೆ 29 ರು. ಹೆಚ್ಚಿಸಿರುವ ಕೇಂದ್ರ ಸರಕಾರದ ನಿರ್ಧಾರ ಖಂಡನೀಯ ಎಂದು ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು, ಕಳೆದ ಮೂರು ತಿಂಗಳಲ್ಲೇ ಇದು ಎರಡನೇ ಬಾರಿ ಬೆಲೆ ಏರಿಕೆಯಾಗಿದ್ದು, ಮಾರ್ಚ್ ತಿಂಗಳಲ್ಲಿ 60 ರು. ಹೆಚ್ಚಿಸಲಾಗಿತ್ತು. ಈಗಿನ 29 ರು. ಏರಿಕೆಯೊಂದಿಗೆ ಕೇವಲ ಮೂರು ತಿಂಗಳಲ್ಲಿ ಒಟ್ಟು 89 ರು. ಹೆಚ್ಚಳವಾಗಿದೆ. ಒಂದು ಕಡೆ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಿದ್ದರೆ, ಮತ್ತೊಂದು ಕಡೆ ಅಡುಗೆ ಅನಿಲದ ಬೆಲೆ ಹೆಚ್ಚಿಸುವ ಮೂಲಕ ಕೇಂದ್ರದ ಬಿಜೆಪಿ ಸರಕಾರ ಮಧ್ಯಮ ವರ್ಗ, ಬಡವರು ಮತ್ತು ಗೃಹಿಣಿಯರ ಮೇಲೆ ಮತ್ತಷ್ಟು ಆರ್ಥಿಕ ಹೊರೆ ಹಾಕಿದೆ ಎಂದು ಗುಡುಗಿದ್ದಾರೆ. ಈಗಾಗಲೇ ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಜನರು ತತ್ತರಿಸಿದ್ದಾರೆ. ಕೆಲ ದಿನಗಳ ಹಿಂದೆ ಕೇಂದ್ರ ಸರಕಾರ ವಾಣಿಜ್ಯ ಸಿಲಿಂಡರ್ ದರವನ್ನು ಏರಿಸಿದೆ. ಪರಿಣಾಮ ಹೋಟೆಲ್ ತಿಂಡಿ, ತಿನಿಸುಗಳು, ಟೀ-ಕಾಫಿ ದರ ಏರಿಕೆಯಾಗಿದೆ. ಈಗ ಅಡುಗೆ ಸಿಲಿಂಡರ್ ದರವನ್ನು ಭಾರೀ ಪ್ರಮಾಣದಲ್ಲಿ ಏರಿಸಲಾಗಿದೆ. ಜನಸಾಮಾನ್ಯರ ಬದುಕು ಏನಾಗಬೇಕು? ಎಂದು ಪ್ರಶ್ನಿಸಿದರು.

ವಿಶ್ವವಾಣಿ ಕ್ಲಬ್ ಹೌಸ್
08.06.2026
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಡಾ. ರೋಹಿಣಿ ಮೋಹನ್
ವಿಷಯ
ಕಗ್ಗ, ಗಾಯನ ವ್ಯಾಖ್ಯಾನ
vishwavani.news

ದಿನ ವಿಶೇಷ

08 ಜೂನ್ 2026 ಸೋಮವಾರ

» ಸೂರ್ಯೋದಯ	: 5-41
» ಸೂರ್ಯಾಸ್ತ	: 7-10
» ತಿಥಿ	: ಅಷ್ಟಮಿ
» ನಕ್ಷತ್ರ	: ಶತಭಿಷ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಅಧಿಕ ಜ್ಯೇಷ್ಠ
» ಪಕ್ಷ	: ಕೃಷ್ಣಪಕ್ಷ



ವಿಶ್ವವಾಣಿ ಪುಸ್ತಕ
QR CODE ಸ್ಕ್ಯಾನ್ ಮಾಡಿ
ಫೋನ್ ಪೇ/ ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್‌ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ವಾಟ್ಸಪ್ ನಂಬರ್‌ಗೆ ಕಳುಹಿಸಿ.
ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.
63623 93966
₹ 375

ಚಿಮ್ಮನಚೋಡನರನಾಳ ಸೇತುವೆ ಕುಸಿತ | 20ಕ್ಕೂ ಹೆಚ್ಚು ಮನೆಗಳು ಜಲಾವೃತ | ವಿಮ್ಸ್ ಆಸ್ಪತ್ರೆಗೆ ನೀರು ನುಗ್ಗಿ ರೋಗಿಗಳ ಪರದಾಟ

ಉ.ಕರ್ನಾಟಕದಲ್ಲಿ ಮುಂಗಾರು ಮಳೆ ಆರ್ಭಟ

ಮುಂಗಾರು ಮಾರುತಗಳು ರಾಜ್ಯ ಪ್ರವೇಶಿಸಿದ ಬೆನ್ನಲ್ಲೇ ಹಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ವರುಣಾರ್ಭಟ ಆರಂಭ ಆಗಿದೆ. ಶನಿವಾರ ಹಾಗೂ ಭಾನುವಾರ ರಾತ್ರಿ ಉತ್ತರ ಕರ್ನಾಟಕದ ಕಲಬುರಗಿ, ಬಾಗಲಕೋಟೆ, ಯಾದಗಿರಿ, ಬೆಳಗಾವಿ, ರಾಯಚೂರು, ಹಾವೇರಿ, ಬಳ್ಳಾರಿ ಜಿಲ್ಲೆಗಳಲ್ಲಿ ಸುರಿದ ಮಳೆಯಿಂದ ಹಲವಾರು ಅವಾಂತರಗಳು ಸೃಷ್ಟಿಯಾಗಿವೆ. ಕೃಷಿ ಚಟವಟಿಕೆಗಳು ಗರಿಗೆದರಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಚಿಂಚೋಳಿ-ಭಾಲ್ಕಿ ಸಂಪರ್ಕ ಕಡಿತ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿ ಸುರಿದ ಭಾರಿ ಮಳೆಯ ಆರ್ಭಟಕ್ಕೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ತಾಲೂಕಿನ ಚಿಮ್ಮನಚೋಡ ಗ್ರಾಮದ ಸಮೀಪವಿರುವ ಚಿಮ್ಮನಚೋಡನರನಾಳ ಸಂಪರ್ಕ ಸೇತುವೆಯು ಹಳ್ಳದ ನೀರಿನ ರಭಸಕ್ಕೆ ದಿಢೀರ್ ಕುಸಿದು ಬಿದ್ದಿದೆ. ಈ ಘಟನೆಯಿಂದಾಗಿ ಚಿಂಚೋಳಿ ಮತ್ತು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕುಗಳ ನಡುವಿನ ರಸ್ತೆ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು.

ತಾಲೂಕಿನ ಬೆಡಕಪಳ್ಳಿ ಗ್ರಾಮದಲ್ಲಿ ಮಳೆಯಿಂದ ಅವಾಂತರ ಸೃಷ್ಟಿಯಾಗಿದ್ದು, ಹಳ್ಳದ ನೀರು ಪಥ ಬದಲಿಸಿ ಕಾರಣ 20ಕ್ಕೂ ಹೆಚ್ಚು ಮನೆಗಳು ಜಲಾವೃತ ಆಗಿವೆ. ಮನೆಯಲ್ಲಿರುವ ಧವಸ-ಧಾನ್ಯ ಗೃಹೋಪಯೋಗಿ ವಸ್ತುಗಳೆಲ್ಲ ನೀರುಪಾಲಾಗಿವೆ. ಗೃಹೋಪಯೋಗಿ ವಸ್ತುಗಳು ಹಾಗೂ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಸ್ಥಳೀಯರು ಹರಸಾಹಸ ಪಡುತ್ತಿದ್ದಾರೆ. ಭಾರಿ ಮಳೆಯಿಂದ ತಾಲೂಕಿನಲ್ಲಿ ಉಂಟಾಗಿರುವ ಬೆಳೆ ಹಾಗೂ ಆಸ್ತಿಪಾಸ್ತಿ ಹಾನಿಯ ಕುರಿತು ಸ್ಥಳೀಯ ಕಂದಾಯ ಇಲಾಖೆ ಅಧಿಕಾರಿಗಳು ಮಾಹಿತಿ ಸಂಗ್ರಹಿಸುತ್ತಿದ್ದಾರೆ. ತಕ್ಷಣವೇ ತಾಲೂಕು ಆಡಳಿತ ಜಾಗೃತಗೊಂಡು ಗಂಜಿ ಕೇಂದ್ರಗಳನ್ನು ತೆರೆಯಬೇಕು ಹಾಗೂ ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ಹಣ ಮತ್ತು ಅಗತ್ಯ ನೆರವು ಒದಗಿಸಬೇಕು ಎಂದು ಸಂತ್ರಸ್ತರು ಒತ್ತಾಯಿಸಿದ್ದಾರೆ.

ವಿಮ್ಸ್‌ನಲ್ಲಿ ರೋಗಿಗಳ ಪರದಾಟ

ಬಳ್ಳಾರಿ: ನಗರದಲ್ಲಿ ಶನಿವಾರ ರಾತ್ರಿ ಸುರಿದ ಭಾರಿ ಮಳೆಯ ಪರಿಣಾಮ, ನಗರದ ವಿಮ್ಸ್ ಆಸ್ಪತ್ರೆಯ ಕೆಲವು ವಾರ್ಡ್‌ಗಳ ಒಳಭಾಗಕ್ಕೆ ಮಳೆ ನೀರು ನುಗ್ಗಿ, ರೋಗಿಗಳು ಪರದಾಡಿದ ಘಟನೆ ನಡೆದಿದೆ. ಜೋರಾಗಿ ಸುರಿದ ಮಳೆಯಿಂದಾಗಿ ಆಸ್ಪತ್ರೆಯ ಕಟ್ಟಡದ ಕಿಟಕಿಗಳು ಹಾಗೂ ಪಕ್ಕದ ವರಾಂಡದ ಮೂಲಕ ನೀರು ವಾರ್ಡ್‌ಗಳ ಒಳಗೆ ಹರಿದು ಬಂದಿದೆ. ಇದರಿಂದ ರೋಗಿಗಳು ಹಾಗೂ ಅವರ ಸಂಬಂಧಿಕರು ರಾತ್ರಿ ವೇಳೆ ಸಾಕಷ್ಟು ತೊಂದರೆ ಅನುಭವಿಸಿದರು. ವಾರ್ಡ್‌ನೊಳಗೆ ಮಳೆ ನೀರು ನುಗ್ಗಿದೆ. ತಕ್ಷಣ ಕಾರ್ಯಪ್ರವೃತ್ತರಾದ ಆಸ್ಪತ್ರೆಯ ಸಿಬ್ಬಂದಿ ನೀರನ್ನು ಹೊರಹಾಕುವ ಕೆಲಸ ನಡೆಸಿದರು.

ಆದರೆ ರಾತ್ರಿಪೂರ್ತಿ ನೀರು ತೆರವುಗೊಳಿಸುವ ಕಾರ್ಯ ನಡೆಯುತ್ತಿದ್ದ ಕಾರಣ ರೋಗಿಗಳಿಗೆ ಸಮರ್ಪಕವಾಗಿ ನಿದ್ದೆ ಮಾಡಲು ಸಾಧ್ಯವಾಗದೆ ಪರದಾಡುವಂತಾಯಿತು. ಕೆಲವರು ತಮ್ಮ ಹಾಸಿಗೆಗಳು ಮತ್ತು ಸಾಮಗ್ರಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕಾಯಿತು ಎಂದು ರೋಗಿಯ ಸಂಬಂಧಿಯೊಬ್ಬರು ತಿಳಿಸಿದರು. ಇನ್ನು ನಗರದ ವಿವಿಧ ಬಡಾವಣೆಗಳು, ಪ್ರಮುಖ ರಸ್ತೆಗಳು ಹಾಗೂ ಒಳಚರಂಡಿ ಸಮೀಪದ ಪ್ರದೇಶಗಳಲ್ಲಿ ಮಳೆ ನೀರು ರಸ್ತೆ ಮೇಲೆ ಹರಿದ ಪರಿಣಾಮ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಕೆಲವೆಡೆ ಒಳಚರಂಡಿಗಳು ತುಂಬಿ ಹರಿದ ಕಾರಣ ಮನೆಗಳ ಒಳಗೆ ನೀರು ನುಗ್ಗಿ ಗೃಹೋಪಯೋಗಿ ವಸ್ತುಗಳಿಗೆ ಹಾನಿಯಾಗಿದೆ.

ಮಾಲೀಕರ ಪ್ರಾಣ ಉಳಿಸಿದ ಬೆಕ್ಕು!

ಬಾಗಲಕೋಟೆ: ಹಳೆಯ ಮನೆಯೊಂದರ ಛಾವಣಿ ಸಂಪೂರ್ಣ ಕುಸಿದು ಬಿದ್ದಿದ್ದು, ಸಾಕು ಬೆಕ್ಕಿನ ಕಾರಣದಿಂದಾಗಿ ತಂದೆ-ಮಗ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಬಾಗಲಕೋಟೆಯ ವಲ್ಲಭಬಾಯಿ ವೃತ್ತದ ಬಳಿ ನಡೆದಿದೆ.

ಇಲ್ಲಿನ ನಿವಾಸಿ ಹಾಗೂ ಮಾವಿನ ಹಣ್ಣಿನ ವ್ಯಾಪಾರಿಯಾದ ಶಬ್ಬೀರ್ ಬಾಗವಾನ್ ಮತ್ತು ಅವರ ಮಗ ಅರ್ಬಾಜ್ ಬಾಗವಾನ್ ಅವರ ಜೀವ ಉಳಿಸಿದ ಕೀರ್ತಿ ಈಗ ಅವರ ಮನೆಯ ಸಾಕು ಬೆಕ್ಕಿಗೆ ಸಲ್ಲುತ್ತದೆ.

ಘಟನೆ ನಡೆದಿದ್ದು ಹೇಗೆ?: ಮನೆಯಲ್ಲಿ ಶಬ್ಬೀರ್ ಹಾಗೂ ಅವರ ಮಗ ಅರ್ಬಾಜ್ ಇದ್ದಾಗ ಹಳೆಯ ಮನೆಯ ಛಾವಣಿಯಿಂದ ಮಣ್ಣಿನ ತುಕಡಿ ಹಾಗೂ ಸಣ್ಣ ಕಟ್ಟಿಗೆಯ ತುಂಡೊಂದು ಕೆಳಗೆ ಬಿದ್ದಿದೆ. ಇದನ್ನು ಗಮನಿಸಿದ ಸಾಕು ಬೆಕ್ಕು ತಕ್ಷಣವೇ ಭಯದಿಂದ ಮನೆಯಿಂದ ಹೊರಗೆ ಓಡಿದೆ. ಅದೇ ಸಮಯಕ್ಕೆ ಬೆಕ್ಕಿಗೆ ಹಸಿವು ಕೂಡ ಆಗಿದ್ದರಿಂದ, ಅದಕ್ಕೆ ಏನಾದರೂ ತಿನ್ನಿಸೋಣ ಎಂದುಕೊಂಡು ಬೆಕ್ಕನ್ನು ಹಿಡಿಯಲು ಶಬ್ಬೀರ್ ಮನೆಯಿಂದ ಹೊರಗೆ ಬಂದಿದ್ದಾರೆ. ತಂದೆಯ ಹಿಂದೆಯೇ ಮಗ ಅರ್ಬಾಜ್ ಕೂಡ ಹೊರಗೆ ಬಂದಿದ್ದಾನೆ. ತಂದೆ-ಮಗ ಇಬ್ಬರೂ ಮನೆಯಿಂದ ಹೊರಗೆ ಕಾಲಿಡುತ್ತಿದ್ದಂತೆ, ಇಡೀ ಮನೆಯ ಮೇಲ್ಛಾವಣಿ ಭಾರೀ ಸದ್ದಿನೊಂದಿಗೆ ಕುಸಿದು ಬಿದ್ದಿದೆ. ಒಂದು ವೇಳೆ ಬೆಕ್ಕನ್ನು ಹಿಡಿಯುವ ನೆಪದಲ್ಲಿ ಅವರಿಬ್ಬರೂ ಹೊರಗೆ ಬರದೇ ಹೋಗಿದ್ದರೆ, ಅವಶೇಷಗಳ ಅಡಿಯಲ್ಲಿ ಅವರು ಸಿಲುಕುವ ಸಾಧ್ಯತೆ ಇತ್ತು.

ಭಾರೀ ಮಳೆಗೆ ಚಿಂಚೋಳಿ ತಾಲೂಕಿನ ಚಿಮ್ಮನಚೋಡನರನಾಳ ಹಳ್ಳದ ಸೇತುವೆ ಕುಸಿದಿರುವುದು.



ಕಲಬುರಿಗ ಬೆಡಕಪಳ್ಳಿ ಗ್ರಾಮದಲ್ಲಿ ಮನೆಗಳು ಜಲಾವೃತ ಆಗಿರುವುದು.

ಅಗಡಿ ಹಳ್ಳ ಭರ್ತಿ

ಹಾವೇರಿ: ಜಿಲ್ಲೆಯಲ್ಲಿ ಮುಂಗಾರು ಹಬ್ಬರ ಜೋರಾಗಿದ್ದು, ಶನಿವಾರ, ಭಾನುವಾರ ಸುರಿದ ಮಳೆಯಿಂದ ಅಗಡಿ ಗ್ರಾಮದಲ್ಲಿ ಹಲವು ಅವಾಂತರಗಳು ಉಂಟಾಗಿವೆ. ಗ್ರಾಮದ ಮುಖ್ಯ ರಸ್ತೆಯಲ್ಲಿ ಅಡ್ಡಲಾಗಿ ದೊಡ್ಡ ಹಳ್ಳವು ತುಂಬಿ ಹರಿದಿದ್ದು, ಗುತ್ತಲ-ಹಾವೇರಿ ಮುಖ್ಯ ರಸ್ತೆ ಜಲಾವೃತ ಆಗಿತ್ತು. ರಸ್ತೆ ಸಂಪರ್ಕ ಕಡಿತಗೊಂಡ ಹಿನ್ನೆಲೆ ಹಲವು ಗಂಟೆಗಳ ಕಾಲ ಪ್ರಯಾಣಿಕರು ಸಂಚಾರಕ್ಕೆ ಪರದಾಡಿದರು. ಇನ್ನು ಗ್ರಾಮದ ಕೆಲ ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿನ ಸಾಮಗ್ರಿಗಳು ನೆನೆದು ಹಾನಿ ಉಂಟಾಗಿವೆ. ಜಿಲ್ಲೆಯಲ್ಲಿ ಸಾಕಷ್ಟು ಬಿತ್ತನೆ ಕಾರ್ಯ ಆಗದೇ ಮಳೆಗಾಗಿ ಕಾದು ಕುಂತಿದ್ದರು. ಈಗ ಸುರಿದ ಮಳೆಯಿಂದ ಕೃಷಿ ಭೂಮಿಗಳ ಬಿತ್ತನೆ ಕಾರ್ಯ ಚುರುಕುಗೊಳ್ಳಲಿವೆ. ಬಿತ್ತನೆ ಕೆಸಲಕ್ಕೆ ರೈತರು ಸಕಲ ಸಿದ್ಧತೆ ಜೋರಾಗಿದ್ದು ರಸಗೊಬ್ಬರ ಕೊರತೆ ಬೆಲೆ ಹೆಚ್ಚಳದಿಂದ ರೈತರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ.

ಮಕರಿ ಗ್ರಾಮ ಜಲಾವೃತ

ಹಾವೇರಿ: ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಮಕರಿ ಗ್ರಾಮದಲ್ಲಿ ಭಾನುವಾರ ಸುರಿದ ಧಾರಾಕಾರ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಹಲವಾರು ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಸಂಕಷ್ಟಕ್ಕೆ ಸಿಲುಕಿದ ಘಟನೆ ನಡೆದಿದೆ.

ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಭಾರಿ ಮಳೆಯಿಂದ ಗ್ರಾಮದ ವಿವಿಧ ಬಡಾವಣೆಗಳಲ್ಲಿ ನೀರು ಹರಿದು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಸಿದೆ. ವಿಶೇಷವಾಗಿ ಮಕರಿ ಪ್ಲಾಟ್‌ನ ನಾಲ್ಕು ಕೇರಿಗಳ ಪ್ರದೇಶದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಬೇಕಿದ್ದ ಗಟಾರಗಳಿಗೆ ಮಣ್ಣು ಹಾಕಿ ಮುಚ್ಚಿರುವುದರಿಂದ ನೀರು ರಸ್ತೆಗಳಲ್ಲೇ ನಿಂತು ಬಳಿಕ ಮನೆಗಳಿಗೆ ನುಗ್ಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಚಮನಸಾಬ ದೂಡ್ಡಮನಿ, ಇಸ್ಮಾಯಿಲ್ ಸಾಬ್ ಬಿಲ್ಲಹಳ್ಳಿ, ಸನ್ನಾವುಲ್ಲಾ ದೂಡ್ಡಮನಿ, ಜಯಮ್ಮ ದಂಡಗಿಹಳ್ಳಿ ಹಾಗೂ ಶಾಬೂಸಾಬ ದೂಡ್ಡಮನಿ ಅವರ ಮನೆಗಳಿಗೆ ನೀರು ನುಗ್ಗಿ ಗೃಹೋಪಯೋಗಿ ವಸ್ತುಗಳು ಹಾನಿಗೊಳಗಾಗಿದ್ದು, ಕುಟುಂಬಗಳು ತೀವ್ರ ಸಂಕಷ್ಟ ಅನುಭವಿಸಿವೆ. ಮಳೆ ನೀರಿನಿಂದ ಮನೆಗಳ ಒಳಭಾಗ ಸಂಪೂರ್ಣ ಜಲಾವೃತಗೊಂಡು ನಿವಾಸಿಗಳು ನೀರನ್ನು ಹೊರಹಾಕಲು ಹರಸಾಹಸ ಪಟ್ಟರು.

ತಗ್ಗು ಪ್ರದೇಶಗಳು ಜಲಾವೃತ

ಹುಬ್ಬಳ್ಳಿ: ಹುಬ್ಬಳ್ಳಿಯಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಭಾರಿ ಮಳೆಗೆ ಹಲವು ತಗ್ಗು ಪ್ರದೇಶಗಳು, ಅಂಡರ್ ಬ್ರಿಡ್ಜ್‌ಗಳು ಹಾಗೂ ದಾಜಿಬಾನಪೇಟೆ ಸೇರಿದಂತೆ ಪ್ರಮುಖ ರಸ್ತೆಗಳು ಜಲಾವೃತಗೊಂಡಿವೆ. ಹುಬ್ಬಳ್ಳಿಯ ಚಿಟಗುಪ್ಪಿ ಆಸ್ಪತ್ರೆ ಬಳಿ ಇರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ಕಚೇರಿ ಆವರಣದಲ್ಲಿ ಬೃಹತ್ ಮರವೊಂದು ಧರೆಗುರುಳಿದೆ. ಮರವು ಅಲ್ಲಿ ನಿಲ್ಲಿಸಲಾಗಿದ್ದ ದ್ವಿಚಕ್ರ ವಾಹನಗಳ ಮೇಲೆ ಬಿದ್ದಿದ್ದು, ವಾಹನಗಳು ಜಖಂಗೊಂಡಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಹಳ್ಳದಲ್ಲಿ ಅಪರಿಚಿತ ಮಹಿಳೆ ಶವ

ಬಳ್ಳಾರಿ: ನಗರದ ಹೊರವಲಯದ ಅಂದ್ರಾಳ್ ಹಳ್ಳದಲ್ಲಿ ಅಪರಿಚಿತ ಮಹಿಳೆಯೊಬ್ಬರ ಮೃತದೇಹ ಭಾನುವಾರ ಬೆಳಗ್ಗೆ ಪತ್ತೆಯಾಗಿದೆ. ಶನಿವಾರ ರಾತ್ರಿ ಜಿಲ್ಲೆಯಾದ್ಯಂತ ಸುರಿದ ಭಾರಿ ಮಳೆಗೆ ಹಳ್ಳದಲ್ಲಿ ಉಂಟಾದ ಪ್ರವಾಹದಲ್ಲಿ ಮಹಿಳೆ ಕೊಚ್ಚಿಹೋಗಿರುವ ಶಂಕೆ ವ್ಯಕ್ತವಾಗಿದೆ. ಮಳೆಯ ಆರ್ಭಟಕ್ಕೆ ಅಂದ್ರಾಳ್ ಹಳ್ಳ ತುಂಬಿ ಹರಿಯುತ್ತಿತ್ತು. ಭಾನುವಾರ ಮುಂಜಾನೆ ಹಳ್ಳದ ಸಮೀಪ ಸಾರ್ವಜನಿಕರು ಹೋದಾಗ ಮಹಿಳೆಯ ಶವ ಸಿಲುಕಿಕೊಂಡಿರುವುದು ಬೆಳಕಿಗೆ ಬಂದಿದೆ.

ತಕ್ಷಣವೇ ಸಾರ್ವಜನಿಕರು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಗ್ರಾಮೀಣ ಠಾಣೆ ಪೊಲೀಸರು, ಮೃತದೇಹವನ್ನು ಹಳ್ಳದಿಂದ ಹೊರತೆಗೆದು ಪರಿಶೀಲನೆ ನಡೆಸಿದ್ದಾರೆ. ಮೃತ ಮಹಿಳೆಗೆ ಅಂದಾಜು 35ರಿಂದ 40 ವರ್ಷ ವಯಸ್ಸಾಗಿದ್ದು, ಸದ್ಯಕ್ಕೆ ಅವರ ಗುರುತು ಪತ್ತೆಯಾಗಿಲ್ಲ. ಮಹಿಳೆ ಆಕಸ್ಮಿಕವಾಗಿ ಕಾಲು ಜಾರಿ ಹಳ್ಳಕ್ಕೆ ಬಿದ್ದಿದ್ದಾರೆಯೇ ಅಥವಾ ರಸ್ತೆ ದಾಟುವಾಗ ನೀರಿನ ರಭಸಕ್ಕೆ ಕೊಚ್ಚಿಹೋಗಿದ್ದಾರೆಯೇ ಎಂಬ ಕುರಿತು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಜನರ ಮೇಲೆ ಕಾಳಜಿ ಇಲ್ಲದ ಕೇಂದ್ರ ಸರಕಾರ

ವಿಜಯಪುರ: ಮೋದಿ ಸರಕಾರ ಜನರ ಮೇಲೆ ಕಾಳಜಿ ಇಲ್ಲದೆ, ಜನರು ಹಾಳಾಗಿ ಹೋಗಲಿ ಎಂದು ಬೆಲೆ ಜಾಸ್ತಿ ಮಾಡಿದೆ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಕೇಂದ್ರ ಸರಕಾರದ ವಿರುದ್ಧ ಕಿಡಿಕಾರಿದರು. ಗ್ಯಾಸ್ ಬೆಲೆ ಏರಿಕೆ ವಿಚಾರವಾಗಿ ವಿಜಯಪುರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಬಿಜೆಪಿಯವರು ಯಾವಾಗಲೂ ಜನವಿರೋಧಿ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದಾಗಲೂ ಕೂಡ ಜನರಿಗೆ ಲಾಭ ಆಗುವ ಹಾಗೆ ಮಾಡಲಿಲ್ಲ. ಕಚ್ಚಾತೈಲ ಬೆಲೆ ಕಡಿಮೆ ಇದ್ದಾಗಲೂ ಕೂಡ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿ ಮಾಡಿದ್ದರು. ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಜಾಸ್ತಿ ಆಗಿದೆ. ಈಗ ಬೆಲೆ ಜಾಸ್ತಿ ಮಾಡಿದ್ದಾರೆ. ಕಚ್ಚಾತೈಲ ಬೆಲೆ ಕಡಿಮೆ ಇದ್ದಾಗ ಜನರಿಗೆ ಬೆಲೆ ಕಡಿಮೆ ಮಾಡಿದರೆ ಜನರಿಗೆ ಹೊರೆ ಆಗುತ್ತಿರಲಿಲ್ಲ. ಇದು ಜನರಿಗೆ ಹೊರೆ ಆಗುತ್ತೆ. ಇದರಿಂದ ಆರ್ಥಿಕ ವ್ಯವಸ್ಥೆ ಮೇಲೂ ಪರಿಣಾಮ ಬೀರುತ್ತದೆ ಎಂದರು.

ಹಣ ಪಡೆಯುವ ವೇಳೆ ಲೋಕಾ ದಾಳಿ, ಎಎಸ್‌ಐ, ಪೇದೆ ಬಂಧನ

ಪೋಕ್ಸೊ ಕೇಸ್ ತನಿಖೆಗೆ ಲಂಚಕ್ಕೆ ಬೇಡಿಕೆ

ಕಲಬುರಗಿ: ಪೋಕ್ಸೊ ಕೇಸ್ ತನಿಖೆ ನಡೆಸಲು ಸಂತ್ರಸ್ತೆ ಕುಟುಂಬಸ್ಥರಿಂದ 10 ಸಾವಿರ ರು. ಲಂಚಕ್ಕೆ ಬೇಡಿಕೆ ಇಟ್ಟ ಪ್ರಕರಣ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಜಿಲ್ಲೆ ಕಲಬುರಗಿಯಲ್ಲಿ ಬೆಳಕಿಗೆ ಬಂದಿರುವುದು ಪೊಲೀಸ್ ಇಲಾಖೆಯನ್ನು ಮುಜುಗರಕ್ಕೀಡು ಮಾಡಿದೆ.

ಕಲಬುರಗಿ ನಗರದ ಸ್ಟೇಷನ್ ಬಜಾರ್ ಠಾಣೆ ಮಹಿಳಾ ಪೇದೆ ಜ್ಯೋತಿ ಎಂಬಾಕೆ ಸಂತ್ರಸ್ತೆ ಕುಟುಂಬಸ್ಥರಿಂದ 10 ಸಾವಿರ ರು. ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಎಎಸ್‌ಐ ಶಿವಶರಣಪ್ಪ ಎಂಬವರ ಅಣತಿಯಂತೆ ಪೋಕ್ಸೊ ಪ್ರಕರಣ ಸಂಬಂಧ ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ತಯಾರಿಸಲು ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ಏನಿದು ಪ್ರಕರಣ?

ಇತ್ತೀಚೆಗಷ್ಟೇ ನಗರದಲ್ಲಿ ಚಿಂದಿ, ಪೇಪರ್ ಆಯುವ ಬಡ ಕುಟುಂಬದಲ್ಲಿ ಜನಿಸಿದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿತ್ತು. ಈ ಸಂಬಂಧ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದ ಚಾರ್ಜ್‌ಶೀಟ್ ಸಿದ್ಧಪಡಿಸುವ ಹಂತದಲ್ಲಿ, ಕೇಸ್ ನಿಮ್ಮ ಪರವಾಗಿ ಆಗುವಂತೆ ನೋಡಿಕೊಳ್ಳುತ್ತೇವೆ ಎಂದು ಠಾಣೆಯ ಸಿಬ್ಬಂದಿ ಸಂತ್ರಸ್ತೆಯ ಬಡ ಪೋಷಕರಿಂದಲೇ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಲಂಚ ಪಡೆಯುತ್ತಿದ್ದ ವೇಳೆ ಪೇದೆ ಸಿಕ್ಕಿಬಿದ್ದಿದ್ದಾರೆ. ಲೋಕಾ ದಾಳಿ ಮಾಹಿತಿ ತಿಳಿದ ಎಎಸ್‌ಐ ಶಿವಶರಣಪ್ಪ ಅವರು ಸ್ಥಳದಿಂದ ಕಾಲ್ಕಿತ್ತಿದ್ದರು. ಬಳಿಕ ಶಿವಶರಣಪ್ಪ ಅವರನ್ನು ಮತ್ತೊಂದು ಸ್ಥಳದಲ್ಲಿ ಲೋಕಾಯುಕ್ತರು ಬಂಧಿಸಿದ್ದಾರೆ.

- ಚಿಂದಿ ಆಯುವ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣ
- ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ತಯಾರಿಸಲು 10 ಸಾವಿರ ಖಾಕಿ ಲಂಚಕ್ಕೆ ಬೇಡಿಕೆ
- ಗೃಹ ಸಚಿವರ ತವರು ಜಿಲ್ಲೆಯಲ್ಲೇ ಪೊಲೀಸರ ನಡೆಗೆ ಸಾರ್ವಜನಿಕರಿಂದ ಭಾರೀ ಆಕ್ರೋಶ

ಸದ್ಯ ಈ ವಿಚಾರ ಜಿಲ್ಲೆಯಲ್ಲಿ ಭಾರೀ ಸದ್ದು ಮಾಡುತ್ತಿದ್ದು, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಜಿಲ್ಲೆಯಲ್ಲಿ ಅತ್ಯಂತ ಗಂಭೀರ ಪೋಕ್ಸೊ ಪ್ರಕರಣದಲ್ಲಿ ಈ ಮಟ್ಟದ ಭ್ರಷ್ಟಾಚಾರ ನಡೆದಿರುವುದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಮಿಂಚಿನ ದಾಳಿ: ಲೋಕಾ ಇನ್‌ಸ್ಪೆಕ್ಟರ್ ಅರುಣ್ ಮುರಗುಂಡಿ ನೇತೃತ್ವದ ದಾಳಿ ನಡೆಸಿ ರೆಡ್ ಹ್ಯಾಂಡ್ ಪೊಲೀಸ್ ಆವರಣದಲ್ಲೇ ಪೇದೆ ಜ್ಯೋತಿ ಅವರನ್ನು ಬಂಧಿಸಿದೆ.

ಫೈನಾನ್ಸ್ ಕಿರುಕುಳ ಯುವಕ ಆತ್ಮಹತ್ಯೆ

ಯಾದಗಿರಿ: ಖಾಸಗಿ ಫೈನಾನ್ಸ್ ಕಿರುಕುಳಕ್ಕೆ ಬೇಸತ್ತು ಯುವಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಪ್ರಕರಣ ಕೆಂಭಾವಿ ಪೊಲೀಸ್ ಠಾಣಾ ವ್ಯಾಪ್ತಿಯ ಕಾಚಾಪೂರ ಗ್ರಾಮದಲ್ಲಿ ನಡೆದಿದೆ.

ಸೋಮಪ್ಪ ಮಾದರ (30) ಮೃತದುರ್ದೈವಿ. ಕಳೆದೆರಡು ವರ್ಷಗಳ ಹಿಂದೆ ಶಹಾಪುರ ನಗರದ ಮಹೇಂದ್ರ ಫೈನಾನ್ಸ್‌ನಲ್ಲಿ ಸಾಲ ಪಡೆದು ಬುಲೆರೋ ಪಿಕಪ್ ವಾಹನ ಖರೀದಿ ಮಾಡಿದ್ದ ಎನ್ನಲಾಗಿದೆ.

ಕಳೆದ 5 ತಿಂಗಳಿನಿಂದ ವಾಹನದಿಂದ ದುಡಿಮೆ ಇಲ್ಲದ ಕಾರಣ ಕಂತು ಕಟ್ಟಲು ಆಗಿರಲಿಲ್ಲ. ಈ ವೇಳೆ ಫೈನಾನ್ಸ್ ಸಿಬ್ಬಂದಿ ಸತತವಾಗಿ ಕಿರುಕುಳ ಕೊಡುತ್ತಿದ್ದರು ಎಂದು ಆರೋಪಿಸಲಾಗಿದೆ. ಇದಕ್ಕೆ ಬೇಸತ್ತು ಯುವಕ ನೇಣು ಬೀಗಿದುಕೊಂಡು ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ಫೈನಾನ್ಸ್ ಕಿರುಕುಳದಿಂದಲೇ ಸೋಮಪ್ಪ ಸಾವನ್ನಪ್ಪಿದ್ದಾನೆ ಎಂದು ಯುವಕ ತಂದೆ ನಂದಪ ಮಾದರ ಕೆಂಭಾವಿ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಡಿಕೆಶಿ ಸಾರಥ್ಯದ ಸರಕಾರಕ್ಕೆ ಸುಭಿಕ್ಷಾಯೋಗ: ಶ್ರೀ ಚಂದ್ರಶೇಖರ ಸ್ವಾಮೀಜಿ ಭವಿಷ್ಯ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಾರಥ್ಯದ ಸರಕಾರದಿಂದ ರಾಜ್ಯದ ಜನತೆಗೆ ಮುಂದಿನ ದಿನದಲ್ಲಿ ಸುಭಿಕ್ಷಾ ಯೋಗ ಪ್ರಾಪ್ತಿಯಾಗಲಿದೆ ಎಂದು ಅಂತಾರಾಷ್ಟ್ರೀಯ ವಾಸ್ತುತಜ್ಞ, ವೈಜ್ಞಾನಿಕ ಜ್ಯೋತಿಷ್ಯ ಆಧ್ಯಾತ್ಮಿಕ ವಿಶ್ವಗುರು ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರು ತಮ್ಮ ಅಮೂಲಾಗ್ರ ಲೋಕಜ್ಞಾನ ಚಿಂತನೆಯ ಮೂಲಕ ರಾಜಕೀಯ ವಿಶ್ಲೇಷಣೆ ನುಡಿದಿದ್ದಾರೆ.

ಕರ್ನಾಟಕದ ಜಾತಕ 1-11-1956ರಂತೆ ಪೂರ್ಣ ನಾಯಕ್ವದ ಯೋಗ, ಡಿ.ಕೆ.ಶಿವಕುಮಾರ್ ಅವರ ಲಗ್ನ ಜಾತಕದಲ್ಲಿ 5 ಮತ್ತು 4ರ ಅಧಿಪತಿಗಳು, 2 ರಲ್ಲಿ, 2 ರ ಅಧಿಪತಿ ಉಚ್ಚ, ಕುಜ ಮತ್ತು ಗುರು ಪರಸ್ಪರ ವಿರುದ್ಧ ದಿಕ್ಕಿನಲ್ಲಿದ್ದು. ಆ ಪ್ರಕಾರ 2ರ ಜೂನ್‌ನ ನಂತರ ಗುರುಬಲ ಇಲ್ಲದಿದ್ದರೂ, ನವಗ್ರಹಗಳ ಅಧಿಪತಿ ಶ್ರೀವೆಂಕಟೇಶ್ವರ ಸ್ವಾಮಿಯ ದರ್ಶನ, ಹಾಗೂ ಮುಖ್ಯಮಂತ್ರಿಗಳ ಪೂರ್ವ ಪುಣ್ಯ ಮತ್ತು ಇಷ್ಟ ದೇವರ ದೈವ ಕೃಪೆಯಿಂದಾಗಿ ಸ್ಥಿರ ಸರಕಾರದತ್ತ ದಾಪುಗಾಲನ್ನು ಇಡಲಾಗುತ್ತಿದೆ.

ಇದಕ್ಕೆ ಮುಖ್ಯ ಕಾರಣ ಮುಖ್ಯಮಂತ್ರಿಗಳ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿರುವ ಡಾ.ಜಿ.ಪರಮೇಶ್ವರ್ ಅವರ ಜಾತಕವು ಅಷ್ಟೇ ಮುಖ್ಯವಾಗಿದೆ. ಅವರಿಗೆ ಜಾತಕದಲ್ಲಿ ಯೋಗಾಕರಕ ಶನಿ ಮಹಾರಾಜರ ಪರಿಪೂರ್ಣ ಆಶೀರ್ವಾದ ಇರುವುದರಿಂದ ಹಾಗೂ ಇವರು ಸರಕಾರದ ಒಂದು ಭಾಗವೂ ಆಗಿರುವುದರಿಂದ ಎಲ್ಲಾ ರೀತಿಯ ಅಡೆತಡೆಯನ್ನು ದಾಟಿ ಸರಕಾರವು ಸುಭದ್ರವಾಗಿ ತನ್ನ ಆಡಳಿತ ನಡೆಸುತ್ತದೆ. ಈ ಸರಕಾರವು ರಾಜ್ಯದ ರೈತರ, ಶೋಷಿತ ವರ್ಗಗಳ ಯುವ ಸಮುದಾಯದ, ದೀನ, ದಲಿತರ, ಕಾರ್ಮಿಕ ವರ್ಗದವರ ಪ್ರೀತಿ, ವಿಶ್ವಾಸ ಗಳಿಸುತ್ತಾ, ಜನರು ಬಯಸಿದಂತ ಆಡಳಿತವನ್ನು ನೀಡುವಲ್ಲಿ ಸಫಲರಾಗುತ್ತಾರೆ.

ಆರಂಭಿಕ ವಿಘ್ನಗಳಿಂದ ಸರಕಾರಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ. ಇದೆಲ್ಲ ಕ್ಷಣಿಕ ಮಾತ್ರ ಎಂದು ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ.

ಸುಭಿಕ್ಷಾ ಯೋಗ ಎಂದರೇನು?

ಸುಭಿಕ್ಷಾ ಎಂದರೆ ಸಮೃದ್ಧಿ, ಸಂಪತ್ತು, ಹಾಗೂ ಒಳ್ಳೆಯ ಪರ್ವಕಾಲ ಎಂದರ್ಥ. ಇದು ಯಾವುದೇ ಬರಗಾಲವಿಲ್ಲದೆ, ಭೂಮಿಯಲ್ಲಿ ಎಲ್ಲವೂ ಹೇರಳವಾಗಿ ಸಿಗುವ ಸ್ಥಿತಿಯನ್ನು ಸೂಚಿಸುತ್ತದೆ. ಜೋತಿಷ್ಯದ ಪ್ರಕಾರ, ಸುಭಿಕ್ಷಾ ಯೋಗ ಎಂಬುದು ಯಾವುದೇ ನಿರ್ದಿಷ್ಟ ಗ್ರಂಥಗಳಲ್ಲಿರುವ ಯೋಗವಲ್ಲ. ಇದು ಸುಭಿಕ್ಷ (ಸಮೃದ್ಧಿ) ಮತ್ತು ಯೋಗ (ಆಧ್ಯಾತ್ಮಿಕ ಅಭ್ಯಾಸ) ಪದಗಳ ಸಂಯೋಜನೆಯಾಗಿಯೂ ವಿಶ್ಲೇಷಿಸಬಹುದು. ಕರ್ನಾಟಕ ರಾಜ್ಯವು ಮುಂದಿನ ದಿನದಲ್ಲಿ ಸಂಪದ್ಭರಿತ ದಿನವಾಗಿ ಪರಿವರ್ತನೆಯಾಗಲಿ ಎಂಬ ಆಶಯ ಸಮಸ್ತ ನಾಗರಿಕರದ್ದಾಗಿದೆ ಎಂಬುದು ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರ ಅಭಿಪ್ರಾಯವಾಗಿದೆ.



ಡಿ.ಕೆ.ಶಿವಕುಮಾರ್‌ಗೆ ವೆಂಕಟೇಶ್ವರನ ದರ್ಶನದಿಂದ ಮುಖ್ಯಮಂತ್ರಿ ಸ್ಥಾನ ಲಭ್ಯ

ಡಿ.ಕೆ.ಶಿವಕುಮಾರ್ ಅವರಿಗೆ ಪ್ರಸ್ತುತ ಶನಿಮಹಾದೆಶೆ ಕುಜ ಭುಕ್ತಿ, ಪೂರ್ಣ ಪ್ರಮಾಣದ ಫಲ ಶನಿ ದಶಮ, ಗುರು ಜತೆ ಧರ್ಮ ಕರ್ಮ ಕಾರಕರ ಸಂಚಾರ. ದಶಫಲ ಅಧಿಕಾರ ನೀಡಿರುತ್ತಾರೆ. ಗೋಚಾರದಲ್ಲಿ ಅಜಾತಶತ್ರು ಫಲವಿದ್ದರೂ ಅವರು ತಿರುಪತಿ ತಿರುಮಲ ಕ್ಷೇತ್ರಕ್ಕೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿದರ ಫಲವೇ ಇಂದು ಮುಖ್ಯಮಂತ್ರಿಯಾಗಿ ನಿಯುಕ್ತಿಗೊಳ್ಳಲು ಸಾಧ್ಯವಾಗಿದೆ. ಶ್ರೀ ಚಂದ್ರಶೇಖರ ಸ್ವಾಮೀಜಿಯವರು ಈ ಹಿಂದೆಯೂ ಅನೇಕ ಬಾರಿ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದ ಕರಾರುವಕ್ಕಾಗಿ ಭವಿಷ್ಯದ ಚಿಂತನೆ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು. ಮುಖ್ಯಮಂತ್ರಿಯವರು ಜನ್ಮದಿನಕ್ಕೆ ನವಗ್ರಹಗಳ ಅಧಿಪತಿ ಶ್ರೀ ವೆಂಕಟೇಶ್ವರ ಸ್ವಾಮಿಯ ದರ್ಶನ ಪಡೆದಿರುವುದು ವಿಶೇಷ. ಕಲಿಯುಗದ ಪ್ರತ್ಯಕ್ಷ ದೈವವಾದ ವೆಂಕಟೇಶ್ವರ ಸ್ವಾಮಿಯಪೂರ್ಣ ಆಶೀರ್ವಾದದಿಂದ ಸ್ಥಿರವಾದ ಸರಕಾರ ನೀಡುವಲ್ಲಿ ಮುಖ್ಯಮಂತ್ರಿಗಳು ಯಶಸ್ಸು ಕಾಣಲಿ ಎಂದು ಸ್ವಾಮೀಜಿ ಹರಸಿದ್ದಾರೆ.

ಸಂಪಾದಕೀಯ

ಸಿದ್ಧಾಂತಗಳ ಅವಸಾನ

ರಾಜಕೀಯದಲ್ಲಿ ತತ್ವ, ಸಿದ್ಧಾಂತ, ಸೈದ್ಧಾಂತಿಕ ಬದ್ಧತೆ ಮುಂತಾದವುಗಳನ್ನು ಅಪೇಕ್ಷಿಸುವವರಿಗೆ ಇದು ಕಷ್ಟದ ಕಾಲ. ಎರಡು ರಾಜ್ಯಗಳ ರಾಜಕೀಯ ಬೆಳವಣಿಗೆಗಳನ್ನು ಇಲ್ಲಿ ಗಮನಿಸಬಹುದು. ತಮಿಳುನಾಡಿನಲ್ಲಿ ಎಐಡಿಎಂಕೆಗೆ ಮತ್ತೆ ಶಾಕ್ ಎಂಬಂತೆ ನಾಲ್ವರು ಮಾಜಿ ಸಚಿವರು ಮತ್ತು ಮಾಜಿ ಶಾಸಕರು ಆಡಳಿತಾರೂಢ ತಮಿಳಗ ವೆಟ್ರಿ ಕಳಗಂಗೆ ಸೇರಿದ್ದಾರೆ. 300ಕ್ಕೂ ಹೆಚ್ಚು ಎಐಎಡಿಎಂಕೆ ಸದಸ್ಯರು ಟಿವಿಕೆಗೆ ಸೇರ್ಪಡೆಗೊಂಡಿದ್ದಾರೆ. ಚುನಾವಣಾ ಹಿನ್ನಡೆಯ ನಂತರ 25 ಎಐಎಡಿಎಂಕೆ ಶಾಸಕರ ಬಂಡಾಯ ಗುಂಪು ಪಕ್ಷದ ವಿಪ್ ಅನ್ನು ಧಿಕ್ಕರಿಸಿ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ವಿಧಾನಸಭೆಯಲ್ಲಿ ಮಂಡಿಸಿದ ವಿಶ್ವಾಸಮತ ಯಾಚನೆಯನ್ನು ಬೆಂಬಲಿಸಿತ್ತು. ಇನ್ನೊಂದು ಕಡೆ, ಕಾಂಗ್ರೆಸ್ ಡಿಎಂಕೆಯ ದೀರ್ಘಕಾಲದ ಮಿತ್ರ ಪಕ್ಷವಾಗಿದ್ದರೂ ವಿಜಯ್ ಅವರ ಟಿವಿಕೆ ಜೊತೆ ಕೈಜೋಡಿಸಿ ವಿಶ್ವಾಸಮತ ಬೆಂಬಲಿಸಿತ್ತು. ಅಂದರೆ, ಅಧಿಕಾರ ಎಲ್ಲಿ ಇದೆಯೋ ಆ ಕಡೆಗೆ ಈ ಪಕ್ಷಗಳು, ಅದರ ಸದಸ್ಯರು ಸಾಗುತ್ತಿರುವುದು ಸ್ಪಷ್ಟ. ಟಿವಿಕೆಯನ್ನು ಬೆಂಬಲಿಸುವ ಹಂತದಲ್ಲಿ ಈ ಎರಡೂ ಪಕ್ಷಗಳ ನಾಯಕರಿಗೂ ತಮ್ಮ ಸಾಂಪ್ರದಾಯಿಕ ವೈರ ಪರಿಗಣನೆಗೆ ಬಂದಿಲ್ಲ. ಪಶ್ಚಿಮ ಬಂಗಾಳದಲ್ಲೂ ಇದೇ ಸ್ಥಿತಿ ಕಾಣಿಸುತ್ತಿದೆ. ಅಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಇಬ್ಭಾಗವಾಗಿದೆ. ಒಂದು ಬಲಿಷ್ಠ ಬಣ ಬಿಜೆಪಿಯತ್ತ ಚಲಿಸುತ್ತಿದೆ. ಈ ರಾಜಕೀಯ ಬಿಕ್ಕಟ್ಟನ್ನು ನಿಭಾಯಿಸಲು ಮಮತಾ ಅಸಫಲರಾಗಿದ್ದಾರೆ. ಬಿಜೆಪಿ ಹಾಗೂ ಕಮ್ಯುನಿಸ್ಟ್ ಪಕ್ಷಗಳ ರಾಜಕಾರಣವವನ್ನು ವಿರೋಧಿಸುತ್ತಲೇ ಮಮತಾ ತಮ್ಮ ಪಕ್ಷವನ್ನು ಕಟ್ಟಿಕೊಂಡಿದ್ದಾರೆ. ಇದೀಗ ಅವರ ವಿಚಾರಗಳಿಗೆ ಅವರ ಪಕ್ಷದಲ್ಲೇ ಯಾವ ಗೌರವವೂ ಇಲ್ಲದಂತಾಗಿದೆ. ಹಾಗೆಯೇ ತಮಿಳುನಾಡಿನಲ್ಲಿ ಅಣ್ಣಾಮಲೈ ಅವರು ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ. ತಮ್ಮದೇ ಆದ ಸಂಘಟನೆಯನ್ನು ಬಲಿಷ್ಠಗೊಳಿಸಲು, ಮುಂದೊಮ್ಮೆ ರಾಜಕೀಯಕ್ಕೆ ಇಳಿಸಲು ನಿರ್ಧರಿಸಿದಂತಿದೆ. ಅವರಿಗೂ ಬಿಜೆಪಿಯ ಸಿದ್ಧಾಂತ ಬೇಡವಾಗಿದೆ. ಇನ್ನೊಂದು ಕಡೆಯಲ್ಲಿ ಹೊಸದಾಗಿ ಹುಟ್ಟಿಕೊಂಡಿರುವ 'ಕಾಕ್ರೋಚ್ ಜನತಾ ಪಾರ್ಟಿ' ಅದರ ನಾಯಕ ಅಭಿಜಿತ್ ದೀಪ್ಕೆ ನಾಯಕತ್ವದಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದೆ. ಮೋದಿ ಸರಕಾರದ ವಿರೋಧ ಎಂಬ ಒನ್‌ಲೈನ್ ಅಜೆಂಡಾ ಹೊರತುಪಡಿಸಿ ಇನ್ಯಾವುದೇ ಧ್ಯೇಯ ಆ ಸಂಘಟನೆಯಲ್ಲಿ ಇರುವಂತೆ ಕಾಣುತ್ತಿಲ್ಲ. ತತ್ವ- ಧ್ಯೇಯ- ಸಿದ್ಧಾಂತಗಳು ಅಧಿಕಾರ ಪಡೆಯುವವರೆಗೂ ಮಾತ್ರ, ಅದು ಸಿಗದೇ ಹೋದಲ್ಲಿ ಅವುಗಳಿಗೆ ಯಾವ ಅರ್ಥವೂ ಇಲ್ಲ ಎಂದು ತೀರ್ಮಾನಿಸಿದಾಗ ಇಂಥ ಕ್ಷಿಪ್ರ ಬೆಳವಣಿಗೆಗಳು ಸಂಭವಿಸುತ್ತವೆ.

ಸೊಂಪಾದಕೀಯ

ಸೊಸೆ ತಲೆ ಮೇಲೆ ಅತ್ತೆ

'ಯಾರನ್ನೂ ತಲೆ ಮೇಲೆ ಹೊತ್ತು ಮೆರೆಸಬಾರದು' ಎನ್ನುವ ಮಾತು ಇದೆ. ಆದರೆ ಹರಿಯಾಣದ ಸೊಸೆಯೊಬ್ಬಳು ಈ ಮಾತನ್ನು ಲಕ್ಷ್ಯಕ್ಕೆ ತೆಗೆದುಕೊಂಡಿಲ್ಲ. ಬದಲಾಗಿ, ತನ್ನ ಅತ್ತೆಯನ್ನು ಅಕ್ಷರಶಃ 'ತಲೆಯ ಮೇಲೆ ಹೊತ್ತು' ಮೆರೆಸಿದ್ದಾಳೆ. ಅತ್ತೆ- ಸೊಸೆ ಸಂಬಂಧದ ಬಗ್ಗೆ ಈ ಸಮಾಜ ಜೋಕ್ ಮಾಡುವುದು ನಗುವುದು ಅಷ್ಟಿಷ್ಟಲ್ಲ. ಇದರಲ್ಲಿ ನಿಜವೆಷ್ಟು, ಸುಳ್ಳೆಷ್ಟು ಎಂಬುದು ಆಯಾ ಮನೆಯ ಪುರುಷ ಸಿಂಹಗಳಿಗಲ್ಲದೇ ಬೇರೆ ಯಾರಿಗೂ ಗೊತ್ತಿರಲು ಸಾಧ್ಯವಿಲ್ಲ. ಈ ಸುದ್ದಿ ನೋಡಿ- ಹರಿಯಾಣದ ಪ್ರಸಿದ್ಧ ಜಾನಪದ ಗಾಯಕಿ ಕಾಜಲ್ ಚೌಧರಿ ನಡೆಯಲು ಸಾಧ್ಯವಾಗದ ತಮ್ಮ 90 ವರ್ಷದ ಅತ್ತೆಯನ್ನು ವಿಶೇಷವಾಗಿ ಸಿದ್ಧಪಡಿಸಿದ ಪ್ಲಾಸ್ಟಿಕ್ ಬುಟ್ಟಿಯಲ್ಲಿ ಕೂರಿಸಿಕೊಂಡು, ಆ ಬುಟ್ಟಿಯನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಬರೋಬ್ಬರಿ 260 ಕಿಲೋಮೀಟರ್ ದೂರದ ಪವಿತ್ರ 'ಬ್ರಜ್ ಪರಿಕ್ರಮ' ಯಾತ್ರೆಯನ್ನು ಕೈಗೊಂಡಿದ್ದಾರೆ. ಕಾಜಲ್ ಅವರ 90 ವರ್ಷದ ಅತ್ತೆ ಚಂದ್ರಿ ದೇವಿ ಅವರಿಗೆ ಶ್ರೀಕೃಷ್ಣನ ಪವಿತ್ರ ಭೂಮಿಯಾದ ಬ್ರಜ್ ಪ್ರದೇಶದ 260 ಕಿ.ಮೀ ಉದ್ದದ ಧಾರ್ಮಿಕ ಪ್ರದಕ್ಷಿಣೆ ಮಾಡಬೇಕೆಂಬ ಕನಸು. ಆದರೆ ವಯೋಸಹಜ ನಿಶ್ಯಕ್ತಿ. ನಡೆಯಲು ಸಾಧ್ಯವಿಲ್ಲ. ಅತ್ತೆಯ ಆಸೆಯನ್ನು ತಿಳಿದ ಸೊಸೆ ಕಾಜಲ್, ತಾವೇ ಅವರನ್ನು ಹೊತ್ತುಕೊಂಡು ಹೋದರು. ಇದೇನೂ ವಿನೋದದ ಸಂಗತಿ ಅಲ್ಲ. ನೆಟ್ಟಿಗರು ಕಾಜಲ್ ಚೌಧರಿ ಅವರನ್ನು 'ಆಧುನಿಕ ಕಾಲದ ಶ್ರವಣ ಕುಮಾರಿ' ಎಂದು ಕೊಂಡಾಡುತ್ತಿದ್ದಾರೆ. 'ನಾಳೆ ನಮ್ಮ ಅತ್ತೆಯೂ ನಮ್ಮ ತಲೆ ಮೇಲೆ ಕುಳಿತು ತೀರ್ಥಯಾತ್ರೆ ಹೋಗು ಎಂದು ದಬಾಯಿಸಿದರೆ ಏನು ಮಾಡಲಿ?' ಎಂದು ಕೆಲವು ಸೊಸೆಯರು ಸಿಡಿಮಿಡಿ ಮಾಡಿದ್ದಾರಂತೆ!

ಸಂಪಾದಕರ ಸದ್ಯಶೋಧನೆ

ರಾಜ್ ಕಪೂರ್- ಲತಾ ಮಂಗೇಶ್ಕರ್

ಇತ್ತೀಚೆಗೆ ವಾಟ್ಸಾಪ್‌ನಲ್ಲಿ ಯಾರೋ ಒಂದು ಫೋಟೋ ಕಳಿಸಿದ್ದರು. ಬಾಯಲ್ಲಿ ಸಿಗರೇಟ್ ಕಚ್ಚಿದ ಬಾಲಿವುಡ್‌ನ ಮಹಾನ್ 'ಶೋಮ್ಯಾನ್' ರಾಜ್ ಕಪೂರ್, ಭಾರತದ ಗಾನ ಕೋಗಿಲೆ ಲತಾ ಮಂಗೇಶ್ಕರ್ ತಲೆಗೆ ಎಣ್ಣೆ ಹಚ್ಚುತ್ತಿರುವ ಫೋಟೋ ಅದು. ಕೇವಲ ಇಬ್ಬರು ಕಲಾ ದಿಗ್ಗಜರ ಭೇಟಿಯಲ್ಲ, ಅದು ಭಾರತೀಯ ಸಿನಿಮಾ ಸುವರ್ಣ ಯುಗದ ಇಬ್ಬರು ಅಪ್ರತಿಮ ಸಾಧಕರ ಅತ್ಯಂತ ಆಪ್ತ, ಪವಿತ್ರ ಮತ್ತು ಕೌಟುಂಬಿಕ ಬಾಂಧವ್ಯದ ದ್ಯೋತಕವಾಗಿದೆ. ಚಿತ್ರೀಕರಣದ ಗದ್ದಲ, ಸ್ಟುಡಿಯೋಗಳ ತಾಂತ್ರಿಕತೆ ಹಾಗೂ ತಾರಾಗಣದ ಪ್ರಭಾವಳಿಯಿಂದ ಆಚೆಗೆ, ತೆರೆಯ ಮರೆಯ ಈ ದೃಶ್ಯವು ಅವರಿಬ್ಬರ ನಡುವಿದ್ದ ಮುಗ್ಧ ಮತ್ತು ಗಾಢವಾದ ಒಡನಾಟವನ್ನು ಪರಿಚಯಿಸುತ್ತದೆ. ರಾಜ್ ಕಪೂರ್ ಅವರು ಲತಾ ಮಂಗೇಶ್ಕರ್ ಅವರನ್ನು ಕೇವಲ ಒಬ್ಬ ಹಿನ್ನೆಲೆ ಗಾಯಕಿಯಾಗಿ ನೋಡಲಿಲ್ಲ; ಬದಲಿಗೆ ಅವರನ್ನು ತಮ್ಮ ಸ್ವಂತ ಕಿರಿಯ ಸಹೋದರಿಯಂತೆ ಭಾವಿಸಿದ್ದರು ಮತ್ತು ಅವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಲತಾ ಅವರೂ ಅಷ್ಟೇ, ರಾಜ್ ಕಪೂರ್ ಅವರನ್ನು ಒಬ್ಬ ಯಶಸ್ವಿ ನಿರ್ದೇಶಕ

ಅಥವಾ ನಟನಾಗಿ ನೋಡದೇ, ಹಿರಿಯ ಅಣ್ಣನ ಸ್ಥಾನದಲ್ಲಿಟ್ಟು ಗೌರವಿಸುತ್ತಿದ್ದರು. ಲತಾ ಮಂಗೇಶ್ಕರ್ ಅವರಿಗೆ ಕಪೂರ್ ಕುಟುಂಬದೊಂದಿಗೆ ನಿಕಟವಾದ ಸಂಬಂಧವಿತ್ತು. ಈ ಕೌಟುಂಬಿಕ ಒಡನಾಟ ಸ್ಟುಡಿಯೋದ ನಾಲ್ಕು ಗೋಡೆಗಳ ಮಧ್ಯೆ ಮುಗಿಯುವಂಥದ್ದಾಗಿರಲಿಲ್ಲ. ರಾಜ್ ಕಪೂರ್ ಮಕ್ಕಳಾದ ರಿಷಿ ಕಪೂರ್ ಸೇರಿದಂತೆ ಕಪೂರ್ ಕುಟುಂಬದ ಮುಂದಿನ ತಲೆಮಾರಿನ ಮಕ್ಕಳ ಮೇಲೂ ಲತಾ ಅವರಿಗೆ ಅಪಾರ ಪ್ರೀತಿ ಇತ್ತು. ಪರಸ್ಪರರ ಮನೆಗಳಿಗೆ ಭೇಟಿ ನೀಡುವುದು, ಹಬ್ಬ ಹರಿದಿನಗಳಲ್ಲಿ ಜತೆಯಾಗುವುದು, ಕಷ್ಟ ಸುಖಗಳಿಗೆ ಹೆಗಲಾಗುವುದು ಅವರ ಜೀವನದ ಭಾಗವಾಗಿತ್ತು. ಸಂಗೀತ ನಿರ್ದೇಶಕ ಮತ್ತು ಗಾಯಕಿ ಎನ್ನುವ ವೃತ್ತಿಪರ ಸಂಬಂಧವನ್ನು ಮೀರಿ, ರಕ್ತಸಂಬಂಧಕ್ಕಿಂತಲೂ ಮಿಗಿಲಾದ ಪ್ರೀತಿ ಅವರ ನಡುವೆ ಸದಾ ಹರಿಯುತ್ತಿತ್ತು. ರಾಜ್ ಕಪೂರ್ ಮತ್ತು ಲತಾ ಮಂಗೇಶ್ಕರ್ ನಡುವಿದ್ದ ಈ ಪರಸ್ಪರ ಗೌರವ ಹಾಗೂ ಆಳವಾದ ತಿಳಿವಳಿಕೆಯು ರಾಜ್ ಕಪೂರ್ ಅವರ ಚಲನಚಿತ್ರಗಳ ಹಾಡುಗಳಲ್ಲಿ ಅತ್ಯಂತ ಸ್ಪಷ್ಟವಾಗಿ ಪ್ರತಿಫಲಿಸುತ್ತಿತ್ತು. ರಾಜ್ ಕಪೂರ್ ಅವರು ದೃಶ್ಯಗಳನ್ನು ಕಲ್ಪಿಸುವಲ್ಲಿ ಮಾಂತ್ರಿಕರಾಗಿದ್ದರೆ, ಅದಕ್ಕೆ ಜೀವ ತುಂಬುವ ಶಕ್ತಿ ಲತಾ ಧ್ವನಿಗೆ ಇತ್ತು. ಆರ್. ಕೆ. ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಬಂದ 'ಬಾಬಿ' ಮತ್ತು 'ಸತ್ಯಂ ಶಿವಂ ಸುಂದರಂ'ನಂಥ ಸುಪ್ರಸಿದ್ಧ ಚಲನಚಿತ್ರಗಳ ಹಾಡುಗಳು ಇಂದಿಗೂ ಅಮರವಾಗಲು ಇವರಿಬ್ಬರ ಅದ್ಭುತ ಜುಗಲ್‌ಬಂದಿಯೇ ಕಾರಣ. ರಾಜ್ ಕಪೂರ್ ಸಿನಿಮಾಗಳಲ್ಲಿ ಸಂಗೀತಕ್ಕೆ ಯಾವಾಗಲೂ ಅಗ್ರಸ್ಥಾನವಿರುತ್ತಿತ್ತು. ಲತಾ ಅವರ ದೈವಿಕ ಕಂಠವು ರಾಜ್ ಕಪೂರ್ ಅವರ ಸಿನಿಮಾಗಳ ದೊಡ್ಡ ಆಕರ್ಷಣೆಯಾಗಿತ್ತು. ಲತಾ ಧ್ವನಿಯಿಲ್ಲದೇ ತಮ್ಮ ಚಿತ್ರದ ಕಲ್ಪನೆ ಅಪೂರ್ಣ ಎಂದು ಸ್ವತಃ ರಾಜ್ ಕಪೂರ್ ಅವರೇ ಹಲವು ಬಾರಿ ಹೇಳಿಕೊಂಡಿದ್ದರು. ವಿಶೇಷವಾಗಿ 'ಸತ್ಯಂ ಶಿವಂ ಸುಂದರಂ' ಚಿತ್ರದ ಶೀರ್ಷಿಕೆ ಗೀತೆಯನ್ನು ಲತಾ ಧ್ವನಿ ಮತ್ತು ವ್ಯಕ್ತಿತ್ವವನ್ನು ಮನಸ್ಸಿನಲ್ಲಿಟ್ಟುಕೊಂಡೇ ರೂಪಿಸಲಾಗಿತ್ತು ಎನ್ನಲಾಗುತ್ತದೆ. ಕಲಾವಿದನೊಬ್ಬನ ಸೃಷ್ಟಿಗೆ ಗಾಯಕಿಯೊಬ್ಬರ ಧ್ವನಿ ಹೇಗೆ ಪರಕಾಯ ಪ್ರವೇಶ ಮಾಡಬಲ್ಲದು ಎಂಬುದಕ್ಕೆ ಇವರಿಬ್ಬರ ಒಡನಾಟವೇ ಅತ್ಯುತ್ತಮ ಉದಾಹರಣೆ. ಯಾವುದೇ ಗಾಢವಾದ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳು ಸಹಜ. ರಾಜ್ ಕಪೂರ್ ಮತ್ತು ಲತಾ ನಡುವೆಯೂ ಇಂಥದ್ದೇ ಒಂದು ಘಟನೆ ನಡೆದಿತ್ತು. ಹಾಡುಗಳ 'ರಾಯಲ್ಟಿ' (ಸಂಗೀತದ ಹಕ್ಕುಗಳ ಲಾಭದ ಪಾಲು) ವಿಷಯವಾಗಿ ಇವರಿಬ್ಬರ ನಡುವೆ ತೀವ್ರ ಭಿನ್ನಾಭಿಪ್ರಾಯ ಮತ್ತು ಸಣ್ಣ ಮಟ್ಟದ ವಾಗ್ವಾದ ನಡೆದಿತ್ತು. ಚಿತ್ರರಂಗದ ಗಾಯಕರಿಗೆ ರಾಯಲ್ಟಿ ಸಿಗಲೇಬೇಕು ಎಂದು ಲತಾ ಕಟ್ಟುನಿಟ್ಟಿನ ನಿಲುವು ತಳೆದಿದ್ದರು. ಆದರೆ ನಿರ್ಮಾಪಕರ ದೃಷ್ಟಿಕೋನದಿಂದ ರಾಜ್ ಕಪೂರ್ ಆಲೋಚನೆ ಬೇರೆಯದೇ ಆಗಿತ್ತು. ಈ ವಿಷಯವಾಗಿ ಇಬ್ಬರ ನಡುವೆ ಸಣ್ಣ ಬೇಸರ ಮೂಡಿ, ಕೆಲವು ಕಾಲ ಒಟ್ಟಿಗೆ ಕೆಲಸ ಮಾಡುವುದನ್ನು ನಿಲ್ಲಿಸಿದ್ದರು. ಆದರೆ, ಈ ತಾತ್ಕಾಲಿಕ ಮುನಿಸು ಅಥವಾ ವೃತ್ತಿಪರ ಭಿನ್ನಾಭಿಪ್ರಾಯಗಳು ಅವರ ಮನಸ್ಸಿನಲ್ಲಿದ್ದ ಪರಸ್ಪರ ಗೌರವವನ್ನು ಕದಡಲು ಸಾಧ್ಯವಾಗಲಿಲ್ಲ, ಕಲೆ ಮತ್ತು ಸಂಗೀತದ ವಿಷಯ ಬಂದಾಗ ಅವರಿಬ್ಬರ ನಡುವಿನ ಗೌರವ ಅಚಲವಾಗಿ ಉಳಿಯಿತು.

ಟೇಕ್ ಆಫ್ ಆಗುತ್ತಿದೆ ಡಿಕೆ ಫ್ಲೈಟ್

ಮೂರ್ತಿಪೂಜೆ

ಆರ್.ಟಿ. ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪ್ರಮಾಣ ವಚನ ಸಮಾರಂಭಕ್ಕೆ ಬಂದಿದ್ದ ರಾಹುಲ್ ಗಾಂಧಿ ವಿಮಾನ ನಿಲ್ದಾಣದಲ್ಲಿ ಒಂದು ಚೀಟಿ ಹೊರತೆಗೆದರಂತೆ. ಅವರೇನು ಮಾಡುತ್ತಾರೆ ಅಂತ ಮುಖ್ಯಮಂತ್ರಿಗಳು ನೋಡುತ್ತಿದ್ದಂತೆಯೇ ಅವರ ಕೈಗೆ ರಾಹುಲ್ ಗಾಂಧಿ ಈ ಚೀಟಿಯನ್ನು ಕೊಟ್ಟಿದ್ದಾರೆ.

ಅವರು ಕೊಟ್ಟ ಚೀಟಿಯನ್ನು ಡಿ.ಕೆ.ಶಿವಕುಮಾರ್ ಅವರು ಬಿಚ್ಚಿ ನೋಡಿದರೆ ಅದರಲ್ಲಿ ಕೃಷ್ಣ ಭೈರೇಗೌಡರ ಹೆಸರು ಕಾಣಿಸಿದೆ. ಅದನ್ನು ಅವರು ನೋಡುತ್ತಿದ್ದಂತೆಯೇ ರಾಹುಲ್ ಗಾಂಧಿ ಅವರು: 'ಶಿವಕುಮಾರ್ ಜೀ, ಸಂಪುಟ ಸದಸ್ಯರಿಗೆ ಖಾತೆ ಹಂಚುವಾಗ ಕೃಷ್ಣ ಭೈರೇಗೌಡರಿಗೆ ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನು ಕೊಡಿ. ಯಾವ ಕಾರಣಕ್ಕೂ ತಪ್ಪಿಸಬೇಡಿ' ಎಂದಿದ್ದಾರೆ.

ಸರಿ, ರಾಹುಲ್ ಗಾಂಧಿಯವರೇ ಪರ್ಸನಲ್ ಇಂಟ್ರೆಸ್ಟು ತೋರಿಸಿದ ಮೇಲೆ ಡಿ.ಕೆ.ಶಿವಕುಮಾರ್ ಏನು ಮಾಡಲು ಸಾಧ್ಯ? ಹಾಗಂತಲೇ ಸಂಪುಟಕ್ಕೆ ಸೇರ್ಪಡೆಯಾದವರಿಗೆ ಖಾತೆ ಹಂಚುವಾಗ ಕೃಷ್ಣ ಭೈರೇಗೌಡರಿಗೆ ಬೆಂಗಳೂರು ನಗರಾಭಿವೃದ್ಧಿ ಖಾತೆ ಕೊಟ್ಟಿದ್ದಾರೆ.

ಆದರೆ ಹೀಗೆ ಕೊಡುವ ಹೊತ್ತಿಗಾಗಲೇ ಅವರಿಗೆ ಒಂದು ವಿಷಯ ಕನ್ ಫರ್ಮ್ ಆಗಿದೆ. ಅದೆಂದರೆ ಖಾತೆ ಹಂಚಿಕೆಯ ವಿಷಯದಲ್ಲಿ ಯಾವತ್ತೂ ಮೂಗು ತೂರಿಸದ ರಾಹುಲ್ ಗಾಂಧಿ ಈಗ ಕರ್ನಾಟಕದಲ್ಲಿ ತಮಗೆ ಪರ್ಯಾಯವಾಗಿ ಪವರ್ ಸೆಂಟರ್ ಆಗಿರುವ ನಾಯಕರೊಬ್ಬರ ಮಾತಿನ ಪ್ರಕಾರ ಈ ಕೆಲಸ ಮಾಡಿದ್ದಾರೆ ಎಂಬುದು. ಅಷ್ಟೇ ಅಲ್ಲ, ಇದು ತಮ್ಮ ಸರಕಾರವನ್ನು ಕಟ್ಟಿಹಾಕುವ ಮೊದಲ ಯತ್ನ ಎಂಬುದೂ ಕನ್‌ಫರ್ಮ್ ಆಗಿದೆ.

ಅವರ ಈ ಲೆಕ್ಕಾಚಾರ ಸುಳ್ಳಾಗಿಲ್ಲ, ಯಾಕೆಂದರೆ ತಮಗೆ ಜಲಸಂಪನ್ಮೂಲ ಖಾತೆ ಕೊಟ್ಟು ಕೃಷ್ಣ ಭೈರೇಗೌಡರಿಗೆ ಬೆಂಗಳೂರು ನಗರಾಭಿವೃದ್ಧಿ ಖಾತೆ ಕೊಡಲಾಗಿದೆ ಎಂಬುದು ತಿಳಿಯುತ್ತಲೇ ಹಿರಿಯ ನಾಯಕ ರಾಮಲಿಂಗಾರೆಡ್ಡಿ ಕುದ್ದು ಹೋಗಿದ್ದಾರೆ. ಅಷ್ಟೇ ಅಲ್ಲ, ತಕ್ಷಣವೇ ತಮ್ಮ ಮಂತ್ರಿಗಿರಿಗೆ ರಾಜೀನಾಮೆ ಕೊಡಲು ನಿರ್ಧರಿಸಿದ್ದಾರೆ.

ಕಾರಣ? ಮೊದಲನೆಯದಾಗಿ ರಾಜಧಾನಿ ಬೆಂಗಳೂರಿನಲ್ಲಿ ದಶಕಗಳ ಕಾಲದಿಂದ ದುಡಿದು ಪಕ್ಷದ ನೆಲೆಯನ್ನು ಭದ್ರಗೊಳಿಸಿದ್ದು ತಾವು. ಹೀಗೆ ಬೆಂಗಳೂರಿನಲ್ಲಿ ಪಕ್ಷದ ಕೋಟೆಯನ್ನು ಕಟ್ಟಿದ ತಮಗೆ ಅದರ ಅಭಿವೃದ್ಧಿಗೆ ಏನು ಮಾಡಬೇಕು ಅಂತ ಇಂಚಿಂಚೂ ಗೊತ್ತಿರುತ್ತದೆ. ಹೀಗಿರುವಾಗ ನ್ಯಾಯಸಮ್ಮತವಾಗಿ ತಮಗೆ ಬೆಂಗಳೂರು ನಗರಾಭಿವೃದ್ಧಿಯನ್ನು ಕೊಡಬೇಕು. ಆದರೆ ಅದನ್ನು ಬಿಟ್ಟು ತಮಗೆ ಆಸಕ್ತಿಯೇ ಇಲ್ಲದ ಖಾತೆಯನ್ನು ಕೊಟ್ಟಿರುವುದು ರಾಮಲಿಂಗಾರೆಡ್ಡಿ ಅವರಿಗೆ ಸಹ್ಯವಾಗಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಮೂರು ವರ್ಷಗಳ ಹಿಂದೆ ಸಿದ್ದರಾಮಯ್ಯ ನೇತೃತ್ವದ ಸರಕಾರ ರಚನೆಯಾದಾಗ ರಾಮಲಿಂಗಾರೆಡ್ಡಿಯವರಿಗೆ ಸಾರಿಗೆ ಖಾತೆ ಕೊಡಲಾಗಿತ್ತಲ್ಲ? ಆಗಲೂ ರೆಡ್ಡಿಯವರಿಗೆ ಅಸಮಾಧಾನವಾಗಿತ್ತು. ಆದರೆ ಆ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸಾರಿಗೆ ಜತೆ ಮುಜರಾಯಿ ಖಾತೆ ಇಟ್ಟುಕೊಳ್ಳಿ ಅಂತ ಹೇಳಿದ್ದರು.

ಆದರೆ ಅವತ್ತು ಸಾರಿಗೆ ಜತೆ ಮುಜರಾಯಿ ಖಾತೆ ಕೊಟ್ಟರು ಅಂತ ರಾಮಲಿಂಗಾರೆಡ್ಡಿ ಸಮಾಧಾನಗೊಂಡಿರಲಿಲ್ಲ, ಬದಲಿಗೆ ಅವತ್ತು ಮಾತನಾಡುತ್ತಾ ಡಿ.ಕೆ.ಶಿವಕುಮಾರ್ ಅವರು: 'ಎರಡೂವರೆ ವರ್ಷಗಳ ನಂತರ ನಾನು ಸಿಎಂ ಆಗುತ್ತೇನೆ. ಆಗ ನಿಮಗೆ ಮಸ್ಟ್ ಆಂಡ್ ಶುಡ್ ಬೆಂಗಳೂರು ನಗರಾಭಿವೃದ್ಧಿ ಖಾತೆ ಕೊಡುತ್ತೇನೆ' ಎಂದಿದ್ದರು. ಹೀಗಾಗಿ ಅವತ್ತು ಒಲ್ಲದ ಮನಸ್ಸಿನಿಂದಲೇ ರಾಮಲಿಂಗಾರೆಡ್ಡಿಯವರು ಸಾರಿಗೆ ಮತ್ತು ಮುಜರಾಯಿ ಖಾತೆಯನ್ನು ವಹಿಸಿಕೊಂಡಿದ್ದರು.

ಆದರೆ ಅವತ್ತು ತಮಗೇನೇ ಅಸಮಾಧಾನವಿರಲಿ, ಆದರೆ ಸಾರಿಗೆ ಮತ್ತು ಮುಜರಾಯಿ ಖಾತೆಯನ್ನು ರಾಮಲಿಂಗಾರೆಡ್ಡಿ ಅದ್ಭುತವಾಗಿ ನಿರ್ವಹಿಸಿದರು. ಆದರೆ ಹೀಗೆ ಕೊಟ್ಟ ಖಾತೆಯನ್ನು ಚಂದಗೆ ನಿರ್ವಹಿಸಿದರೂ ಪುನಃ ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನು ತಪ್ಪಿಸಿದ ಈಗಿನ ಬೆಳವಣಿಗೆ ರಾಮಲಿಂಗಾರೆಡ್ಡಿ ಅವರಲ್ಲಿ ಅಸಮಾಧಾನ ಸೃಷ್ಟಿಸಿದೆ. ಹೀಗಾಗಿ ಅವರು ಮಂತ್ರಿಗಿರಿಯ ಸಹವಾಸವೇ ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಯಾವಾಗ ಅವರು ತಮ್ಮ ರಾಜೀನಾಮೆ ಪತ್ರ ಕೊಟ್ಟರೋ? ಆಗ ಸಹಜವಾಗಿಯೇ ಡಿ.ಕೆ.ಶಿವಕುಮಾರ್ ಚಿಂತಿತರಾಗಿದ್ದಾರೆ.

ಅಷ್ಟೊತ್ತಿಗಾಗಲೇ ಕೆಲವರು: 'ಕೊಟ್ಟ ಖಾತೆಯನ್ನು ರಾಮಲಿಂಗಾರೆಡ್ಡಿ ಒಪ್ಪಿಕೊಳ್ಳಲಿ. ಇಲ್ಲದಿದ್ದರೆ ಅವರ ರಾಜೀನಾಮೆ ಅಂಗೀಕರಿಸಿ ಬೇರೆಯವರಿಗೆ ಆ ಖಾತೆ ಕೊಡಿ ಅಂತ ರಾಹುಲ್ ಗಾಂಧಿ ಹೇಳಿದ್ದಾರೆ' ಅಂತ ಪುಕಾರು ಹಬ್ಬಿಸಲು ಯತ್ನಿಸಿದ್ದಾರಾದರೂ ಅದು ಎಷ್ಟು ಸುಳ್ಳು ಎಂಬುದು ಡಿ.ಕೆ.ಶಿವಕುಮಾರ್ ಅವರಿಗೆ ಗೊತ್ತಿದೆ. ಅಷ್ಟೇ ಅಲ್ಲ, ಇವತ್ತು ಜಿಬಿಎ ಚುನಾವಣೆಗಳು ಹತ್ತಿರವಾಗಿರುವ ಸಂದರ್ಭದಲ್ಲಿ ರಾಮಲಿಂಗಾರೆಡ್ಡಿ ಅವರೊಬ್ಬರು ರಣಾಂಗಣದಿಂದ ವಾಪಸ್ಸಾದರೆ ರಾಜಧಾನಿಯಲ್ಲಿ ಕಾಂಗ್ರೆಸ್ ಎಷ್ಟು ದಾರುಣವಾಗಿ ಸೋಲು ಅನುಭವಿಸುತ್ತದೆ ಎಂಬುದೂ ಗೊತ್ತಿದೆ.

ಹೀಗಾಗಿ ಅವರು ತಾವು ಮಾತ್ರವಲ್ಲದೆ ರಾಜ್ಯದಲ್ಲಿ ಪಕ್ಷದ ಉಸ್ತುವಾರಿಯಾಗಿರುವ ರಣದೀಪ್ ಸಿಂಗ್ ಸುರ್ಜೇವಾಲ ಅವರ ಮೂಲಕವೂ ಸಮಾಧಾನಿಸುವ ಯತ್ನ ಮಾಡಿದ್ದಾರೆ. ಇದಕ್ಕೆ ಪೂರಕವಾಗಿ ಸುರ್ಜೇವಾಲ ಅವರು ರಾಜೀಸೂತ್ರವೊಂದನ್ನು ರೂಪಿಸಿ ಬೆಂಗಳೂರು ಅಭಿವೃದ್ಧಿ ಖಾತೆಯಿಂದ ಬಿಡಿಎ ಮತ್ತು ಬಿಎಂಆರ್‌ಡಿಯನ್ನು ವಿಭಜಿಸಿ ಖಾತೆ ಹಂಚುವ ಪ್ರಪೋಸಲ್ಲು



ಮಂಡಿಸಿದರೆ ಸ್ವತಃ ಕೃಷ್ಣ ಭೈರೇಗೌಡರು: 'ಇಲ್ಲ, ಇಲ್ಲ ಬೆಂಗಳೂರು ನಗರಾಭಿವೃದ್ಧಿಯಲ್ಲಿ ಅವೂ ಇರಬೇಕು. ಅವನ್ನು ಹೊರತುಪಡಿಸಿದ ಬೆಂಗಳೂರು ನಗರಾಭಿವೃದ್ಧಿ ನನಗೆ ಬೇಡ' ಎಂದು ಪಟ್ಟು ಹಿಡಿದರು.

ಯಾವಾಗ ಈ ಬೆಳವಣಿಗೆ ನಡೆಯಿತೋ? ಆಗ ಸುರ್ಜೇವಾಲ ಮತ್ತು ಡಿ.ಕೆ. ಶಿವಕುಮಾರ್ ಅವರು, 'ನಿಮಗೆ ಎರಡು ಖಾತೆ ಕೊಡುತ್ತೇವೆ' ಅಂತ ಹೇಳಿದ್ದಾರಾದರೂ ರಾಮಲಿಂಗಾ ರೆಡ್ಡಿಯವರಿಗೆ ಅದು ಇಷ್ಟವಾಗಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಎಂಟು ಬಾರಿ ಶಾಸನಸಭೆಗೆ ಗೆದ್ದು ಬಂದು ಪಕ್ಷ ಮತ್ತು ಸರಕಾರದಲ್ಲಿ ಮಹತ್ವದ ಜವಾಬ್ದಾರಿ ವಹಿಸಿದ ಮೇಲೂ ಬೆಂಗಳೂರು ಅಭಿವೃದ್ಧಿಯ ವಿಷಯ ಬಂದಾಗ ಚರ್ಚೆ ಮಾಡಲು ಕೃಷ್ಣ ಭೈರೇಗೌಡರ ಮುಂದೆ ಕೂತು ಅವರು ಹೇಳಿದ್ದನ್ನು ಕೇಳಿಕೊಂಡು ಬರಬೇಕೇ? ಎಂಬುದು ರಾಮಲಿಂಗಾರೆಡ್ಡಿಯವರ ಅಸಮಾಧಾನ. ಹೀಗಾಗಿ ಈ ವಿಷಯದಲ್ಲಿ ಈಗ ತೇಪೆ ಹಚ್ಚುವ ಕೆಲಸ ನಡೆದಿದೆಯಾದರೂ ಸರಿಯಾದ ಸೆಟ್ಲ್‌ಮೆಂಟ್ ಆಗದಿದ್ದರೆ ಇವತ್ತಲ್ಲ, ನಾಳೆ ರಾಮಲಿಂಗಾರೆಡ್ಡಿ ಮತ್ತೆ ತಿರುಗಿ ಬೀಳುವುದು ಗ್ಯಾರಂಟಿ. ಹೀಗಾಗಿ ಟೇಕ್ ಆಫ್ ಆಗುತ್ತಿರುವ ತಮ್ಮ ವಿಮಾನದ ಎಂಜಿನ್‌ನಲ್ಲಿ ಕಾಣಿಸಿಕೊಂಡ ಈ ಬೆಂಕಿಯನ್ನು ಡಿಕೆ ತಕ್ಷಣ ಆರಿಸಿದರೆ ಒಳಿತು. ಇಲ್ಲದಿದ್ದರೆ ಕಷ್ಟ.

ಅಹಿಂದ ಪಿಲ್ಲರುಗಳೇ ಇಲ್ಲ

ಈ ಮಧ್ಯೆ, ಡಿ.ಕೆ.ಶಿವಕುಮಾರ್ ನೇತೃತ್ವದ ಮೊದಲ ಕಂತಿನ ಸಂಪುಟ ಸಾಲಿಡ್ಡಾಗಿದೆಯಾದರೂ ಅದರಲ್ಲಿ 'ಅಹಿಂದ' ವರ್ಗಗಳ ಮೇಜರ್ ಪಿಲ್ಲರುಗಳು ಕಾಣಿಸುತ್ತಿಲ್ಲ. ಈ ಪೈಕಿ ಮುಖ್ಯರಾದವರು ಹಿಂದೆ ಸಮಾಜ ಕಲ್ಯಾಣ ಸಚಿವರಾಗಿದ್ದ ಹೆಚ್.ಸಿ.ಮಹದೇವಪ್ಪ. ರಾಜ್ಯದಲ್ಲಿ ಅಹಿಂದ ಚಳವಳಿ ತಲೆ ಎತ್ತಲು ಹೆಚ್.ಸಿ.ಮಹದೇವಪ್ಪ ಪವರ್‌ಫುಲ್ ಆದ ಕಾಣಿಕೆ ನೀಡಿದ್ದಾರೆ.

ಅಂದ ಹಾಗೆ ಅಹಿಂದ ಮತ ಬ್ಯಾಂಕಿಗೆ ವಿವಿಧ ಫೋರ್ಸುಗಳು ಶಕ್ತಿ ತುಂಬಿವೆಯಾದರೂ 'ಅಹಿಂದ' ಚಳವಳಿಯ ಐಡಿಯಾಲಜಿ ಮೂಲ ದಲಿತ ಚಳವಳಿ. ಇವತ್ತು ದಲಿತ ಚಳವಳಿಯ ಫೋರ್ಸು ಕರ್ನಾಟಕದಲ್ಲಿ ಪವರ್ ಫುಲ್ಲಾಗಿದ್ದರೆ ಅದರಲ್ಲಿ ಹೆಚ್.ಸಿ.ಮಹದೇವಪ್ಪನವರ ಪಾತ್ರ ದೊಡ್ಡದು. ಆದರೆ ಅಂತಹ ನಾಯಕರು ಮೊದಲ ಕಂತಿನ ಸಂಪುಟದಲ್ಲಿ ಕಾಣದೆ ಇರುವುದು ಸರಕಾರಕ್ಕೆ ಒಂದು ಕೊರತೆ. ಮುಂದಿನ ಕಂತಿನ ಸಂಪುಟ ರಚನೆಯ ಸಂದರ್ಭದಲ್ಲಿ ಈ ಕೊರತೆ ನಿವಾರಣೆಯಾದರೆ ಸರಕಾರಕ್ಕೆ ಮತ್ತು ಪಕ್ಷಕ್ಕೆ ಶಕ್ತಿ ದಕ್ಕಿದಂತೆ. ಇಲ್ಲದಿದ್ದರೆ ನಿಶ್ಶಕ್ತಿ ಗ್ಯಾರಂಟಿ.

ಈ ಮಾತು ಕಳೆದ ಚುನಾವಣೆಯಲ್ಲಿ ಮುಸ್ಲಿಂ ಮತ ಬ್ಯಾಂಕನ್ನು ಒಗ್ಗೂಡಿಸಿದ ಜಮೀರ್ ಅಹ್ಮದ್ ಮತ್ತು ಪಕ್ಷದ ಸಿದ್ಧಾಂತಗಳನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದ ಸಂತೋಷ್ ಲಾಡ್ ಅವರ ಹೆಸರಿಗೂ ಅನ್ವಯವಾಗುತ್ತದೆ.

ಸಂಪುಟಕ್ಕೆ ಸೇರುವವರು ಯಾರು?

ಇನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂಪುಟಕ್ಕೆ ಮುಂದಿನ ಕಂತಿನಲ್ಲಿ ಸೇರುವವರು ಯಾರು? ಈ ಪ್ರಶ್ನೆ ಬಂದಾಗ ಮೂವತ್ತಕ್ಕೂ ಹೆಸರುಗಳು ರೇಸಿನಲ್ಲಿ ಕಾಣಿಸುತ್ತಿವೆ.

ಹಾಸನ ಜಿಲ್ಲೆಯಿಂದ ಶಿವಲಿಂಗೇಗೌಡ, ಬಿಜಾಪುರ ಜಿಲ್ಲೆಯಿಂದ ಯಶವಂತರಾವ್, ಬಳ್ಳಾರಿಯಿಂದ ಕಂಪ್ಲಿ ಗಣೇಶ್, ಕೊಪ್ಪಳದಿಂದ ಬಸವರಾಜ ರಾಯರೆಡ್ಡಿ ಇಲ್ಲವೇ ಹಿಟ್ನಾಳ್, ಶಿವಮೊಗ್ಗ ಜಿಲ್ಲೆಯಿಂದ ಬಿ.ಕೆ.ಸಂಗಮೇಶ್ ಮತ್ತು ಬೇಳೂರು ಗೋಪಾಲಕೃಷ್ಣ, ರಾಯಚೂರು ಜಿಲ್ಲೆಯಿಂದ ಎನ್.ಎಸ್.ಭೋಸರಾಜು, ಧಾರವಾಡ ಪಾಕೀಟಿನಿಂದ ಸಂತೋಷ್ ಲಾಡ್, ದಾವಣಗೆರೆ ಜಿಲ್ಲೆಯಿಂದ ಎಸ್.ಎಸ್.ಮಲ್ಲಿಕಾರ್ಜುನ್ ಹೆಸರುಗಳು ಮುಂಚೂಣಿಯಲ್ಲಿವೆ.

ಇದೇ ರೀತಿ ಚಿತ್ರದುರ್ಗ ಜಿಲ್ಲೆಯಿಂದ ಚಳ್ಳಕೆರೆಯ ರಘುಮೂರ್ತಿ, ಚಾಮರಾಜ ನಗರ ಜಿಲ್ಲೆಯಿಂದ ಪುಟ್ಟರಂಗಶೆಟ್ಟಿ, ಬೆಳಗಾವಿ ಜಿಲ್ಲೆಯಿಂದ ಲಕ್ಷ್ಮಣ ಸವದಿ, ಮಹಿಳೆಯರ ಕೋಟಾದಲ್ಲಿ ರೂಪಕಲಾ ಶಶಿಧರ್, ಹಾವೇರಿ ಜಿಲ್ಲೆಯಿಂದ ರುದ್ರಪ್ಪ ಲಮಾಣಿ, ಮಂಡ್ಯ ಜಿಲ್ಲೆಯಿಂದ ನರೇಂದ್ರ ಸ್ವಾಮಿ, ಬೆಂಗಳೂರಿನಿಂದ ಜಮೀರ್ ಅಹ್ಮದ್ ಅವರ ಹೆಸರುಗಳು ಮಂತ್ರಿಗಿರಿಯ ರೇಸಿನಲ್ಲಿ ಮುಂದಿವೆ.

ಸ್ಪೀಕರ್ ಹುದ್ದೆಗೆ ಹೆಚ್ಕೆ ಇಲ್ಲವೇ ದಿನೇಶ್?

ಇದೇ ರೀತಿ ಕುತೂಹಲ ಕೆರಳಿಸುತ್ತಿರುವ ಮತ್ತೊಂದು ವಿಷಯವೆಂದರೆ, ವಿಧಾನಸಭೆಯ ಸ್ಪೀಕರ್ ಯಾರಾಗುತ್ತಾರೆ ಎಂಬುದು.

ಈಗಿರುವ ಮಾಹಿತಿಯ ಪ್ರಕಾರ, ಮಾಜಿ ಸಚಿವ ಹೆಚ್. ಕೆ.ಪಾಟೀಲ್ ಅವರ ಹೆಸರು ಮುಂಚೂಣಿಯಲ್ಲಿದೆ. ಆದರೆ ಹೆಚ್. ಕೆ.ಪಾಟೀಲ್ ಅವರ ಆಪ್ತರ ಪ್ರಕಾರ, ಸ್ಪೀಕರ್ ಆಗಲು ಹೆಚ್. ಕೆ.ಪಾಟೀಲ್ ಅವರಿಗೆ ಆಸಕ್ತಿ ಇಲ್ಲ. ಬದಲಿಗೆ ಸಚಿವ ಸಂಪುಟಕ್ಕೆ ಸೇರುವುದು ಅವರ ಇಚ್ಛೆ.

ಒಂದು ಸಲ ಸ್ಪೀಕರ್ ಆದರೆ ಜನರ ಮಧ್ಯೆ ಇರುವ ಅವಕಾಶಗಳು ಕಡಿಮೆಯಾಗಿ ಪೊಲಿಟಿಕಲಿ ಸೈಡ್ ಲೈನಿಗೆ ಸರಿದಂತಾಗುತ್ತದೆ ಎಂಬುದು ಅವರ ಯೋಚನೆ. ಎಲ್ಲಕ್ಕಿಂತ ಮುಖ್ಯವಾಗಿ ಎಸ್. ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಡಿಕೆ ಮತ್ತು ಹೆಚ್ಕೆ ಜೋಡೆತ್ತಿನಂತೆ ಇದ್ದವರು. ಈಗ ಡಿಕೆ ಸರಕಾರದ ಟಾಪ್ ಲೆವೆಲ್ಲಿಗೆ ಹೋಗಿದ್ದರೆ ತಾವು ಸ್ಪೀಕರ್ ಆಗಿ ಲಿಮಿಟ್ ಆಗುವುದು ಹೆಚ್ಕೆಯವರಿಗೆ ಇಷ್ಟವಿಲ್ಲ.

ಪರಿಣಾಮ? ಹೆಚ್.ಕೆ.ಪಾಟೀಲ್ ಸ್ಪೀಕರ್ ಆಗಲು ನಿರಾಕರಿಸಿದರೆ ಮಾಜಿ ಸಚಿವ ದಿನೇಶ್ ಗುಂಡೂರಾವ್ ಈ ಹೊಣೆಗಾರಿಕೆಯನ್ನು ಹೊರುವುದು ಬಹುತೇಕ ಖಚಿತ.

ಲಾಸ್ಟ್ ಸಿಪ್

ಅಂದ ಹಾಗೆ ಡಿಕೆ ಸಚಿವ ಸಂಪುಟಕ್ಕೆ ಶೋಭೆ ತರಬಲ್ಲ ಹೆಸರೆಂದರೆ ಸಲೀಂ ಅಹ್ಮದ್ ಅವರದು. ಸಜ್ಜನ ರಾಜಕಾರಣಕ್ಕೆ ಹೆಸರಾದ ಸಲೀಂ ಅಹ್ಮದ್ ಅವರು ಈ ಹಿಂದೆ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಘಟಕ ಎನ್‌ಎಸ್‌ಯುಐಗೆ ರಾಷ್ಟ್ರೀಯ ಅಧ್ಯಕ್ಷರಾಗಿದ್ದವರು.

ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಅವರ ಜತೆ ಕೆಲಸ ಮಾಡಿದ್ದ ಮೂವರು ಇವತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು. ಈ ಪೈಕಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಒಬ್ಬರಾದರೆ, ಕೇರಳದ ಮುಖ್ಯಮಂತ್ರಿ ವಿ.ಡಿ.ಸತೀಶನ್ ಮತ್ತು ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಕ್ಕು ಇನ್ನಿಬ್ಬರು.

ಅವತ್ತು ಇಂತಹ ನಾಯಕರನ್ನು ಮುಂದಿಟ್ಟುಕೊಂಡು ಎನ್ ಎಸ್‌ಯುಐ ರಥವನ್ನು ರಾಷ್ಟ್ರಮಟ್ಟದಲ್ಲಿ ಮುನ್ನಡೆಸಿದ್ದ ಸಲೀಂ ಅಹ್ಮದ್ ಇದುವರೆಗೆ ಮಂತ್ರಿಯಾಗಲು ಸಾಧ್ಯವಾಗಿಲ್ಲ. ಈಗ ಅವರು ಮಂತ್ರಿ ಪದವಿಯ ಆಕಾಂಕ್ಷಿಯಾಗಿದ್ದರೂ ಅವರನ್ನು ವಿಧಾನಪರಿಷತ್ ಸಭಾಪತಿ ಹುದ್ದೆಗೆ ತರುವ ಲೆಕ್ಕಾಚಾರ ನಡೆಯುತ್ತಿದೆ. ಆದರೆ ಅವರಂತಹ ಸಜ್ಜನ ಮತ್ತು ಕ್ರಿಯಾಶೀಲ ನಾಯಕರನ್ನು ಮಂತ್ರಿ ಮಂಡಲಕ್ಕೆ ಸೇರಿಸಿದರೆ ನಿಶ್ಚಿತವಾಗಿ ಅದು ಡಿಕೆ ಸರ್ಕಾರಕ್ಕೆ ಶೋಭೆ ತರಲಿದೆ.

ಪ್ರಸ್ತುತ

ನಿತಿನ್ ಮಲ್ಲಾರ

ಈ ಅಭಿವೃದ್ಧಿ ಯಾರಿಗಾಗಿ?

ಕುಕ್ಕೆ ಸುಬ್ರಮಣ್ಯ ಕ್ಷೇತ್ರದಂತಹ ಪವಿತ್ರ ಸ್ಥಳಗಳಲ್ಲಿ ಅಭಿವೃದ್ಧಿ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಅತಿಯಾದ ಕಾಂಕ್ರೀಟೀಕರಣ, ಆಧುನೀಕರಣ, ಕಟ್ಟಡಗಳ ನಿರ್ಮಾಣ ನಿಜಕ್ಕೂ ಆತಂಕಕಾರಿ ವಿಷಯವೇ ಆಗಿದೆ. ಒಮ್ಮೆ ಪ್ರಕೃತಿಯ ಮಡಿಲಲ್ಲಿ ನೆಲೆಸಿದ್ದ, ಹಸಿರು ಕಾಡು, ನದಿ, ಮಲೆಗಳ ಮಧ್ಯೆ ದೇವರ ಸಾನ್ನಿಧ್ಯವನ್ನು ಮನಸಾರೆ ಅನುಭವಿಸಬಹುದಾಗಿದ್ದ ಈ ಕ್ಷೇತ್ರಗಳು ಇಂದು ನಿಧಾನವಾಗಿ ವಾಣಿಜ್ಯೀಕರಣ ಮತ್ತು ಅತಿಯಾದ ನಿರ್ಮಾಣಗಳ ಒತ್ತಡಕ್ಕೆ ಒಳಗಾಗುತ್ತಿರುವುದು ಬೇಸರ ಮೂಡಿಸುತ್ತದೆ.

ಭಕ್ತರ ಸೌಲಭ್ಯ ಅಗತ್ಯವಿದ್ದರೂ, ಪ್ರಕೃತಿಯ ಸಮತೋಲನ ಕಾಪಾಡುವ ಜವಾಬ್ದಾರಿ ಅದಕ್ಕಿಂತಲೂ ಮುಖ್ಯವಾಗಬೇಕು. ಕುಕ್ಕೆ ಸುಬ್ರಮಣ್ಯ ಎಂಬುದು ಕೇವಲ ದೇವಾಲಯವಲ್ಲ - ಅದು ಪ್ರಕೃತಿ, ಭಕ್ತಿ ಮತ್ತು ಸಂಸ್ಕೃತಿಯ ಸಂಗಮ. ಅಲ್ಲಿನ ಕಾಡಿನ ನಿಶ್ಶಬ್ದ, ಕುಮಾರಧಾರೆ ನದಿಯ ತಣ್ಣನೆಯ ಹರಿವು, ಜನಜೀವನ ಇದೆ. ಪಶ್ಚಿಮ ಘಟ್ಟಗಳ ಹಸಿರು ವಾತಾವರಣವೇ ಆ ಕ್ಷೇತ್ರದ ಆತ್ಮವಾಗಿದೆ. ಆ ಆತ್ಮವನ್ನು ಕಳೆದುಕೊಳ್ಳುವ ರೀತಿಯ ಅಭಿವೃದ್ಧಿ ದೀರ್ಘಕಾಲದಲ್ಲಿ ಕ್ಷೇತ್ರದ ವೈಶಿಷ್ಟ್ಯವನ್ನೇ ಮಸುಕಾಗಿಸಬಹುದು.

ಕುಕ್ಕೆಯ ಪಕ್ಕದ ಪ್ರದೇಶಗಳಾದ ಐನೆಕಿದು, ಬಾಳುಗೋಡು, ಏನೆಕಲ್ಲು, ಕಲ್ಲಾಜೆ, ಕೈಕಂಬ ಮೊದಲಾದ ಕಡೆಗಳಲ್ಲಿ ಯೋಜಿತ ರೀತಿಯಲ್ಲಿ ವಸತಿ, ವಾಹನ ನಿಲ್ದಾಣ, ವಾಣಿಜ್ಯ ಸಂಕೀರ್ಣಗಳು ಮತ್ತು ಪ್ರವಾಸೋದ್ಯಮ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ್ದರೆ, ಕ್ಷೇತ್ರದ ಮೇಲಿನ ಒತ್ತಡವೂ ಕಡಿಮೆಯಾಗುತ್ತಿತ್ತು ಮತ್ತು ಪರಿಸರವೂ ಉಳಿಯುತ್ತಿತ್ತು. ಇದು ಕ್ಷೇತ್ರದ ಸಂರಕ್ಷಣೆ ಜೊತೆಗೆ ಸಮತೋಲನದ ಅಭಿವೃದ್ಧಿ ಎನ್ನುವ ದಾರಿಯಾಗಬಹುದಿತ್ತು. ಕುಕ್ಕೆ ಸುಬ್ರಹ್ಮಣ್ಯ ಮೊದಲು ನಾನಾ ಬಗೆಯ ಸರ್ಪಗಳ ತವರು. ಇಲ್ಲಿನ ಕನ್ನಡಿ ಹೊಳೆಯಂತೂ ಕನ್ನಡಿಯಂತೆ ಸ್ವಚ್ಛವಾಗಿತ್ತು. ಆದರೆ ಅಭಿವೃದ್ಧಿಯ ಹೊಳೆಯಿಂದಾಗಿ ಕನ್ನಡಿ ಹೊಳೆ ಕಲುಷಿತವಾಗಿದೆ. ಸರ್ಪಗಳು ಈಗ ಕಾಣಿಸಿಗಲಾರವು.

ಕುಕ್ಕೆಯಂತೆಯೇ ರಾಜ್ಯದಲ್ಲಿ ಇನ್ನೂ ಹಲವು ಕ್ಷೇತ್ರಗಳಿವೆ. ಇದರಲ್ಲಿ ಕೆಲವು ಖಾಸಗಿಯವರಿಗೆ ಸೇರಿವೆ. ಅಲ್ಲೂ ಅಭಿವೃದ್ಧಿಯ ಭರಾಟೆ ನಡೆದಿದೆ. ಲಕ್ಷಾಂತರ ಸಂಖ್ಯೆಯಲ್ಲಿ ಬರುವ ಭಕ್ತರು ತಂಗಲು ವಸತಿಗೃಹಗಳು ಲೆಕ್ಕವಿಲ್ಲದಷ್ಟು ಹುಟ್ಟಿಕೊಳ್ಳುತ್ತಿವೆ. ಈ ಭಕ್ತರಿಗೆ ಊಟ ತಿಂಡಿ ನೀಡಲು ಹೋಟೆಲುಗಳು ಸೃಷ್ಟಿಯಾಗುತ್ತಿವೆ. ಆದರೆ ಈ ಹೊಟೇಲ್‌ಗಳಲ್ಲಿ ಅಲ್ಲಿನ ಸ್ಥಳೀಯ ಖಾದ್ಯವೈವಿಧ್ಯಗಳು ಸಿಗುವುದೇ ಅಲ್ಲ, ಮತ್ತದೇ ಬೆಂಗಳೂರಿನ ತಿಂಡಿಗಳು. ಉತ್ತರ ಭಾರತದ ರೋಟಿ, ನಾನ್, ಕುಲ್ಚಾಗಳು ಎಲ್ಲ ದಂಡಿಯಾಗಿ ಸಿಗುತ್ತವೆ.

ಹೀಗೆ ಆಧುನೀಕರಣಗೊಂಡಲ್ಲಿ ಸ್ಥಳೀಯರಿಗೆ ಕೆಲಸಗಳು ಸಿಕ್ಕಿದರೆ ಪರವಾಗಿಲ್ಲ. ಆದರೆ ಹಾಗಾಗುವುದೇ ಇಲ್ಲ. ಸ್ಥಳೀಯರ ಬದಲು ಇಲ್ಲಿ ಬಿಹಾರಿಗಳು, ಉತ್ತರ ಪ್ರದೇಶದವರು ಬಂದು ನೆಲೆಸುತ್ತಾರೆ. ಪಾರ್ಕಿಂಗ್, ಶೌಚಗೃಹ ಕಾಯುವಿಕೆ ಮುಂತಾದ ಕಡೆಗಳಲ್ಲಿ ಈಗಾಗಲೇ ಉತ್ತರ ಭಾರತೀಯರು ಇದ್ದಾರೆ. ನಿಧಾನವಾಗಿ ಇವರು ಇನ್ನೂ ಹಲವರನ್ನು ಅಲ್ಲಿಂದ ಕರೆದುಕೊಂಡು ಬಂದು ಇಲ್ಲಿ ಕಾಲನಿಗಳನ್ನೇ ಸೃಷ್ಟಿಸುತ್ತಿದ್ದಾರೆ.

ಚಿಕ್ಕಮಗಳೂರು ಮುಂತಾದ ಕಡೆಗಳಲ್ಲಿ ಇವರ ಕಾಲನಿಗಳು ಈಗಾಗಲೇ ಇವೆ. ನಿಧಾನವಾಗಿ ಇವು ಸುಬ್ರಹ್ಮಣ್ಯ, ಧರ್ಮಸ್ಥಳ, ಹೊರನಾಡು, ಶೃಂಗೇರಿಗಳಲ್ಲೂ ಕಂಡುಬಂದರೆ ಆಶ್ಚರ್ಯವಿಲ್ಲ. ನಮ್ಮ ದೇಶದ ಸಂವಿಧಾನದ ಪ್ರಕಾರ ಯಾರೂ ಎಲ್ಲೂ ಕೆಲಸ ಮಾಡಬಹುದು. ಆದರೆ ಸ್ಥಳೀಯ ಜನಜೀವನ, ಬದುಕಿನ ವೈಖರಿ ಏರುಪೇರು ಆಗಬಾರದು. ಅಭಿವೃದ್ಧಿ ಅಗತ್ಯವೇ ಸರಿ, ಆದರೆ ಅದು ಪ್ರಕೃತಿಯನ್ನು ಅಳಿಸಿ ಮಾಡುವ ಅಭಿವೃದ್ಧಿಯಾಗಬಾರದು.

ಜೀವನಾಂಶಕ್ಕೆ ಕೋರ್ಟ್ ಇದೆ, ಪ್ರೀತಿಗೇನು ಮಾಡೋಣ?

ಕಾನೂನು ಸೆನ್ಸ್

ತಿಮ್ಮಣ್ಣ ಭಾಗವತ್
vveditoped@gmail.com

ಅನಕ್ಷರಸ್ಥ, ವೃದ್ಧ ತಂದೆಯಿಂದ ಆಸ್ತಿ ಬರೆಸಿಕೊಂಡು, ಆತನನ್ನು ನೋಡಿಕೊಳ್ಳಬೇಕೆಂಬ ಶರತ್ತು ಬಕ್ಷೀಸ್ ಪತ್ರದಲ್ಲಿ ಇರಲಿಲ್ಲ ಎಂಬ ಕಾರಣ ನೀಡಿ ತಂದೆಯನ್ನು ನಿರ್ಲಕ್ಷಿಸಿದರೆ 2007ರ ಕಾಯಿದೆಯ 23ನೇ ಕಲಮಿನನ್ವಯ ಅಂಥ ಆಸ್ತಿ ವರ್ಗಾವಣೆ ರದ್ದಾಗುತ್ತದೆ. ದಾನಪತ್ರದಲ್ಲಿ ಬರೆಯದಿದ್ದರೂ, ವೃದ್ಧಾಪ್ಯದಲ್ಲಿ ತನ್ನನ್ನು ನೋಡಿಕೊಳ್ಳುತ್ತಾರೆ ಎಂಬ ಕಾರಣಕ್ಕೇ ದಾನ ನೀಡಿದ್ದಾರೆ ಎಂದು ಊಹಿಸಬೇಕಾಗುತ್ತದೆ- ಎಂದು ಕರ್ನಾಟಕ ಹೈಕೋರ್ಟ್ 'ವೆಂಕಟಯ್ಯ ವರ್ಸಸ್ ಕರ್ನಾಟಕ ಸರಕಾರ' ಪ್ರಕರಣದಲ್ಲಿ ತೀರ್ಪು ನೀಡಿದೆ. ಹರಕೆ ಹೊತ್ತು ಮಕ್ಕಳನ್ನು ಪಡೆದು ಅವರನ್ನೇ ಸರ್ವಸ್ವವೆಂದು ಬಗೆದು, ಪ್ರೀತಿ, ಕಾಳಜಿಯಿಂದ ಬೆಳೆಸಿ, ಶಿಕ್ಷಣ-ಬದುಕು ನೀಡಿದ ಪಾಲಕರಿಗೆ, ತಮ್ಮ ವೃದ್ಧಾಪ್ಯದಲ್ಲಿ ಅವರು ತಮಗೆ ಆಸರೆಯಾಗುತ್ತಾರೆ ಎಂಬ ನಿರೀಕ್ಷೆ ಖಂಡಿತ ಇರುತ್ತದೆ. ವಯಸ್ಸಾದ ತಾಯಿ ತಂದೆಯರು ಅಸಹನೀಯವೆನಿಸಿದರೆ, ಅವರನ್ನು ಪ್ರೀತಿ ಮಾಡುವ ಬದಲು ಅವರನ್ನು ನೋಡಿಕೊಳ್ಳದಿರಲು ಮಕ್ಕಳು ಕಾರಣ ಹುಡುಕಿದರೆ, ಆ ಬದುಕು ನಿಜಕ್ಕೂ ದುರ್ಭರ. ಆದರೆ ತಂದೆ-ತಾಯಿಯರನ್ನು ನೋಡಿಕೊಳ್ಳದಿರುವದು ವಿವಿಧ ಕಾಯಿದೆಗಳಡಿ ಶಿಕ್ಷಾರ್ಹ ಅಪರಾಧ. ಅಂಥ ಕಾಯಿದೆಗಳ ಪ್ರಾಥಮಿಕ ಜ್ಞಾನ ವಿಶೇಷವಾಗಿ ವೃದ್ಧರಿಗೆ ಅಗತ್ಯ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್ ಎಸ್-2023) (ಸಿಆರ್‌ಪಿಸಿ 125) 144ನೇ ಕಲಮಿನನ್ವಯ ತಂದೆ ತಾಯಿಯರ ಪಾಲನೆ ಅವರ ಮಕ್ಕಳ ಜವಾಬ್ದಾರಿ. ಹಾಗೆ ನೋಡಿಕೊಳ್ಳಲು ಅವರು ತಪ್ಪಿದಾಗ, ತಮ್ಮ ಪೋಷಣೆಗೆ ಸಾಕಷ್ಟು ಆರ್ಥಿಕ ಮೂಲ ಇಲ್ಲದ ತಾಯಿ ತಂದೆಯರು ಅರ್ಜಿ ಸಲ್ಲಿಸಿದರೆ, ಮಕ್ಕಳು ಅವರಿಗೆ ಪ್ರತೀ ತಿಂಗಳು ಜೀವನಾಂಶ ನೀಡುವಂತೆ ಮ್ಯಾಜಿಸ್ಟ್ರೇಟ್ ಕೋರ್ಟು ಆದೇಶ ನೀಡುತ್ತದೆ. ಹಾಗೆ ಆದೇಶ ನೀಡಿದ ನಂತರವೂ ಜೀವನಾಂಶ ನೀಡಲು ತಪ್ಪಿದರೆ ಅಂಥ ಮಕ್ಕಳಿಗೆ ದಂಡ ಮತ್ತು ಜೈಲು ಶಿಕ್ಷೆ ವಿಧಿಸಲಾಗುತ್ತದೆ.

ಈ ಜವಾಬ್ದಾರಿ ಸ್ವತಂತ್ರ ಆದಾಯವಿರುವ ಮದುವೆಯಾದ ಹೆಣ್ಣುಮಕ್ಕಳಿಗೂ ಅನ್ವಯಿಸುತ್ತದೆ. (ವಿಜಯ ಮನೋಹರ ಅರ್ಬತ್ ವರ್ಸಸ್ ಕಾಶಿ ರಾವ್ ರಾಜಾರಾಮ್ ಸಹಾಯ್ - ಸುಪ್ರೀಂ ಕೋರ್ಟ್). ಈ ಕಾಯಿದೆಯು ಎಲ್ಲಾ ಧರ್ಮದವರಿಗೂ ಸಮಾನವಾಗಿ ಅನ್ವಯವಾಗುತ್ತದೆ.

ತಾಯಿ-ತಂದೆಯರ ಮತ್ತು ಹಿರಿಯ ನಾಗರಿಕರ ಪಾಲನೆ ಮತ್ತು ಯೋಗಕ್ಷೇಮ ಕಾಯಿದೆ 2007: ಈ ಕಾಯಿದೆಯ 4ನೇ ಕಲಮಿನ ಪ್ರಕಾರ ಯಾವುದೇ ತಂದೆ, ತಾಯಿ, ಅಜ್ಜ ಅಥವಾ ಅಜ್ಜಿಯರಿಗೆ, (ಸಹಜ, ದತ್ತಕ ಅಥವಾ ಮಲ-ತಂದೆ ತಾಯಿಯರೂ ಸೇರಿ) ತಮ್ಮ ಜೀವನವನ್ನು ನೋಡಿಕೊಳ್ಳಲು ಸಾಕಷ್ಟು ಆರ್ಥಿಕ ಮೂಲವಿಲ್ಲದಿದ್ದರೆ, ಅಂಥವರ ಪಾಲನೆ ನೋಡಿಕೊಳ್ಳುವದು ಅವರ ಮಕ್ಕಳ ಅಥವಾ ಮೊಮ್ಮಕ್ಕಳ ಜವಾಬ್ದಾರಿಯಾಗಿರುತ್ತದೆ. ತಾಯಿ ತಂದೆಯರು ಹಿರಿಯ ನಾಗರಿಕರಲ್ಲದಿದ್ದರೂ ಅವರ ಕುರಿತು ಈ ಜವಾಬ್ದಾರಿ ಅನ್ವಯವಾಗುತ್ತದೆ. ಮಕ್ಕಳಿಲ್ಲದಿದ್ದ ಹಿರಿಯ ನಾಗರಿಕರ ಆಸ್ತಿಯನ್ನು ಪಡೆದುಕೊಂಡಿರುವವರು ಅಥವಾ ಅಂಥವರ ಆಸ್ತಿಗೆ ವಾರಸುದಾರರಾಗುವ ಸಂಬಂಧಿಕರು ಅವರ ಪಾಲನೆ ಮಾಡುವ/ ಜೀವನಾಂಶ ನೀಡುವ ಜವಾಬ್ದಾರಿ ಹೊಂದಿರುತ್ತಾರೆ.

ಪಾಲನೆ ಅಂದರೆ ಆಹಾರ, ಬಟ್ಟೆ, ವಸತಿ ಹಾಗೂ ವೈದ್ಯಕೀಯ ವೆಚ್ಚಗಳು- ಅವರು ಸಹಜ ಜೀವನ ನಡೆಸಲು ಬೇಕಾದ ಎಲ್ಲವೂ ಸೇರಿರುತ್ತದೆ.



ಅರ್ಜಿ ಸಲ್ಲಿಕೆ

5ನೇ ಕಲಮಿನ ಪ್ರಕಾರ ಅಂಥ ತಂದೆ ತಾಯಿಯರು ಅಥವಾ ಹಿರಿಯ ನಾಗರಿಕರು ತಮಗೆ ಜೀವನಾಂಶ ನೀಡಲು ಮಕ್ಕಳಿಗೆ ಅಥವಾ ಸಂಬಂಧಿಕರಿಗೆ ಆದೇಶಿಸುವಂತೆ ಉಪ-ವಿಭಾಗೀಯ ಅಧಿಕಾರಿಗಳು(ಎಸಿ) ಅಧ್ಯಕ್ಷರಾಗಿರುವ ಟ್ರಿಬ್ಯೂನಲ್ಲಿಗೆ ಅರ್ಜಿ ಸಲ್ಲಿಸಬಹುದು. ಅವರ ಪರವಾಗಿ ಅವರಿಂದ ಅಧಿಕಾರ ಪಡೆದ ಮೂರನೇ ವ್ಯಕ್ತಿ ಅಥವಾ ಸಂಸ್ಥೆ ಕೂಡಾ ಅಂಥ ಅರ್ಜಿಯನ್ನು ಸಲ್ಲಿಸಬಹುದು. ಟ್ರಿಬ್ಯೂನಲ್ ತಾನೇ ಸ್ವತಃ ಅಂಥ ವಿಷಯವನ್ನು ಕೈಗೆತ್ತಿಕೊಳ್ಳಬಹುದು (suo-moto). ಹಾಗೆ ಅರ್ಜಿ ಬಂದಾಗ ಸೂಕ್ತ ವಿಚಾರಣೆ ನಡೆಸಿ ನಿರ್ದಿಷ್ಟ ಮೊತ್ತದ ಜೀವನಾಂಶ ನೀಡಲು ಟ್ರಿಬ್ಯೂನಲ್ ಆದೇಶಿಸುತ್ತದೆ. ಈ ಪ್ರಕರಣಗಳಿಗೆ 90 ದಿನಗಳ ಒಳಗಾಗಿ ಆದೇಶ ನೀಡಬೇಕೆಂಬ ತ್ವರಿತ ವಿಚಾರಣೆಯ ನಿಯಮ ಅನ್ವಯವಾಗುತ್ತದೆ. ವಿಚಾರಣೆ ಬಾಕಿಯಿರುವಾಗ ಮಧ್ಯಂತರ ಜೀವನಾಂಶ ಆದೇಶಿಸಲು ಕೂಡಾ ಟ್ರಿಬ್ಯುನಲ್ಲಿಗೆ ಅಧಿಕಾರವಿದೆ. ಟ್ರಿಬ್ಯೂನಲ್‌ನ ಆದೇಶದ ಪ್ರಕಾರ ಜೀವನಾಂಶ ನೀಡಲು ತಪ್ಪಿದರೆ ಅಂಥ ಮಕ್ಕಳು ಅಥವಾ ಸಂಬಂಧಿಕರಿಗೆ ಪ್ರತೀ ಸಲ ತಪ್ಪಿದಾಗಲೂ ವಾರಂಟ್ ಜಾರಿಯಾಗುತ್ತದೆ ಮತ್ತು ಅಂಥವರಿಗೆ ಹಾಗೆ ಬಾಕಿ ಇರುವ ಜೀವನಾಂಶದ ಮೊತ್ತದ ಜೊತೆಗೆ ಪ್ರಕರಣದ ಖರ್ಚು ಸೇರಿಸಿ ದಂಡ ವಿಧಿಸುವ ಮತ್ತು ಅಂಥ ಮೊತ್ತವನ್ನು ನೀಡುವವರೆಗೆ ಜೈಲು ಶಿಕ್ಷೆ ವಿಧಿಸುವ ಅಧಿಕಾರ ಟ್ರಿಬ್ಯುನಲ್ಲಿಗೆ ಇರುತ್ತದೆ. ಆಯಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಈ ಕಾಯಿದೆಯಡಿ ನಡೆಯುವ ಪ್ರಕರಣಗಳ ಕುರಿತಾಗಿ ಅಗತ್ಯ ನೆರವು ನೀಡಲು ಬಾಧ್ಯಸ್ಥರಿರುತ್ತಾರೆ.

ವೃದ್ಧಾಶ್ರಮಗಳು ಮತ್ತು ವೈದ್ಯಕೀಯ

19ನೇ ಕಲಮಿನ ಪ್ರಕಾರ ಆಯಾ ರಾಜ್ಯ ಸರಕಾರಗಳು ಪರಿತ್ಯಕ್ತ ಅಶಕ್ತ ಹಿರಿಯ ನಾಗರಿಕರ ಪುನರ್ವಸತಿಗಾಗಿ ಪ್ರತೀ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯ ವೃದ್ಧಾಶ್ರಮಗಳನ್ನು ಸ್ಥಾಪಿಸಿ ಅವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸೂಕ್ತ ನಿಯಮಾವಳಿಗಳನ್ನು ರಚಿಸಬೇಕು. 20ನೇ ಕಲಮಿನನ್ವಯ ಸರಕಾರೀ ಆಸ್ಪತ್ರೆಗಳಲ್ಲಿ ವಯೋಸಹಜ ಕಾಯಿಲೆಯಿಂದ ಬಳಲುವ ಹಿರಿಯ ನಾಗರಿಕರಿಗೆ ಬೆಡ್‌ಗಳನ್ನು ನೀಡಬೇಕು ಮತ್ತು ತಜ್ಞ ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಸೂಕ್ತ ಚಿಕಿತ್ಸೆ ನೀಡಬೇಕು. ವೈದ್ಯರನ್ನು ಭೇಟಿಯಾಗಲು ಅವರಿಗೆ ಪ್ರತ್ಯೇಕ ಪಾಳಿ ವ್ಯವಸ್ಥೆ ಇರಬೇಕು.

ಆಸ್ತಿ ರಕ್ಷಣೆ

ಕೆಲವು ಸಲ ಹಿರಿಯ ನಾಗರಿಕರು ತಮ್ಮ ಮಕ್ಕಳಿಗೆ ಅಥವಾ ಇತರ ವ್ಯಕ್ತಿಗಳಿಗೆ ತಮ್ಮ ಆಸ್ತಿಗಳನ್ನು ಬಕ್ಷೀಸ್ ಪತ್ರ ಅಥವಾ ಇತರ ವಿಧಾನಗಳ ಮೂಲಕ ಕ್ರಯ ಪಡೆಯದೆ ವರ್ಗಾಯಿಸಬೇಕಾಗುತ್ತದೆ. ಆಸ್ತಿ ವರ್ಗಾವಣೆ ಆಗುವ ವರೆಗೆ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ ಮಗ-ಸೊಸೆ, ವರ್ಗಾವಣೆಯ ನಂತರ ಅವರನ್ನು ತಿರಸ್ಕರಿಸಬಹುದು ಅಥವಾ ಹೊರಹಾಕಬಹುದು. ಇಂಥ ಸಾಧ್ಯತೆಗಳನ್ನು ತಪ್ಪಿಸಲು, ವೃದ್ಧಾಪ್ಯದಲ್ಲಿ ತಮ್ಮನ್ನು ನೋಡಿಕೊಳ್ಳಬೇಕು ಅಥವಾ ಜೀವನಾಂಶ ನೀಡಬೇಕೆಂಬ ಶರತ್ತನ್ನು ದಾನಪತ್ರ ಅಥವಾ ಆಸ್ತಿವರ್ಗಾವಣೆ ಪತ್ರದಲ್ಲಿ ನಮೂದಿಸಬೇಕು. ಹಾಗೆ ನಮೂದಿಸಿದ್ದಾಗ್ಯೂ, ಅವರನ್ನು ಅಂಥ ಆಸ್ತಿ ಪಡೆದ ವ್ಯಕ್ತಿಗಳು ನೋಡಿಕೊಳ್ಳಲು ಅಥವಾ ಜೀವನಾಂಶ ನೀಡಲು ತಪ್ಪಿದರೆ, ಅಂಥ ಆಸ್ತಿ ವರ್ಗಾವಣೆಯನ್ನು ಮೋಸ ಅಥವಾ ಒತ್ತಾಯದಿಂದ ಬರೆಸಿಕೊಳ್ಳಲಾಗಿದೆ ಎಂದು ಪರಿಗಣಿಸಿ ಟ್ರಿಬ್ಯೂನಲ್ ಮೂಲಕ ರದ್ದುಪಡಿಸುವ ಅವಕಾಶವಿದೆ (23ನೇ ಕಲಮು).

'ಅಶ್ವಿನಿ ಕುಮಾರ ವರ್ಸಸ್ ಭಾರತ ಸರಕಾರ' ಪ್ರಕರಣದಲ್ಲಿ ಸುಪ್ರೀಂ ಕೋರ್ಟು 'ವೃದ್ಧಾಪ್ಯ ಎಲ್ಲರನ್ನೂ ಬಾಧಿಸುತ್ತದೆ. ಆದರೆ ಕೆಲವರು ತಮ್ಮ ವೃದ್ಧಾಪ್ಯದಲ್ಲಿ ಅನಾರೋಗ್ಯ, ದೈಹಿಕ ಅಸಾಮರ್ಥ್ಯದಂಥ ಕಾರಣಗಳಿಂದ ಪೂರ್ತಿ ಪರಾವಲಂಬಿಗಳಾಗುತ್ತಾರೆ. 2007ರ ಕಾಯಿದೆಯ ಮುನ್ನುಡಿಯನ್ನು ಗಮನಿಸಿದರೆ ಅದೊಂದು ಸಾಮಾಜಿಕ ಕಲ್ಯಾಣದ ಕಾಯಿದೆಯಾಗಿದ್ದು ಅದನ್ನು ಅನುಷ್ಠಾನ ಮಾಡುವಾಗ ಎಲ್ಲಾ ಸ್ತರದಲ್ಲಿ ಹಿರಿಯ ನಾಗರಿಕರ ಪರ ಉದಾರವಾಗಿ ಪರಿಗಣಿಸುವ ಅವಶ್ಯಕತೆ ಇದೆ' ಎಂದು ಅವಲೋಕನ ಮಾಡಿದೆ. ತಂದೆ ತಾಯಿಯರನ್ನು ಪರಿತ್ಯಜಿಸಿದರೆ ಅಂಥ ಮಕ್ಕಳಿಗೆ ಈ ಕಾಯಿದೆಯ 24ನೇ ಕಲಮಿನ ಅಡಿಯಲ್ಲಿ, ರೂ.5000 ದಂಡ ಮತ್ತು 3 ತಿಂಗಳು ಜೈಲು ಶಿಕ್ಷೆಯಾಗುತ್ತದೆ. ಮೇಂಟೆನೆನ್ಸ್ ಟ್ರಿಬ್ಯೂನಲ್ ನೀಡುವ ಅಂಥ ಆದೇಶಗಳ ಕುರಿತು ತಡೆ ಅಥವಾ ಇಂಜಂಕ್ಷನ್ ನೀಡಲು ಸಿವಿಲ್ ಕೋರ್ಟುಗಳಿಗೆ ಅಧಿಕಾರವಿರುವದಿಲ್ಲ.

ಹಿರಿಯ ನಾಗರಿಕರ ಪೋರ್ಟಲ್

ಹಿರಿಯ ನಾಗರಿಕರ ಸಹಾಯಕ್ಕಾಗಿ ಪ್ರತ್ಯೇಕ ಪೋರ್ಟಲ್ ಒಂದನ್ನು ಕೇಂದ್ರ ಸರಕಾರದ ಸಮಾಜ ಕಲ್ಯಾಣ ಇಲಾಖೆ ತೆರೆದಿದ್ದು ಅದರಲ್ಲಿ ವೃದ್ಧಾಶ್ರಮಗಳ ಕುರಿತು ಮಾಹಿತಿ, ಆರೋಗ್ಯ ಸಲಹೆಗಳು, ಅವರಿಗೆ ಉದ್ಯೋಗಾವಕಾಶಗಳು ಮುಂತಾದ ವಿಷಯಗಳ ಮಾಹಿತಿ ಇದೆ. ಹಿರಿಯ ನಾಗರಿಕರಿಗೆ ಗೌರವದಿಂದ ಸ್ಪಂದಿಸಿ ಅಗತ್ಯ ಸಹಾಯ ಮತ್ತು ಬೆಂಬಲ ನೀಡಲು 14567 ಸಂಖ್ಯೆಯ ಉಚಿತ ಹೆಲ್ಪ್‌ಲೈನ್ ಕೂಡಾ ಇರುತ್ತದೆ.

ಹಿಂದೂ ದತ್ತಕ ಮತ್ತು ಪಾಲನಾ ಕಾಯಿದೆ 1956 (Hindu Adoption and Maintenance Act): ಈ ಕಾಯಿದೆಯ 20 ಮತ್ತು 21ನೇ ಕಲಮಿನ ಅಡಿಯಲ್ಲಿ ಕೂಡಾ ಅಶಕ್ತ ತಾಯಿ ತಂದೆಯರ ಪಾಲನೆ-ಪೋಷಣೆ ಅವರ ಮಕ್ಕಳ ಜವಾಬ್ದಾರಿ ಎಂದು ಸ್ಪಷ್ಟವಾಗಿ ಹೇಳಲಾಗಿದೆ. 23ನೇ ಕಲಮಿನ ಪ್ರಕಾರ, ಪಾಲನೆ ಮಾಡಬೇಕಾಗಿರುವ ತಾಯಿ ತಂದೆಯರ ಸ್ಥಾನಮಾನ, ಅವರ ಸಾಮಾನ್ಯ ಅವಶ್ಯಕತೆ, ಮಕ್ಕಳ ಆರ್ಥಿಕ ಸ್ಥಿತಿಗತಿ ಇವೆಲ್ಲವನ್ನು ಪರಿಗಣಿಸಿ ಕೋರ್ಟು ಜೀವನಾಂಶದ ಆದೇಶ ನೀಡುತ್ತದೆ. ಆದರೆ ಜೀವನಾಂಶ ನೀಡುವ ಪ್ರಶ್ನೆ ಬರುವದು ಅವರನ್ನು ಮಕ್ಕಳು ಒಟ್ಟಿಗೆ ಇಟ್ಟುಕೊಳ್ಳದಿದ್ದಾಗ ಎಂಬುದನ್ನು ಗಮನಿಸಬೇಕು. HAMA-1956 ಮತ್ತು BNSS-2023 ಕಾಯಿದೆಗಳಡಿಯಲ್ಲಿ ಜೀವನಾಂಶ ಸಿಗುತ್ತದಾದರೂ ಆ ಕಾಯಿದೆಗಳಡಿ ವ್ಯಾಜ್ಯ ನಡೆಸುವದು ವಿಳಂಬವಾಗುತ್ತದೆ ಮತ್ತು ಹೆಚ್ಚಿನ ಖರ್ಚು ಬರುತ್ತದೆ. ಆದರೆ ಹಿರಿಯ ನಾಗರಿಕರ ಪಾಲನೆ ಮತ್ತು ಯೋಗಕ್ಷೇಮ ಕಾಯಿದೆ 2007ರ ಅಡಿಯಲ್ಲಿ ಪ್ರಕರಣ ನಡೆಸಲು ಯಾವದೇ ಕ್ಲಿಷ್ಟ ಕಾಯಿದೆಯ ಅಂಶಗಳಾಗಲೀ ವಕೀಲರ ನೇಮಕವಾಗಲೀ ಇರುವದಿಲ್ಲ. ಕೇವಲ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದರೆ ಶೀಘ್ರ ವಿಚಾರಣೆ ನಡೆಸಿ ಆದೇಶವನ್ನು ನೀಡಲಾಗುತ್ತದೆ.

ಹಿಂದಿನ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಮಕ್ಕಳಿಲ್ಲದ ಸಂಬಂಧಿಕರು/ಅನಾಥರನ್ನು ಮನೆಯಲ್ಲಿ ಇಟ್ಟುಕೊಂಡು ಅವರ ಆರೈಕೆ ಮಾಡಿ, ಅವರ ಅಂತ್ಯಸಂಸ್ಕಾರವನ್ನೂ ಪೂರೈಸಿದ ಎಷ್ಟೋ ಘಟನೆಗಳನ್ನು ನೋಡಿದ್ದೇವೆ. ಆದರೆ ಈಗ ವಯಸ್ಸಾದ ತಾಯಿತಂದೆಯರೇ ಮಕ್ಕಳಿಗೆ ಬೇಡವಾಗಿದ್ದಾರೆ. ಅಸಹಾಯಕ ವೃದ್ಧ ತಾಯಿ-ತಂದೆಯರನ್ನು ಆಹಾರ ನೀಡದೇ ಹಿಂಸಿಸುವ, ಪರಿತ್ಯಜಿಸುವ ಅನೇಕ ಘಟನೆಗಳು ನಡೆಯುತ್ತಿವೆ. ಹಿರಿಯ ಜೀವಗಳು ತಮ್ಮ ಜೀವನದ ಅಂತಿಮ ಕಾಲದಲ್ಲಿ ಮಕ್ಕಳಿಂದ ತಿರಸ್ಕೃತರಾಗಿ, ನೋವನ್ನು ಹೇಳಿಕೊಳ್ಳಲಾಗದೆ ಅನಾಥಾಶ್ರಮದಲ್ಲಿ ಬದುಕುವ ಸ್ಥಿತಿ ನಿಜಕ್ಕೂ ಶೋಚನೀಯ. ಜೀವನಾಂಶ ಕೇಳಲು ಕಾಯಿದೆ, ಕೋರ್ಟುಗಳು ಇವೆ. ಆದರೆ ಪ್ರೀತಿ-ಕಾಳಜಿಯ ಕೊರತೆ, ಅನಾದರ, ಅಸಡ್ಡೆ ಕುರಿತಾಗಿ ಕಾಯಿದೆ ಏನನ್ನೂ ಮಾಡಲಾಗದು. ಅಂಥ ಮಕ್ಕಳನ್ನು ಸಮಾಜ ಖಂಡಿಸಬೇಕು. ಕೆಲ ವರ್ಷಗಳ ಹಿಂದೆ ವೃದ್ಧಾಶ್ರಮವೊಂದರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಹಿರಿಯರೊಬ್ಬರು ಈ ವೃದ್ಧಾಶ್ರಮ ಖಾಲಿ ಇರಲಿ ಎಂದು ಹಾರೈಸಿದ್ದು ಮಾರ್ಮಿಕವಾಗಿತ್ತು. ತಮ್ಮ ಹಿತರಕ್ಷಣೆಗೆ ಈ ಎಲ್ಲ ಕಾಯಿದೆಗಳಿವೆ ಎಂಬುದು ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಸಮಾಜ ಮತ್ತು ಸಂಘಟನೆಗಳು ಅಂಥವರ ನೆರವಿಗೆ ನಿಂತು ಅಂಥ ಕಾಯಿದೆಗಳನ್ವಯ ದೊರಕುವ ಸಹಾಯವನ್ನು ಒದಗಿಸಲು ಕಾರ್ಯತತ್ಪರರಾಗಬೇಕು. ಈ ವಿಷಯದಲ್ಲಿ ಎಲ್ಲರಿಗೆ ತಿಳುವಳಿಕೆ ಕೊಡುವ ಅವಶ್ಯಕತೆಯನ್ನು ಒತ್ತಿ ಹೇಳುತ್ತಾ ಈ ಕಾಯಿದೆಗಳನ್ನು ಉಪಯೋಗಿಸುವ ಅವಶ್ಯಕತೆ ಬಾರದಿರಲಿ ಎಂದು ಆಶಿಸೋಣ.

ಭಟ್ಟರ್ ಸ್ಕಾಚ್

- **ನವೀನ ಸಿ.,ಕೆಂಗೇರಿ**
  ಭಟ್ರೇ, ಬುದ್ಧಿ ಬರಲು ಏನು ಮಾಡಬೇಕು?
- **ಕೆಟ್ಟ ಮೇಲೆ ಬುದ್ಧಿ ಬರುತ್ತೆ ಎಂಬ ಗಾದೆ ಕೇಳಿಲ್ಲವಾ?!**

- **ರಾಮು ಬನದ, ಗದಗ**
  ಭಟ್ರೇ, ತಾಳಿಯನ್ನು ಸೊಂಟಕ್ಕೆ ಕಟ್ಟುವ ಸಂಪ್ರದಾಯ ಇರಬೇಕಿತ್ತು ಅಲ್ವಾ?
- **ಸರಗಳ್ಳರಿಗೆ ಆಗ ಕಷ್ಟ ಆಗುತ್ತಿತ್ತು!**

- **ಎಚ್.ಪಿ.ಪಾಟೀಲ, (ಇಮೇಲ್ ಮೂಲಕ)**
  ಭಟ್ರೇ, ಕೋಮಲ ಮನಸ್ಸಿನ ಕಾಲೇಜು ಹುಡುಗಿಯ ಬಗ್ಗೆ ಸಿನಿಮಾ ಮಾಡಬೇಕೆಂದಿರುವೆ, ಟೈಟಲ್ ಸೂಚಿಸುತ್ತೀರಾ?
- **ಕಾಲೇಜಿ ಹುಡ್ಗಿಯಾದ್ರೂ ಮನಸ್ಸು ಎಲ್‌ಕೆಜಿ!**

- **ಪ್ರಶಾಂತ ರೆಡ್ಡಿ, ಬೆಂಗಳೂರು**
  ಭಟ್ರೇ, ನಾನು ಮದುವೆಯಾಗುವ ಹುಡುಗಿ ಹೇಗಿರಬೇಕು?
- **ಅವಳ ಅಮ್ಮನೂ ಚೆನ್ನಾಗಿರಬೇಕು ಅಂದ್ರೆ ಕಷ್ಟವಪ್ಪಾ?**

- **ಹೇಮಂತ ರಾಯಗಡ, ಸಂಜಯನಗರ**
  ಭಟ್ರೇ, ಒಂದು ಕಾಲದಲ್ಲಿ ಮೆರೆದವರು ನೇಪಥ್ಯಕ್ಕೆ ಸರಿದುಬಿಡುತ್ತಾರಲ್ಲ?
- **ಈಗ್ಯಾಕೆ ಕಟ್ಟಾ ನಾಯ್ಡು ನೆನಪಿಸಿಕೊಂಡೆ?**

- **ಬಸವರಾಜ ರೊಟ್ಟಿ, ಕೊಪ್ಪಳ**
  ಭಟ್ರೇ, ಮನೆಯಲ್ಲಿ ಹಳೆ ಕಾಲದ ನೆನಪಿನ ವಸ್ತುವನ್ನಿಡಬೇಕು ಅಂದುಕೊಂಡಿದ್ದೇನೆ. ಏನು ಇಡಲಿ?
- **ಎಸ್‌ಟಿಡಿ ಬೂತ್!**

- **ವೆಂಕಟೇಶ ಹೊನ್ನೆ, ಶಿವಮೊಗ್ಗ**
  ಭಟ್ರೇ, ಯಾವ ವ್ಯಾಪಾರವೂ ಕೈ ಹಿಡಿತಿಲ್ಲ, ಬ್ಯೂಟಿ ಪಾರ್ಲರ್ ತೆರೆಯಲಾ?
- **ಬಳೆ ವ್ಯಾಪಾರ ಮಾಡಬೇಕಿತ್ತು!**

- **ವಸಂತ ಜೆ.ರಾಯ, ತುಮಕೂರು**
  ಭಟ್ರೇ, ಹೆಡ್ಡಿಂಗ್‌ನಲ್ಲಿ ದೇವರ ಹೆಸರನ್ನು ಬರೆದರೆ ಬಾಯಿ ಬಡ್ಕೋತಾರಲ್ಲ, ಯಾಕೆ?
- **ಬಾರ್‌ಗೆ ದೇವರ ಹೆಸರಿಟ್ಟಿದ್ದನ್ನು ನೋಡಿ ಬಾಯಿ ಮುಚ್ಚಿಕೊಂಡವರು ಇದಕ್ಕೆ ಯಾಕೆ ಬಾಯಿ ಬಡ್ಕೋತಾರೆ ಹೇಳು!**

- **ನೀಲೇಶ್ ಶೆಟ್ಟಿ, ಭೈರಸಂದ್ರ**
  ಭಟ್ರೇ, ಡಿಕೆಶಿ ಪ್ರಮಾಣವಚನಕ್ಕೆ ಬರದಿದ್ದವರು ಯಾರು!
- **ಪ್ರಗತಿಪರ ಚಿಂತಕರು!**

- **ಪ್ರವೀಣ ಕಾಯನೂರು, (ಇಮೇಲ್ ಮೂಲಕ)**
  ಭಟ್ರೇ, ವೈಭವ ಸೂರ್ಯವಂಶಿ ನೋಡಿ ನೀವು ಕೋಪಿಸಿಕೊಂಡಿರಂತೆ?
- **ತೊಟ್ಟಿಲಲ್ಲಿ ಮಲಗಿದ್ದವನನ್ನು ಎಬ್ಬಿಸಿ ಬ್ಯಾಟ್ ಕೊಟ್ಟು ಆಡು ಅಂತ ಕಳಿಸಿದರೆ ಕೋಪ ಬರದೇ ಇರುತ್ತಾ ಹೇಳು?!**

- **ಜಯಾ ಅನಂತ, ಶಿರಸಿ**
  ಭಟ್ರೇ, ನೀವು ಪ್ರೀತಿಯಿಂದ ಕೊಲ್ಲುತ್ತೀರಿ ಅಂತ ಇಲ್ಲೊಬ್ಬಳು ಹೇಳುತ್ತಾಳಲ್ಲ?
- **ಟೀಕೆಗಳಿಗೆ ಜಗ್ಗದವರ ಮಹಾ ಅಸ್ತ್ರ ಅದು ಎಂಬುದು ಆಕೆಗೆ ಗೊತ್ತಿರಬೇಕು!**

ಮೋರಿಯಿಂದೆದ್ದು ಗೋರಿ ಸೇರಲಿರುವ ಜೆನ್ ಜಿರಳೆ

ವಿದೇಶವಾಸಿ

ಕಿರಣ್ ಉಪಾಧ್ಯಾಯ

vveditoped@gmail.com

ಒಂದು ತಿಂಗಳ ಹಿಂದೆ ಹುಟ್ಟಿಕೊಂಡ ಕೆಲವು ಜಿರಳೆಗಳ ಬಗ್ಗೆ ಗೊತ್ತಲ್ಲ? ಅದೇ, ನಕಲಿ ಪ್ರಮಾಣಪತ್ರಗಳ ಕುರಿತು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯೊಬ್ಬರು ನಕಲಿ ಪ್ರಮಾಣ ಪತ್ರಗಳ ಕುರಿತಾದ ವಿಚಾರಣೆಯ ಸಂದರ್ಭದಲ್ಲಿ, ನಿರುದ್ಯೋಗಿ ಯುವಕರು ಮತ್ತು ಸಂಘರ್ಷ ಕ್ಕಾಗಿಯೇ ಇರುವ ಕೆಲವು ಕಾರ್ಯಕರ್ತರನ್ನು ಜಿರಳೆಗೆ ಹೋಲಿಸಿದ್ದರು. ಅದಕ್ಕೆ ಕೆಲವು ಜೆನ್ ಜಿ (1997ರಿಂದ 2012ರ ನಡುವೆ ಜನಿಸಿದವರು) ಯುವಕರು ಸೇರಿ ಅಭಿಜಿತ್ ದಿಪ್ಕೆ ನೇತೃತ್ವದಲ್ಲಿ ಸಾಮಾಜಿಕ ಜಾಲತಾಣದಲ್ಲಿ 'ನಾವು ಜಿರಳೆಗಳು' ಎಂಬ ಅಭಿಯಾನ ಆರಂಭಿಸಿದರು. ಮೇ 16ರಂದು ಅದನ್ನು ರಾಜಕೀಯ ಪಕ್ಷ ಎಂದು ಕರೆದುಕೊಂಡರು. ಜಿರಳೆಗಳ ಪಕ್ಷ ಭಾರತದಲ್ಲಿ ಇನ್ನೂ ನೋಂದಣಿಯಾಗಲಿಲ್ಲ, ಆ ಮಾತು ಬೇರೆ.

ಜೂನ್ 6ರಂದು ಅಭಿಜಿತ್ ದಿಪ್ಕೆ ಎಂಬ ದೊಡ್ಡ ಜಿರಳೆ, ಅಮೆರಿಕದಿಂದ ಹಾರಿ ದೆಹಲಿಯ ಭೂಮಿಗೆ ಬಂದು ಇಳಿಯಿತು. ಇಳಿದದ್ದೇ ನೇರವಾಗಿ ಜಂತರ್ ಮಂತರ್ ತಲುಪಿ ಭಾಷಣವನ್ನೂ ಮಾಡಿತು. ಸ್ವಲ್ಪ ಹೊತ್ತು ಕುಳಿತು, ಅನಾರೋಗ್ಯದ ಕಾರಣ ಹೇಳಿ ಅಲ್ಲಿಂದ ಹೊರಟು ಹೋಯಿತು. ಅಲ್ಲ, ಯಾವ ವಾತಾವರಣಕ್ಕಾದರೂ ಹೊಂದಿಕೊಳ್ಳುವ ಗುಣವುಳ್ಳ, ಯಾವ ಪರಿಸ್ಥಿತಿಯಲ್ಲಾದರೂ ಬದುಕಬಹುದಾದ ಕೀಟ ಎಂದರೆ ಜಿರಳೆ, ನಮಗೆ ಜಿರಳೆ ಒಂದು ಮಾದರಿ ಎಂದು ಕೆಲವರು ಹೇಳಿಕೊಂಡಿದ್ದಿದೆ. ನನಗೆ ಉತ್ತರ ದೊರಕದ ಪ್ರಶ್ನೆಯೆಂದರೆ ಕೇವಲ ಬದುಕಿದರೆ ಸಾಕೆ? ಅದರಿಂದ ಯಾರಿಗಾದರೂ, ಏನಾದರೂ ಪ್ರಯೋಜನವಿದೆಯೇ? ಇರಲಿ, ಆ ತರ್ಕಗಳೆಲ್ಲ ಈಗ ಬೇಡ. ಸದ್ಯ ಚಾಲ್ತಿಯಲ್ಲಿರುವುದು ಭಾರತದ ಜೆನ್ ಜಿರಳೆಯ ವಿಷಯ. ದೇಶದ ಸಮಸ್ಯೆಯನ್ನು ಬಗೆಹರಿಸಲು ಪಣತೊಟ್ಟ ಜೆನ್ ಜಿರಳೆ ಕುಲತಿಲಕ, ಭಾರತಕ್ಕೆ ಬಂದು ಕೆಲವೇ ತಾಸಿನಲ್ಲಿ ಅಸ್ವಸ್ಥವಾಯಿತು. ಎರಡು ದಿನ ಮೊದಲಷ್ಟೇ ಪತ್ರಿಕಾ ಗೋಷ್ಠಿ ಕರೆದು, 'ಪ್ರತಿಭಟನೆ ಮಾಡುವುದಕ್ಕೆ ನಮಗೆ ಸ್ವಾತಂತ್ರ್ಯವಿದೆ, ಅದಕ್ಕೆ ಪೊಲೀಸರಿಂದ ಪರವಾನಿಗೆ ಏಕೆ ಪಡೆಯಬೇಕು?' ಎಂದು ಕೇಳಿದ್ದ ಜಿರಳೆ ಸಂಘದ ಪ್ರಧಾನ ಕಾರ್ಯದರ್ಶಿ, ದೆಹಲಿಯ ತಾಪ ತಾಳಲಾರದೆ ತಂಪು ಪಾನೀಯ ಹೀರುತ್ತಾ ಕುಳಿತಿತ್ತು. ಇದರಿಂದ ಏನಾಯಿತು? ಏನಿಲ್ಲ, ಜಂತರ್ ಮಂತರ್‌ನಲ್ಲಿ ಕೆಲವು ತಾಸುಗಳಾದರೂ ನಡೆಯಬೇಕಿದ್ದ ಪ್ರತಿಭಟನೆ ಐದೇ ತಾಸಿಗೆ ಮುಗಿದುಹೋಯಿತು. ಇನ್ನು ಚುನಾವಣಾ ಸಂದರ್ಭದಲ್ಲಿ ಇವೆಲ್ಲ 'ಎಷ್ಟು ಪ್ರಚಾರ ಮಾಡಿಯಾವು?', 'ಹೇಗೆ ಪ್ರಚಾರ ಮಾಡಿಯಾವು?' ಎಂದು ಕೇಳುವಂತಾಯಿತು.

ಇನ್ನು ಜನ ಎಷ್ಟು ಸೇರಿದ್ದರು? ಒಂದು ತಿಂಗಳ ಹಿಂದೆ ಜಾಲತಾಣದಲ್ಲಿ ಆರಂಭವಾದ ಈ ಅಭಿಯಾನವನ್ನು ಎರಡು ಕೋಟಿ ಇಪ್ಪತ್ತೆರಡು ಲಕ್ಷ ಜನ ಹಿಂಬಾಲಿಸಿದ್ದರು. ಅವರ ಪೈಕಿ ಇಪ್ಪತ್ತು ಸಾವಿರವಾದರೂ ಬರುತ್ತಾರೆ ಅಂದುಕೊಂಡರೆ, ಎರಡು ಸಾವಿರವೂ ಬರಲಿಲ್ಲ. ಅವರನ್ನು ನಿಯಂತ್ರಿಸಲು ಬಂದಿದ್ದ ಪೊಲೀಸರೇ ಕೆಲಸವಿಲ್ಲದೆ ಖಾಲಿ ಕುಳಿತುಕೊಳ್ಳುವಂತಾಗಿತ್ತು. ಹೋಗಲಿ ಪ್ರತಿಭಟನೆಗೆ ಬಂದವರಲ್ಲಿ ಎಲ್ಲರೂ ಜೆನ್ ಜಿಗಳಾಗಿದ್ದರೆ ಎಂದರೆ ಅದೂ ಅಲ್ಲ. ಬಂದವರಲ್ಲಿ ಸಾಕಷ್ಟು ಜನ ಜನರೇಶನ್ ಎಕ್ಸ್, ಜನರೇಶನ್ ವೈ, ಮಿಲೇನಿಯಲ್ಸ್ ಕೂಡ ಇದ್ದರು. ಈ ಹಿಂದೆ ಎನ್‌ಸಿಆರ್, ಸಿಏಎ ವಿರೋಧಿಸಿ ದೆಹಲಿಯಲ್ಲಿ ರಸ್ತೆ ತಡೆಗೆ ಕುಳಿತಿದ್ದವರೂ ಇದ್ದರು. ಕೆಲವರಂತೂ ಪ್ರತಿಭಟನೆಗೆ ಎಂದು ಬಂದವರಾಗಿರಲಿಲ್ಲ. ಅಲ್ಲಿ ಏನು ನಡೆಯುತ್ತದೆ, ಹೇಗೆ ನಡೆಯುತ್ತದೆ ಎಂದು ನೋಡಲು ಬಂದವರು, ಯೂ ಟ್ಯೂಬರ್‌ಗಳು ಇದ್ದರು. ಬಹುಶಃ ಒಂದೆರಡು ವಿಶ್ವವಿದ್ಯಾಲಯದವರು, ಬೇರೆ ಬೇರೆ ಪಕ್ಷದ ಕಾರ್ಯಕರ್ತರು ಇದ್ದರು. ಕೆಲವರು ಸಿಜೆಪಿಯ ಟಿ-ಶರ್ಟ್, ಕಾಗದದ ಮುಖವಾಡ ಇತ್ಯಾದಿಗಳನ್ನು ಮಾರಲು ಬಂದಿದ್ದರು. ಅವರಿಗೂ, ಹೋರಾಟಕ್ಕೂ ಸಂಬಂಧವೇ ಇರಲಿಲ್ಲ. ಅವರದ್ದೇನಿದ್ದರೂ ಪಕ್ಕಾ ವ್ಯಾಪಾರ. ಸ್ವತಃ ಪಕ್ಷ ಕಟ್ಟಿಕೊಂಡ ಪ್ರಮುಖ ಜಿರಳೆಗಳೇ ತಮ್ಮ ಪಕ್ಷದ ಟಿ-ಶರ್ಟ್, ಬ್ಯಾಡ್ಜ್, ಟೋಪಿ, ಇತ್ಯಾದಿಗಳನ್ನು ಮುದ್ರಿಸಿ ಮಾರಾಟ ಮಾಡುತ್ತಿರುವಾಗ ಇದೇನು ಮಹಾ? ಇದನ್ನೆಲ್ಲ ನೋಡಿದಾಗ, ಭ್ರಷ್ಟಾಚಾರದ ವಿರುದ್ಧ ಎರಡು ಹಂತದಲ್ಲಿ ಒಟ್ಟೂ ಹದಿನೈದು ದಿನ ಉಪವಾಸ ಸತ್ಯಾಗ್ರಹ ಮಾಡಿದ 'ಸೈಲೆಂಟ್ ಜನರೇಶನ್'ನ ಅಣ್ಣಾ ಹಜಾರೆ ನೂರು ಪಾಲು ವಾಸಿ ಅನ್ನಿಸಿತು. ಪ್ರತಿಭಟನೆ ಅಥವಾ ಸಮಾವೇಶಕ್ಕೆ ಬಂದವರಲ್ಲಿ ಅನೇಕರು ದಫಲಿ ಬಾರಿಸುತ್ತ ಅದೇ ಹಳೆಯ 'ಆಜಾದಿ' ಹಾಡು, 'ಹಿಂದೂ ಮುಸ್ಲಿಂ ನಹೀ ಚಲೇಗಾ' ಘೋಷಣೆ ಕೂಗಿದರು. ಇವೆಲ್ಲ ಹಳೆಯದಾಗಿ ಅದೆಷ್ಟೋ ವರ್ಷಗಳಾದರೂ ಇವರು ಇನ್ನೂ ಅಲ್ಲಿಯೇ ಇದ್ದಾರಲ್ಲ ಎಂದೆನಿಸಿತು. ಇದನ್ನೇ ಮಾಡುತ್ತಿದ್ದರೆ, ಜೆನ್ ಜಿ ಅಲ್ಲ, ಜೆನ್ ಆಲ್ಫಾ, ಜೆನ್ ಬೀಟಾ ಬಂದರೂ ಏನೂ ಬದಲಾವಣೆ ಆಗುವುದಿಲ್ಲ ಎಂದೆನಿಸಿತು.

ನೀಟ್ ಪರೀಕ್ಷೆಯ ಮುನ್ನ ಆದ ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ವಿರೋಧಿಸಲು ಆರಂಭವಾದ ಸಂಘಟನೆಯ ಇನ್‌ಸ್ಟಾಗ್ರಾಂ ಪುಟವನ್ನು ಎರಡೇ ವಾರದಲ್ಲಿ ಒಂದೂವರೆ ಕೋಟಿ ಜನ ಹಿಂಬಾಲಿಸಿದರು. ಮುಂದಿನ ಒಂದು ವಾರದಲ್ಲಿ ನಲವತ್ತು ಲಕ್ಷ ಜನ ಹಿಂಬಾಲಿಸಿದರು. ಆಗಂತೂ ಅದು ಪ್ರತಿನಿತ್ಯದ ಸುದ್ದಿಯಾಗಿತ್ತು. ನಂತರ ಈ ಸಂಘಟನೆ ರಾಜಕೀಯ ಪಕ್ಷವಾಗಿ ಚುನಾವಣೆ ಎದುರಿಸುತ್ತದೆ ಎಂದಾಯಿತು. ಅಲ್ಲಿಂದ ಮುಂದೆ ಹತ್ತು ಲಕ್ಷ ಜನ ಮಾತ್ರ ಹಿಂಬಾಲಕರಾಗಿ ಸೇರಿಕೊಂಡರು. ಕಳೆದ ಹತ್ತು ದಿನದಿಂದ ನೋಡುತ್ತಿದ್ದೇನೆ, ಒಂದು ಲಕ್ಷ ಜನರೂ ಈ ಪುಟವನ್ನು ಹಿಂಬಾಲಿಸಲಿಲ್ಲ. ಮೊನ್ನೆಯ ಪ್ರತಿಭಟನೆಯ ನಂತರ ಮೂರು ಲಕ್ಷ ಜನ ಮತ್ತೆ ಹೊಸ ಹಿಂಬಾಲಕರು ಹುಟ್ಟಿಕೊಂಡರು. ಇದನ್ನೆಲ್ಲ ನೋಡಿದಾಗ, ಬಹಳ ದಿನಗಳ ಹಿಂದೆಯೇ ಬಂದ ಒಂದು ವರದಿ ಸರಿ ಇದ್ದಿರಲೂಬಹುದು ಎಂದೆನಿಸುತ್ತಿದೆ. ಆ ವರದಿಯ ಪ್ರಕಾರ, ಆರಂಭದ ದಿನಗಳಲ್ಲಿ, ಈ ಹಿಂಬಾಲಕರಲ್ಲಿ ಬಹುತೇಕರು ಪಾಕಿಸ್ತಾನದವರು ಎಂದು ಹೇಳಲಾಗಿತ್ತು. ಉಳಿದ ಹಿಂಬಾಲಕರಲ್ಲೂ ವಿದೇಶದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅಮೆರಿಕದ ಕಂಸಾಸ್‌ನ ರಾಜಧಾನಿ ಟೊಪೇಕಾದಿಂದ ಎಂಟೂವರೆ ಲಕ್ಷ ಜನ ಹಿಂಬಾಲಕರಿದ್ದರು. ಆದರೆ ಆ ನಗರದ ಜನಸಂಖ್ಯೆಯೇ ಒಂದೂ ಕಾಲು ಲಕ್ಷ. ಅದೇ ರೀತಿ, ಎರಡು ಲಕ್ಷ ಅರವತ್ತು ಸಾವಿರ ಜನಸಂಖ್ಯೆ ಇರುವ ಮೆಕ್ಸಿಕೋದ ಕಾಬೋ ಸಾನ್ಲುಕಾಸ್ ನಗರದಿಂದ ಎಂಟೂವರೆ ಲಕ್ಷ ಜನ ಹಿಂಬಾಲಕರಿದ್ದರು. ಮಲೇಶಿಯಾ, ಐವರಿ ಕೋಸ್ಟ್, ಪ್ಯಾಲೆಸ್ತೀನ್, ಇತ್ಯಾದಿ ದೇಶಗಳಿಂದ ತಲಾ ಎಂಟು ಲಕ್ಷ ತೊಂಬತ್ತು ಸಾವಿರ ಹಿಂಬಾಲಕರಿದ್ದಾರೆ ಎಂದು ವರದಿ ಹೇಳುತ್ತಿತ್ತು. ಅನುಮಾನ ಬರುವುದು ಇಲ್ಲಿಯೇ. ನಾಲ್ಕು ಬೇರೆ ಬೇರೆ ದೇಶಗಳಿಂದ ಒಂದೇ ಸಂಖ್ಯೆಯಲ್ಲಿ ಹಿಂಬಾಲಕರಾಗುವುದು ಹೇಗೆ? ಒಂದು ಸಾವಿರವಾದರೂ ಆಚೆ-ಈಚೆ ಇರಬಹುದಾಗಿತ್ತಲ್ಲ? ಅಷ್ಟಕ್ಕೂ ಈ ಪ್ರದೇಶಗಳಲ್ಲೆಲ್ಲ ಆ ಪ್ರಮಾಣದಲ್ಲಿ ಭಾರತೀಯರೇ ಇಲ್ಲ. ಹಾಗಾದರೆ ಇದೆಲ್ಲ ಖರೀದಿಸಿದ ಹಿಂಬಾಲಕರ ಸಂಖ್ಯೆಯೇ? ಹೌದು ಎಂದಾದರೆ ಇದು ಆಘಾತಕಾರಿ ವಿಷಯ. ಇಲ್ಲ ಎಂದಾದರೆ ಇನ್ನೂ ಹೆಚ್ಚಿನ ಆತಂಕಕಾರಿ ವಿಷಯ. ಏಕೆಂದರೆ ಆಗ 'ಬೇರೆ ದೇಶದಲ್ಲಿರುವವರಿಗೆ ಭಾರತದ ವಿಷಯದಲ್ಲಿ ಅಷ್ಟು ಆಸಕ್ತಿ ಏಕೆ?' ಎನ್ನುವ ಪ್ರಶ್ನೆ ಮೂಡುತ್ತದೆ. ಇದಕ್ಕೆ ಪೂರಕವಾಗಿ ಇದರ ಸಹಸಂಸ್ಥಾಪಕನೂ ಆಗಿದ್ದ ಪತ್ರಕರ್ತನೊಬ್ಬ ಸಂಘಟನೆಯಲ್ಲಿ ಪಾರದರ್ಶಕತೆಯ ಕೊರತೆ ಮತ್ತು ಲಿಂಗ ಭೇದದ ಕಾರಣ ನೀಡಿ ಅದರಿಂದ ಹೊರಗೆ ಬಂದ. ಇದರಿಂದ ಏನಾಯಿತು? ಈ ಜೆನ್ ಜಿರಳೆ ಹುಟ್ಟಿದ ನಂತರ ಇಟ್ಟ ಮೊದಲ ಹೆಜ್ಜೆಯೇ ಮೋಸ ಮತ್ತು ಸುಳ್ಳಿನದ್ದು ಎಂದಾಯಿತು.

ರಾತ್ರಿ ಮನೆಯಲ್ಲಿ ದೀಪ ಆರಿಸಿ, ಜನರೆಲ್ಲ ಮಲಗಿದ ನಂತರ, ತಾನೇ ರಾಜ ಅಂದುಕೊಂಡು ಮನೆ ತುಂಬಾ ಓಡಾಡಿದ ಮಾತ್ರಕ್ಕೆ ಜಿರಳೆ ಆ ಮನೆಯ ಒಡೆಯನಾಗುವುದಿಲ್ಲ. 'ಇಷ್ಟು ದಿನ ಹೆಣ್ಣು ಮಕ್ಕಳನ್ನು ಮಾತ್ರ ಹೆದರಿಸುತ್ತಿದ್ದೆ, ಇನ್ನು ಮುಂದೆ ಸರಕಾರವನ್ನೂ ಹೆದರಿಸುತ್ತೇನೆ' ಎಂದರೆ ಅದೂ ಸಾಧ್ಯವಾಗುವುದಿಲ್ಲ. ಏಕೆಂದರೆ ಈ ಕಾರ್ಯವನ್ನು ಈಗಾಗಲೇ ವಿಪಕ್ಷಗಳು ಮಾಡುತ್ತಿವೆ. ಅದೇ ಕೆಲಸವನ್ನು ಇನ್ನೊಂದು ಹೆಸರಿನಲ್ಲಿ ಮಾಡಬೇಕೆಂದೇನೂ ಇಲ್ಲ. ಅವರ ಮಾತನ್ನೇ ಜೆನ್ ಜಿರಳೆಗಳು ಹೇಳಿಕೊಂಡು ಓಡಾಡಿದರೆ, ಉಳಿದವರು ಮೂರ್ಖರು ಅಂದುಕೊಂಡರೆ, ಅವರಷ್ಟು ಶತಮೂರ್ಖರು ಇನ್ಯಾರೂ ಇಲ್ಲ. ಅಷ್ಟಕ್ಕೂ ಜೆನ್ ಜಿಗಳು ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿ, ಗೆದ್ದ ಉದಾಹರಣೆಗಳು ಇತ್ತೀಚಿನ ದಿನಗಳಲ್ಲಿ ಕಡಿಮೆ ಎಂದೇ ಹೇಳಬಹುದು. ಮಾತೆತ್ತಿದರೆ ನೇಪಾಳ, ಬಾಂಗ್ಲಾದೇಶ, ಇರಾನ್ ಇತ್ಯಾದಿ ದೇಶಗಳ ಉದಾಹರಣೆ ನೋಡಿದರೆ ಇದರ ಅರಿವಾಗುತ್ತದೆ. ಜೆನ್ ಜಿ ಪ್ರತಿಭಟನೆಯಿಂದ ಬಾಂಗ್ಲಾದೇಶದಲ್ಲಿ ಸರಕಾರ ಪತನವಾಯಿತು ನಿಜ. ನಂತರ ನಡೆದ ಚುನಾವಣೆಯಲ್ಲಿ ಆರಿಸಿ ಬಂದದ್ದು ಅದೇ ಹಳೆಯ ಪಕ್ಷ ಮತ್ತು ಅದೇ ಹಳೆಯ ಪಕ್ಷದ ಮಾಜಿ ಪ್ರಧಾನಿಯ ಮಗ ಹೊರತು ಜೆನ್ ಜಿ ಪಕ್ಷವಲ್ಲ. ಇರಾನ್‌ನಲ್ಲಿ ಸರಕಾರದ ವಿರುದ್ಧ ದನಿಯತ್ತಿದ ಜೆನ್ ಜಿಗಳ ಧ್ವನಿ ಯುದ್ಧದ ಸದ್ದಿನಲ್ಲಿ ಅಡಗಿ ಹೋಯಿತು. ನೇಪಾಳದಲ್ಲಿ ಸರಕಾರ ಬದಲಾಗಿ ಜೆನ್ ಜಿ ಸರಕಾರ ಬಂದಿದ್ದು ಹೌದಾದರೂ, ಹೆಚ್ಚಿನ ಬದಲಾವಣೆಯೇನೂ ಕಾಣುತ್ತಿಲ್ಲ.



ಹಾಗಂತ ಪ್ರತಿಭಟನೆ ಮಾಡಲೇಬಾರದು, ಆಂದೋಲನ ನಡೆಯಲೇಬಾರದು ಎಂದು ನಾನು ಹೇಳುವುದಿಲ್ಲ. ನೀಟ್ ಅಥವಾ ಸಿಬಿಎಸ್ಸಿ ಪ್ರಶ್ನೆ ಪತ್ರಿಕೆ ಸೋರಿಕೆಯ ವಿಷಯ ದೊಡ್ಡ ಅಪರಾಧವೇ. ಲಕ್ಷ-ಲಕ್ಷ ಸಂಖ್ಯೆಯಲ್ಲಿ ನಮ್ಮದೇ ದೇಶದ ಮಕ್ಕಳು, ಪಾಲಕರು, ಮನೆಯವರು ಇದರಿಂದ ನೋವು ಅನುಭವಿಸಿದ್ದಾರೆ. ಈ ನೆನಪು ಎಲ್ಲರ ಮನಸ್ಸಿನಲ್ಲಿ ಬಿಸಿ ಬರೆಯಾಗಿ ಬಹುಕಾಲ ಇರುತ್ತದೆ. ಅದರಲ್ಲಿ ಅಪರಾಧಿಗಳಿಗೆ ಶಿಕ್ಷೆ ಆಗಲೇಬೇಕು, ಇನ್ನು ಮುಂದೆ ಈ ರೀತಿ ಆಗದಂತೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಇಷ್ಟು ಹೇಳಿದ ಮಾತ್ರಕ್ಕೆ ಕೆಲಸ ಆಗುವುದಿಲ್ಲ ಎನ್ನುವುದೂ ನನಗೆ ಗೊತ್ತು. ಏಕೆಂದರೆ ಭಾರತದಲ್ಲಿ ಪ್ರಶ್ನೆ ಪತ್ರಿಕೆ ಸೋರುವ ಇತಿಹಾಸ ಇಂದು ನಿನ್ನೆಯದಲ್ಲ. ಇದು ಏಕಮೇವವೂ ಅಲ್ಲ. ಸ್ವಾತಂತ್ರ್ಯ ಪೂರ್ವದಲ್ಲೇ ಭಾರತದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿತ್ತಂತೆ. ತಿಜೋರಿಯಲ್ಲಿ ಭದ್ರವಾಗಿ ಇರಬೇಕಿದ್ದ ಪ್ರಶ್ನೆ ಪತ್ರಿಕೆಗಳನ್ನೇ ಕದ್ದು ಮಾರಿದರಂತೆ ಎಂಬ ಕಥೆಗಳನ್ನು ನಾವೂ ನಮ್ಮ ಬಾಲ್ಯದಲ್ಲಿ ಕೇಳಿದ್ದೇವೆ. ಅದರ ನಂತರವೂ ಸಾಕಷ್ಟು ಸಲ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಕಳೆದ ಇಪ್ಪತ್ತು ವರ್ಷದ ಇತಿಹಾಸ ತೆಗೆದು ನೋಡಿದರೆ, ಸಿಬಿಎಸ್ಸಿ ಹನ್ನೆರಡನೇ ತರಗತಿಯ ಅಕೌಂಟೆನ್ಸಿ ಪ್ರಶ್ನೆ ಪತ್ರಿಕೆ, AIIEE, PMT, AIIIMS, CBSC ಯ ಹತ್ತು ಮತ್ತು ಹನ್ನೆರಡನೇ ತರಗತಿಗಳ ಪ್ರಶ್ನೆಪತ್ರಿಕೆಗಳು, ನಮ್ಮ ರಾಜ್ಯವೂ ಸೇರಿದಂತೆ ಇತರ ರಾಜ್ಯಗಳ ಬೋರ್ಡ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು, ಅಷ್ಟೇ ಏಕೆ, ನಮ್ಮ ರಾಜ್ಯದಲ್ಲೇ ಪೊಲೀಸ್ ಹುದ್ದೆಗೆ ನಡೆಯಬೇಕಾದ ಪರೀಕ್ಷೆಯ ಪ್ರಶ್ನೆಪತ್ರಿಕೆಗಳೂ ಸೋರಿಕೆಯಾಗಿವೆ. ಇವೆಲ್ಲವೂ ಅಪರಾಧಗಳೇ ಅಲ್ಲವೇ? ಆದರೆ ಪ್ರತಿ ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾದಾಗಲೂ ಕೇಳಿ ಬರುವ ಮಾತು ಎಂದರೆ, 'ಇದನ್ನು ನಾವು ಖಂಡಿಸುತ್ತೇವೆ', 'ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತೇವೆ', 'ಮುಂದೆ ಈ ರೀತಿ ಆಗದಂತೆ ತಡೆಗಟ್ಟಲು ಕ್ರಮ ಕೈಗೊಳ್ಳುತ್ತೇವೆ'. ಇಷ್ಟೇ ಬಿಟ್ಟರೆ ಮತ್ತೇನಾದರೂ ಇದೆಯೇ? ಪ್ರಶ್ನೆಪತ್ರಿಕೆಗಳ ಸೋರಿಕೆ ಯಾವುದೋ ಒಂದೇ ಪಕ್ಷ ಅಧಿಕಾರದಲ್ಲಿದ್ದಾಗ ನಡೆದದ್ದಲ್ಲ. ಭಾರತದಲ್ಲಿ ಇದನ್ನು ಒಂದು ಪಿಡುಗು ಎಂದೇ ಹೇಳಬಹುದು.

ಈಗ ಪ್ರಶ್ನೆ ಇರುವುದು, ಮುಂಬರುವ ದಿನಗಳಲ್ಲಿ ಬಿಜೆಪಿಯೇತರ ರಾಜ್ಯದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾದರೆ ಜೆನ್ ಜಿರಳೆಗಳು ಅದನ್ನೂ ಖಂಡಿಸುತ್ತವೆಯೇ? ಕಷ್ಟ ಎಂದೆನಿಸುತ್ತದೆ. ಏಕೆಂದರೆ ಕೆಲವೇ ತಿಂಗಳುಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ಪತ್ರಕರ್ತರ ಮೇಲೆ ಹಲ್ಲೆಯಾದಾಗ, ಅಲ್ಲಿ ಇಡಿ ಅಧಿಕಾರಿಗಳನ್ನೇ ಕೂಡಿಹಾಕಿ, ಮುಖ್ಯಮಂತ್ರಿ ಸ್ವತಃ ಕಡತಗಳನ್ನು ಎತ್ತಿಕೊಂಡು ಹೋದಾಗ, ತೆಲಂಗಾಣದ ಮುಖ್ಯಮಂತ್ರಿ ಪತ್ರಕರ್ತರನ್ನು ನಗ್ನಗೊಳಿಸಿ ಮೆರವಣಿಗೆ ಮಾಡಬೇಕು ಎಂದಾಗ ಯಾವುದೇ ಜಿರಳೆ ಶಬ್ದ ಮಾಡಲಿಲ್ಲ. ಆಗೆಲ್ಲ ಇವೆಲ್ಲ ತೀರಾ ಚಿಕ್ಕದಾಗಿದ್ದವು, ಇವಕ್ಕೆ ಬುದ್ಧಿ ಬೆಳೆದಿರಲಿಲ್ಲ ಎಂದಲ್ಲ. ಅದು ಅವರ ಆಯ್ಕೆಯಾಗಿರಲಿಲ್ಲ ಅಷ್ಟೇ. ಅದರೊಂದಿಗೆ, ಈಗಾಗಲೇ ಇತರ ಪಕ್ಷಗಳ ಬೆಂಬಲವನ್ನು ಜೆನ್ ಜಿರಳೆಗಳು ಪಡೆದುಕೊಂಡಾಗಿದೆ. ಒಂದು ರಾಜ್ಯದ ಮುಖ್ಯಮಂತ್ರಿ ಆಗಿದ್ದವರು ಜಿರಳೆ ಆಂದೋಲನದ ಟಿ-ಶರ್ಟ್ ಬಿಡುಗಡೆ ಮಾಡಿದರು. ಇನ್ನು ಕೆಲವು ಪಕ್ಷದ ಮುಖಂಡರು, ಚುನಾವಣೆ ಗೆಲ್ಲಲಾಗದ ನಟರು, ಕೆಲವು ರಾಜಕಾರಣಿಗಳು ಇದಕ್ಕೆ ತಮ್ಮ ಬೆಂಬಲ ಸೂಚಿಸಿದರು. ಇದಕ್ಕೆ ಎನ್‌ಎಸ್‌ಯುಐ, ಎಸ್‌ಎಫ್‌ಐ ಇತ್ಯಾದಿ ಸಂಸ್ಥೆಗಳು ಬೆಂಬಲ ಸೂಚಿಸಿದವು. ಅಲ್ಲಿಗೆ ಜಿರಳೆಪಕ್ಷದ ಇತಿಶ್ರೀ ಬರೆದಾಗಿತ್ತು. ಅದನ್ನು ಅರ್ಥ ಮಾಡಿಕೊಳ್ಳದ ಜಿರಳೆಗಳು, ಅದನ್ನೇ ಆನಂದಿಸಿದವು. ಜಿರಳೆ ಪಕ್ಷದ ಕೆಲವು ಸ್ಥಾಪಕರು ಜಾಲತಾಣದ ತಮ್ಮ ಪರಿಚಯದಲ್ಲಿ ಬಹಳ ದಿನಗಳಿಂದ ಇದ್ದ ಯಾವುದೋ ಒಂದು ಪಕ್ಷದ ಕಾರ್ಯಕರ್ತ ಎನ್ನುವ ಅಂಶವನ್ನು ತೆಗೆದು ಹಾಕಿದರು. ಅದರ ಅವಶ್ಯಕತೆಯೇನೂ ಇರಲಿಲ್ಲ. ಒಂದು ಪಕ್ಷದ ಕಾರ್ಯಕರ್ತರಾಗಿದ್ದವರು ಬೇರೆ ಒಂದು ಸಂಘಟನೆ ಮಾಡಿ ಒಂದು ವಿಷಯದ ಕುರಿತು ಅಥವಾ ಒಂದು ಘಟನೆಯ ವಿರುದ್ಧವಾಗಿ ಹೋರಾಟ ಮಾಡಬಾರದು ಎಂದೇನೂ ಇಲ್ಲ. ಆದರೆ 'ಕಳ್ಳನ ಮನಸ್ಸು ಹುಳ್ಳ-ಹುಳ್ಳಗೆ' ಅಂದಂತೆ, ಅವರಿಗೇ ಅನಿಸಿರಬೇಕು.

ಹೋಗಲಿ, ಇನ್ನು ಮುಂದಾದರೂ ಸರಿಯಾದ ವಿಷಯಕ್ಕೆ ಹೋರಾಟ ನಡೆಸಲಿ, ಅದೆಷ್ಟೋ ಜೆನ್ ಜಿಗಳೇ ಮಾದಕ ದ್ರವ್ಯದ ವ್ಯಸನಕ್ಕೆ ಬಿದ್ದು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ರಸ್ತೆ, ಸಾರಿಗೆ ನಿಯಮ ಪಾಲಿಸದೇ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ದೇಶದಲ್ಲಿ ಇಂದಿಗೂ ಸಾಮಾಜಿಕ ನ್ಯಾಯ, ಮೀಸಲಾತಿ, ಸ್ವಚ್ಛತೆ, ಭದ್ರತೆ, ಈಗಂತೂ ಕೆಲವು ಪುಕ್ಕಟೆ ಭಾಗ್ಯಗಳು. ಇವೆಲ್ಲದರ ವಿರುದ್ಧ ಪ್ರತಿಭಟನೆ ನಡೆಯುತ್ತದೆಯೇ? ಎಲ್ಲರಿಗೂ ಉಚಿತ ವೈದ್ಯಕೀಯ ಸೌಲಭ್ಯ, ಉಚಿತ ಶಿಕ್ಷಣ ದೊರಕಿಸಿಕೊಡುವ ನಿಟ್ಟಿನಲ್ಲಿ ಹೋರಾಟ ನಡೆಯುತ್ತದೆಯೇ? ಈ ಸಮಸ್ಯೆಗಳು ಜಿರಳೆ ಪಕ್ಷದ ಕಣ್ಣಿಗೆ ಕಿವಿಗೆ ಬೀಳಲೇ ಇಲ್ಲವೇ? ಮುಂದಾದರೂ ಇಂಥ ವಿಷಯದ ಕುರಿತಾಗಿ ಇವರ ಪ್ರತಿಭಟನೆ ಇರುತ್ತದೆಯೇ? ಸಮಸ್ಯೆಯ ಕುರಿತಾಗಿ ಪಕ್ಷಾತೀತವಾಗಿ ಹೋರಾಟ ನಡೆಸಬೇಕು. ಆಗ ಮಾತ್ರ ಇದು ಸರಿಯಾದ ಜೆನ್ ಜಿ ಹೋರಾಟವಾಗುತ್ತದೆ. ಪಕ್ಷ ಯಾವುದೇ ಇದ್ದರೂ ತಪ್ಪನ್ನು ತಪ್ಪು ಎಂದು ತೋರಿಸಿಕೊಡುವ, ಅದರ ವಿರುದ್ಧ ಧ್ವನಿ ಎತ್ತುವ ಧೈರ್ಯವನ್ನು ರೂಢಿಸಿಕೊಂಡಾಗ ಮಾತ್ರ ಅದು ನಿಜವಾದ ಜೆನ್ ಜಿ ಹೋರಾಟವಾಗುತ್ತದೆ.

ಇಲ್ಲವಾದರೆ ಇದು ಈಗಾಗಲೇ ಹಳತಾಗಿ, ಮುರಿದುಬಿದ್ದ ಇಂಡಿ ಕಂಪನಿಯ ಹೊಸ ಮಾಡೆಲ್ ಗಾಡಿಯಾಗುತ್ತದೆ. ಮೋರಿಯಿಂದ ಮೇಲೇಳುವುದಕ್ಕಿಂತ ಮೊದಲೇ ಗೋರಿ ಸೇರುತ್ತದೆಯೇ ವಿನಃ ಮತ್ತೇನೂ ಆಗಲು ಸಾಧ್ಯವಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಿಜೆಪಿ ಯಃಕಶ್ಚಿತ್ ಅಲ್ಲ

ಶಿಕ್ಷಣ ಕ್ಷೇತ್ರದಲ್ಲಿಯ ಕೇಂದ್ರ ಸರಕಾರದ ವೈಫಲ್ಯಗಳನ್ನು ಖಂಡಿಸಿ 'ಕಾಕ್ರೋಚ್ ಜನತಾ ಪಾರ್ಟಿ'ಯು ದೆಹಲಿಯಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಕೆಲವೇ ನೂರು ಸಂಖ್ಯೆಯ ಜನರು ಮಾತ್ರ ಭಾಗವಹಿಸಿರಬಹುದು. ಆದರೆ, ಅವರೆಲ್ಲರ ಕಣ್ಣುಗಳಲ್ಲಿ ಆಶಾವಾದ ಕಾಣುತ್ತಿದೆ, ಹೊಸ ನಿರೀಕ್ಷೆ ಹುಟ್ಟಿದೆ. ಆ ನಿರೀಕ್ಷೆಯ ಹಿಂದೆ, ಅವರು ಅನುಭವಿಸುತ್ತಿರುವ ನೋವು ಅಡಗಿದೆ. ಭಾಗವಹಿಸಿದ್ದ ಆ ನೂರಾರು ಜನರು ದೇಶದ ಅಂತಹ ಕೋಟ್ಯಂತರ ಯುವಜನರ ಪರೋಕ್ಷ ಪ್ರತಿನಿಧಿಗಳು. ವಿವೇಕ ಉಳ್ಳವರು ಈ ಪ್ರತಿಭಟನೆಯನ್ನು ಲಘುವಾಗಿ ಪರಿಗಣಿಸಬಾರದು.

- ಎಚ್. ಆನಂದರಾಮ ಶಾಸ್ತ್ರೀ

ಆನ್‌ಲೈನ್ ಲಾಟರಿ ವಂಚನೆ

ನಮ್ಮ ರಾಜ್ಯದಲ್ಲಿ ಲಾಟರಿ ನಿಷೇಧವಿದ್ದರೂ ಆನ್‌ಲೈನ್ ಕೇರಳ ಲಾಟರಿ ಹೆಸರಿನಲ್ಲಿ ಜನರನ್ನು ವಂಚಿಸುತ್ತಿರುವ ಸೈಬರ್ ಕ್ರಿಮಿನಲ್‌ಗಳ ಅಟ್ಟಹಾಸ ಮಿತಿಮೀರಿದೆ. ಇತ್ತೀಚೆಗಷ್ಟೇ ರಾಜ್ಯದ ಮುಗ್ಧರು ಬರೋಬ್ಬರಿ 50 ಲಕ್ಷ ರೂಪಾಯಿ ಕಳೆದುಕೊಂಡಿರುವುದು ಆತಂಕಕಾರಿ ಸಂಗತಿ. ಈ ಜಾಲವು ನಕಲಿ ವೆಬ್‌ಸೈಟ್ ಮತ್ತು ಆರ್‌ಬಿಐ ಹೆಸರಿನ ಖೋಟಾ ಪತ್ರಗಳನ್ನು ಬಳಸಿ ಜಿಎಸ್‌ಟಿ ಹಾಗೂ ಟಿಡಿಎಸ್ ನೆಪದಲ್ಲಿ ಹಂತ ಹಂತವಾಗಿ ಹಣ ಲೂಟಿ ಮಾಡುತ್ತಿದೆ. ಕೇರಳ ಸರಕಾರವು ತನ್ನ ಅಧಿಕೃತ ಲಾಟರಿಯನ್ನು ಕಾಗದದ ರೂಪದಲ್ಲೇ ಮಾರಾಟ ಮಾಡುತ್ತದೆ, ಎಂದಿಗೂ ಆನ್‌ಲೈನ್‌ನಲ್ಲಿ ಮಾರುವುದಿಲ್ಲ ಎಂಬ ಕನಿಷ್ಠ ಜ್ಞಾನವೂ ಜನರಿಗಿಲ್ಲದಿರುವುದು ದುರಂತ. ವಾಟ್ಸಾಪ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಇಂತಹ ನಕಲಿ ಲಾಟರಿ ಲಿಂಕ್‌ಗಳನ್ನು ಸೈಬರ್ ಕ್ರೈಮ್ ವಿಭಾಗವು ತಕ್ಷಣವೇ ಪತ್ತೆಹಚ್ಚಿ ನಿರ್ಬಂಧಿಸಬೇಕು. ಸರಕಾರ ಆನ್‌ಲೈನ್ ಕೇರಳ ಲಾಟರಿ ಸಂಪೂರ್ಣ ನಕಲಿ ಎಂದು ಮಾಧ್ಯಮಗಳಲ್ಲಿ ವ್ಯಾಪಕ ಜಾಗೃತಿ ಮೂಡಿಸಬೇಕು.

- ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ಉಚಿತ ಪ್ರಯಾಣ ವಿಸ್ತರಿಸಿ

ನಮ್ಮ ಸರಕಾರ ಎಲ್ಲ ವಯೋಮಾನದ ಮಹಿಳೆಯರಿಗೆ ಉಚಿತ ಸರಕಾರಿ ಬಸ್ ಪ್ರಯಾಣದ ಸೌಲಭ್ಯವನ್ನು ಕಲ್ಪಿಸಿದೆ. ಹೊಸ ಸರಕಾರ ಬಂದ ಒಂದೇ ದಿನದಲ್ಲಿ ಎಲ್ಲ ಹಂತದ ಶಾಲಾ- ಕಾಲೇಜು ವಿದ್ಯಾರ್ಥಿಗಳಿಗೂ ಉಚಿತ ಬಸ್ ಪ್ರಯಾ ಣದ ಸೌಲಭ್ಯವನ್ನು ನೀಡಿರುವುದು ನಿಜಕ್ಕೂ ಶ್ಲಾಘನೀ ಯ. ಪ್ರಸ್ತುತ ನಮ್ಮ ರಾಜ್ಯದಲ್ಲಿ ಹಿರಿಯ ನಾಗರಿಕರ ಸಂಖ್ಯೆ ಅಂದಾಜು ಒಂದು ಕೋಟಿ ಇದ್ದು ಇದರಲ್ಲಿ ಪುರುಷ ಹಿರಿಯ ನಾಗರಿಕರ ಸಂಖ್ಯೆ ಸುಮಾರು 45 ಲಕ್ಷ ಇರಬಹುದು. ವಯೋವೃದ್ಧರಾದ ಇವರು ಆರ್ಥಿಕವಾಗಿ ಅವರ ಅವಲಂ ಬಿತರನ್ನೋ ಅಥವಾ ಬೇರೆ ಯಾರನ್ನೋ ಅವಲಂಬಿಸಬೇಕಾದ ಪರಿಸ್ಥಿತಿ ಇರುತ್ತದೆ. ವೃದ್ಧಾಪ್ಯದಲ್ಲಿ ಸಹಜವಾಗಿ ಬರುವ ಕಾಯಿ ಲೆಗಳಿಗೆ ಹಣವನ್ನೂ ಹೊಂದಿಸುವಲ್ಲಿ ಹೈರಾಣ ಆಗುತ್ತಿದ್ದಾರೆ. ಕೆಲವರಿಗೆ ಯಾರೂ ದಿಕ್ಕಿರುವುದಿಲ್ಲ. ಇವರು ತಮ್ಮ ಕಷ್ಟಗಳನ್ನು ಯಾರಲ್ಲೂ ಹೇಳಿಕೊಳ್ಳಲಾಗದ ಪರಿಸ್ಥಿತಿ ಸಹ ಉದ್ಭವಿಸುವ ಸಮಸ್ಯೆಗಳೇ ಹೆಚ್ಚು. ಹಾಲಿ ಹಿರಿಯ ನಾಗರಿಕರಿಗೆ ಸರಕಾರಿ ಬಸ್ ಪ್ರಯಾಣ ದರದಲ್ಲಿ ಶೇ. 25 ರಿಯಾಯಿತಿ ನೀಡುತ್ತಿದೆ. ಮಹಿಳಾ ಪ್ರಯಾಣಿಕರು ಪೂರ್ಣ ರಿಯಾಯಿತಿ ಪಡೆಯುತ್ತಿರುವುದರಿಂದ ಪುರುಷ ಹಿರಿಯ ನಾಗರಿಕರಿಗೂ ಪೂರ್ಣ ರಿಯಾಯಿತಿ ವಿಸ್ತರಿಸಿದಲ್ಲಿ ಯೋಗ್ಯ ನಿರ್ಧಾರ ಆಗುವುದು.

- ಜಿ.ಹೆಚ್. ಸಂಕಪ್ಪ, ಬೆಂಗಳೂರು

ಬೈಕ್ ಸದ್ದಿನ ಹಾವಳಿ

ನಾಗರಿಕರು ನೆಮ್ಮದಿಯಿಂದ ಬದುಕುವಂತೆ ನೋಡಿಕೊಳ್ಳುವುದು ಕಾನೂನು ಪಾಲಕರ ಕರ್ತವ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಈಚಿನ ನಾಲ್ಕಾರು ತಿಂಗಳಲ್ಲಿ, ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ, ಅದರಲ್ಲೂ ಹೊರವಲಯಗಳಲ್ಲಿ, ಕಿವಿಗಡಚಿಕ್ಕುವ ಸದ್ದು ಮಾಡುವ ಮೋಟಾರ್ ಬೈಕ್‌ಗಳ ಹಾವಳಿ ಅತಿಯಾಗಿದೆ. ಕೆಲವು ದೊಡ್ಡ ಗಾತ್ರದ ಮೋಟಾರ್ ಬೈಕ್‌ಗಳ ಸೈಲೆನ್ಸರ್ ಪೈಪ್‌ಗಳನ್ನು ಅನಧಿಕೃತವಾಗಿ ಮತ್ತು ಕಾನೂನು ಬಾಹಿರವಾಗಿ ಬದಲಾವಣೆ ಮಾಡಿ, 'ಧಡ್ ಧಡ್' ಎಂದು ಸದ್ದು ಮಾಡಿಕೊಂಡು ಕೆಲವು ಪುಂಡರು ಓಡಾಡುತ್ತಿರುತ್ತಾರೆ. ಹಗಲು ರಾತ್ರಿ ಎನ್ನದೇ ಈ ರೀತಿ ಸದ್ದು ಮಾಡಿಕೊಂಡು ಓಡಾಡುವ ಮೋಟಾರ್ ಸೈಕಲ್‌ಗಳಿಂದಾಗಿ, ನಾಗರಿಕರು ನೆಮ್ಮದಿಯಿಂದ ಇರಲು, ನಿದ್ದೆ ಮಾಡಲು ಅಸಾಧ್ಯ ಎನಿಸಿದೆ.. ಈ ಕುರಿತು ಬೆಂಗಳೂರು ನಗರ ಪೊಲೀಸ್ ಇಲಾಖೆಯ ವರು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿ.

- ಅದಿತಿ ಅಂಚೆಪಾಳ್ಯ, ಕೆಂಗೇರಿ

ಚಿತ್ರವನ್ನಷ್ಟೇ ಅಲ್ಲ, ಭಾವವಿಶೇಷ, ಧ್ವನಿಯನ್ನೂ ಗಮನಿಸಿ

ಪ್ರತಿಕ್ರಿಯೆ

ಗ.ನಾ. ಭಟ್ಟ

vveditoped@gmail.com

ಇಂದಿನ ಕಾಲಘಟ್ಟದಲ್ಲಿ ನಾವಿಂದು ಯಾವ ಸ್ಥಿತಿಯಲ್ಲಿದ್ದೇವೆ ಎಂದರೆ ನಿಜಕ್ಕೂ ನಾವು ನಾಚಿಕೆಪಟ್ಟುಕೊಳ್ಳಬೇಕು. ಎಗ್ಗಿಲ್ಲದೆ ಮೆರೆಯುತ್ತಿರುವ ನಮ್ಮ ಸಾಮಾಜಿಕ ಜಾಲತಾಣವೇ ಇದಕ್ಕೆ ಮುಖ್ಯ ಕಾರಣ ಎಂದರೆ ಸತ್ಯವನ್ನು ಬಿಟ್ಟು ಬೇರೆ ಹೇಳಿದಂತಾಗದು. ಎಲ್ಲರಿಗೂ ತಾನು ಜಗತ್ತಿಗೆ ಕಾಣಿಸಿಕೊಳ್ಳಬೇಕೆಂಬ ಧಾವಂತದಲ್ಲಿ ಮನಸ್ಸಿಗೆ ತೋಚಿದ್ದೆಲ್ಲವನ್ನೂ ಆತುರಾತುರದಲ್ಲಿ ಹಂಚಿಕೊಳ್ಳುವ ಈ ವಿಚಿತ್ರ ಮನಃಸ್ಥಿತಿಯೇ ಅನೇಕ ಅಪಸವ್ಯಗಳಿಗೆ ಕಾರಣವಾಗಿವೆ. ಅದು ಅಕ್ಷರಪ್ರಪಂಚಕ್ಕೂ ಚಾಚಿರುವುದು ಅಕ್ಷರಪ್ರೇಮಿಗಳೆಲ್ಲ ತಲೆತಗ್ಗಿಸುವಂತಾಗಿದೆ.

ಉದಾಹರಣೆಗೆ ಕಳೆದ 3ನೇ ತಾರೀಕು ವಿಶ್ವವಾಣಿಯ ಮುಖಪುಟದಲ್ಲಿ ರಾಜ್ಯದ ನೂತನ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರರ ಶಿವನ ವೇಷದ ವ್ಯಂಗ್ಯಚಿತ್ರವೊಂದು ಪ್ರಕಟಗೊಂಡಿದ್ದೇ ತಡ! ಸಾಮಾಜಿಕ ಜಾಲತಾಣದಲ್ಲಿ ಕೆಲವರು ವಿಶ್ವವಾಣಿ ಸಂಪಾದಕರ ಮೇಲೆ ಮುಗಿಬಿದ್ದರು. ಅವರ ಮುಖ್ಯ ಪುಕಾರು ಏನೆಂದರೆ-ಡಿಕೆಶಿಯವರನ್ನು ದೇವರನ್ನಾಗಿ ಚಿತ್ರಿಸಿಬಿಟ್ಟಿದ್ದಾರೆ. ಇದರ ಪರಿಣಾಮವಾಗಿ ನಮ್ಮ ದೇವಾನುದೇವತೆಗಳನ್ನು ಅವಹೇಳನ ಮಾಡಿದಂತಾಗಿದೆ; ಇದು ಸಲ್ಲದು ಎನ್ನುವುದೇ ಅವರ ಆಕ್ರೋಶಭರಿತ ಅಳಲು. ಫೇಸ್‌ಬುಕ್ ಮೊದಲಾದ ಜಾಲತಾಣಗಳಲ್ಲಿ ಇವರ ಈ ಹೇಳಿಕೆ ಹರಿದಾಡುತ್ತಿದೆ. ಅವರ ಮಾತಿಗೆ ಸಾಥ್ ಕೊಡುವ ಕೆಲವು ಆತುರಗಾರರ ಹೇಳಿಕೆಗಳೂ ಹರಿದಾಡುತ್ತಿವೆ.

ಇವರೆಲ್ಲರ ಶೋಚನೀಯ ಸ್ಥಿತಿಯೇನೆಂದರೆ ಸಾಹಿತ್ಯಪ್ರಪಂಚದ ರಸದೃಷ್ಟಿ ಮರೆಯಾಗಿರುವುದು ಮತ್ತು ಪತ್ರಿಕೋದ್ಯಮದ ವಿರಾಟ್ ಸ್ವರೂಪಗಳಲ್ಲಿ ಒಂದಾದ ವ್ಯಂಗ್ಯ, ವಿನೋದ, ತಮಾಷೆ, ವಿಡಂಬನೆ, ಅಣಕ, ಕುಚೋದ್ಯ, ಹಾಸ್ಯ, ಪರಿಹಾಸ್ಯ ಅರ್ಥವಾಗದಿರುವುದು. ವಿಶ್ವವಾಣಿಯಲ್ಲಿ ಪ್ರಕಟಗೊಂಡಿದ್ದು ಅದೊಂದು ಕೇವಲ ಅಣಕ ಅಥವಾ ವಿಡಂಬನೆ ಅಷ್ಟೇ! ಅಲ್ಲಿ ಪ್ರಕಟಗೊಂಡಿದ್ದಾದರೂ ಏನು? ಡಿಕೆಶಿಯವರ ಬಾಹ್ಯವ್ಯಕ್ತಿತ್ವಕ್ಕೆ ಶಿವನ ರೂಪವನ್ನು ಅಂಟಿಸಿದ್ದು ಅಥವಾ ಜೋಡಿಸಿದ್ದು. ಅದಕ್ಕನುಗುಣವಾಗಿ ರಾಜ್ಯದಲ್ಲಿನ್ನು ಶಿವಡಂಗುರ ಎಂಬ ಶೀರ್ಷಿಕೆಯನ್ನು ಬರೆದದ್ದು. ಅದನ್ನು ನೋಡಿದ ಯಾರಿಗೂ ಅದೊಂದು ತಮಾಷೆಯ, ವ್ಯಂಗ್ಯದ, ಲಘುವಿನೋದದ ಚಿತ್ರವೆಂದು ಅನ್ನಿಸದೇ ಇರದು. ಡಿಕೆಶಿಯವರನ್ನು ಅವಹೇಳನ ಮಾಡುವುದೇ ಆಗಿದ್ದರೆ ಅವರ ಶರೀರಕ್ಕೆ ಡಿಟ್ಟೋ ಶಿವನ ಚಿತ್ರವನ್ನೇ ಆರೋಪಿಸಿ, ಬಹುಸುಂದರವಾಗಿ, ಚೇತೋಹಾರಿಯಾಗಿ ಮಾರ್ಪಡಿಸಿ ಜಗತ್ತಿಗೆ ಸಾರಬಹುದಿತ್ತು. ಅವರು ಹಾಗೆ ಮಾಡಲೇ ಇಲ್ಲ. ಅವರ ಮುಖವನ್ನು ಯಥಾವತ್ ಉಳಿಸಿಕೊಂಡು ಉಳಿದ ಎಲ್ಲದಕ್ಕೂ ಶಿವನ ವೇಷವನ್ನು ಲೇಪಿಸಿದ್ದಾರೆ. ಡಿಕೆಶಿಯವರ ಶರೀರವಂತೂ ಖಂಡಿತಕ್ಕೂ ಉಕ್ಕಿನ ಸ್ನಾಯುಗಳಿಂದ ಮಿರಿಮಿರಿ ಮಿಂಚುವ ಶರೀರವಲ್ಲ. ಅಲ್ಲಿ ಹಾಗೆಯೇ ಚಿತ್ರಿತವಾಗಿದೆ. ಜಟಾಜೂಟದ ಮುಂಭಾಗದಲ್ಲಿ ಅವರ ಕ್ರಾಪನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಕೈಗಳಲ್ಲಿ ಢಕ್ಕೆ, ತ್ರಿಶೂಲಗಳಿವೆ. ಒಟ್ಟಿನಲ್ಲಿ ಡಿಕೆಶಿಯವರ ಮುಖವೊಂದನ್ನು ಹೊರತುಪಡಿಸಿ ಉಳಿದಿದ್ದೆಲ್ಲವೂ ಕೃತಕವಾಗಿ ನಿರ್ಮಿಸಿದ ಶಿವನ ಚಿತ್ರ ಎಂದು ಎಲ್ಲರಿಗೂ ಗೊತ್ತಾಗುತ್ತದೆ.

ಕೆಲವರು, ಅವನ ಕೈಯಲ್ಲಿರುವುದು ಡಮರುಗವೇ ವಿನಾ ಡಂಗುರ ಅಲ್ಲ ಅಂತ ಹೇಳಿದ್ದಾರೆ. ವಾಸ್ತವಿಕವಾಗಿ ಶಿವನ ಕೈಯಲ್ಲಿರುವುದು ಡಂಗುರವೂ ಅಲ್ಲ; ಡಮರುಗವೂ ಅಲ್ಲ. ಅದು ಢಕ್ಕೆ. ಇವು ಸಣ್ಣಪುಟ್ಟ ವ್ಯತ್ಯಾಸಗಳೊಡನೆ ಇರುವ ಚರ್ಮವಾದ್ಯಗಳು. ಇಂತಹ ಚರ್ಮವಾದ್ಯಗಳು ಅನೇಕ ಇವೆ. ಭಗವದ್ಗೀತೆಯಲ್ಲಿ 'ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ'-(1-13) ಎಂಬ ಮಾತು ಬರುತ್ತದೆ. 'ಶಂಖ- ಭೇರಿ, ತಮಟೆ-ಡೋಲು-ಮುಂತಾದ ರಣಕಹಳೆಗಳು ಮೊಳಗಿದವು' ಅಂತ ಇದಕ್ಕೆ ಅರ್ಥ. ಇಲ್ಲಿ ಶಂಖವೊಂದನ್ನು ಹೊರತುಪಡಿಸಿದರೆ ಭೇರಿ, ಪಣವಗಳು ಚರ್ಮವಾದ್ಯಗಳೇ ಆಗಿವೆ. ಆನಕ ಮತ್ತು ಗೋಮುಖ ಅಂದರೆ ಕೊಂಬು ಅಥವಾ ಕಹಳೆಯಾಗಿವೆ. ಒಟ್ಟಿನಲ್ಲಿ ಇವು ಬೇರೆ ಬೇರೆ ಹೆಸರಿನ ಚರ್ಮವಾದ್ಯಗಳು. ತಬಲಾ, ಚಂಡೆ, ಮೃದಂಗ, ಮದ್ದಳೆ ಇವೂ ಚರ್ಮವಾದ್ಯಗಳೇ ಆಗಿವೆ. ಹೆಸರು ಮಾತ್ರ ಬೇರೆ. ಕೆಲವರು ಆವೇಶಭರಿತರಾಗಿ ವಿಶ್ವವಾಣಿಯ ಶಿವನ (ಶಿವಕುಮಾರರ) ಚಿತ್ರವನ್ನು ಇಟ್ಟುಕೊಂಡು ಅಂಗುಲ ಅಂಗುಲ ಕತ್ತರಿಸಬೇಕೆಂದು ತೀರ್ಮಾನಿಸಿದಂತಿದೆ.

ಇನ್ನೂ ಒಂದು ಸಂಗತಿ. ಡಂಗುರವನ್ನು ಡಂಗುರ ಅಂತಲೂ ಡಂಗೂರ ಅಂತಲೂ ಹೇಳುವುದು ರೂಢಿಯಲ್ಲಿದೆ. ಅದು ನಾಮಪದವಾಗಿರುವಂತೆ ಕ್ರಿಯಾಪದವೂ ಹೌದು. 'ವಿಷಯವನ್ನು ಡಂಗುರ ಹೊಡೆಯಬೇಡ' ಎಂದರೆ ವಿಷಯವನ್ನು ಘೋಷಿಸಿ ಬಹಿರಂಗ ಮಾಡಬೇಡ ಅಂತ ಅರ್ಥವಾಗುತ್ತದೆ. ವಿಶ್ವವಾಣಿಯ ತಲೆಬರಹದಂತೆ 'ರಾಜ್ಯದಲ್ಲಿನ್ನು ಶಿವಡಂಗುರ' ಎಂದರೆ ಇನ್ನು ಮುಂದೆ ಡಿ.ಕೆ. ಶಿವಕುಮಾರರ ಆಳ್ವಿಕೆ ಜರ್ಬಾಗಿ, ಲಂಗುಲಗಾಮಿಲ್ಲದೆ ಸಾಗುತ್ತದೆ ಅಂತಲೋ, ಅವರದೇ ಸರ್ವಾಧಿಕಾರ ಅಂತಲೋ, ಶಿವನ ತಾಂಡವ ನೃತ್ಯದಂತೆಯೇ ಜಗತ್ಪ್ರಳಯಕಾರಿಯಾಗುತ್ತದೆ ಅಂತಲೋ ಎಂಬಿತ್ಯಾದಿ ಅನೇಕ ಅರ್ಥಗಳಾಗಬಹುದು. ಈ ಚಿತ್ರ ಮತ್ತು ತಲೆಬರಹದ ಧ್ವನಿ ಅಥವಾ ಸೂಚ್ಯಾರ್ಥವನ್ನು ಗ್ರಹಿಸದಿದ್ದುದರ ಫಲವೇ ಇಂತಹ ಅವಿವೇಕ- ಆತುರ- ಆವೇಶ-ಅತಿರೇಕದ ಹೇಳಿಕೆಗೆ ಕಾರಣವಾಗಿದೆ.

ಜೊತೆಗೆ ಅವರು ಇನ್ನೂ ಒಂದು ಸೂಕ್ಷ್ಮವನ್ನು ಗಮನಿಸಿದಂತಿಲ್ಲ. ಶಿವಕುಮಾರ ಅಂದರೆ ಈಶ್ವರನೂ ಅಥವಾ ಶಿವನೂ ಅಲ್ಲ. ಅವನ ಮಗ ಕುಮಾರ ಅಷ್ಟೇ! ಅಂದರೆ ಷಡಾನನ, ಸುಬ್ರಹ್ಮಣ್ಯ, ಅಂತ ಅರ್ಥವಾಗುತ್ತದೆ. ಅವನನ್ನೇ ಕಾರ್ತಿಕೇಯ, ಸ್ಕಂದ ಎಂದೆಲ್ಲಾ ಕರೆಯುತ್ತಾರೆ. ಇವೆಲ್ಲದರ ಹಿನ್ನೆಲೆಯಲ್ಲಿ ವಿಶ್ವವಾಣಿಯ ಶಿವನ ಚಿತ್ರ ಡಿಕೆಶಿಯವರನ್ನು

ದೇವರನ್ನಾಗಿ ಮಾಡುವುದಕ್ಕೆ ಹೊರಟಿದ್ದಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಅವರನ್ನು ಕೇವಲ ವಿಡಂಬಿಸುವುದಕ್ಕೆ ಹೊರಟಿದ್ದು. ಅದು ಕೇವಲ ಒಂದು ಸ್ಥೂಲ ನೋಟದ ಚಿತ್ರವಾಗಿ, ಧ್ವನಿಯಾಗಿ ಹೊರಟಿದೆ. ಅದಕ್ಕೆ ಸಂಬಂಧಪಟ್ಟ ಇಡೀ ಬರಹದಲ್ಲಿ ಎಲ್ಲಿಯೂ ಕೂಡಾ ಡಿಕೆಶಿಯವರನ್ನು ಅವಮಾನಿಸಿದ, ಅವಹೇಳನ ಮಾಡಿದ ಅಥವಾ ಅವರನ್ನು ವೈಭವೀಕರಿಸಿದ, ಪಕ್ಷಪಾತ ತೋರಿಸಿದ ಒಂದೇ ಒಂದು ಒಕ್ಕಣೆಯಿಲ್ಲ. ಅಲ್ಲಿರುವುದು ಕೇವಲ ಪ್ರಮಾಣವಚನ ಸ್ವೀಕಾರ ಮತ್ತು ಮಂತ್ರಿ ಸಂಪುಟದ ವಿಸ್ತರಣೆ ವಿಷಯದ ಕುರಿತಾಗಿದೆಯೇ ವಿನಾ ಇನ್ನೇನೂ ಇಲ್ಲ. ಹೀಗಿರುವಾಗ ಅವರನ್ನು ದೇವರು ಮಾಡುವುದು ಹೇಗೆ?

ಪತ್ರಿಕೆಯೆಂಬುದು ಹಲವು ವಿಷಯಗಳ ಭಂಡಾರ. ವ್ಯಂಗ್ಯ ಚಿತ್ರವೆಂಬುದು ಪತ್ರಿಕೆಯವರ ಬ್ರಹ್ಮಾಸ್ತ್ರ. ಅದು ಧ್ವನಿಸುವ ಧ್ವನಿಗಳೂ ಅನಂತ. ನಾವು ಅವನ್ನು ಗ್ರಹಿಸಿ ಆನಂದಪಡಬೇಕೇ ವಿನಾ ರಂಧ್ರಾನ್ವೇಷಿಗಳಾಗಿ ತಾವೇ ಬುದ್ಧಿವಂತರು ಎಂದು ಜಗತ್ತಿಗೆ ಸಾರಬಾರದು. ತಲೆಯಿಲ್ಲದವರು ಯಾರನ್ನೂ ಪ್ರೋತ್ಸಾಹಿಸಿಯಾರು! ಅಂತಹವರನ್ನು ಮೆಚ್ಚಿಸುವುದಕ್ಕೆ ಹೋಗಬಾರದು. ಕೆಲವರು ಮಾಡುತ್ತಿರುವುದು ಅದನ್ನು.

ನಮ್ಮ ಕಾಲದ ಇಂದಿನ ದುರದೃಷ್ಟವೆಂದರೆ ಜನರಲ್ಲಿ ರಸದೃಷ್ಟಿ ನಶಿಸಿರುವುದು. ಅದು ವಿಜ್ಞಾನ ವಿದ್ಯೆಯ ಪ್ರಭಾವ, ಸಾಮಾಜಿಕ ಜಾಲತಾಣದ ಅಟ್ಟಹಾಸ, ಧಾವಂತದ ಬದುಕು, ಜೀವನ ಮೌಲ್ಯವೇ ಪಲ್ಲಟಗೊಂಡಿರುವುದು, ಸಾಧನೆಯಿಲ್ಲದ ಪ್ರಸಿದ್ಧಿ ಪಡೆಯುವ ಆತುರ- ಹೀಗೆ ಏನೇನೋ ಕಾರಣಗಳಿರಬಹುದು. ವಾಕ್ಯವೊಂದರ ಧ್ವನಿ ಕಿವಿಗೆ ಗೋಚರಿಸದೆ ಅದರ ಶಬ್ದಾರ್ಥ ಮಾತ್ರ ಮನಸ್ಸನ್ನು ಹಿಡಿಯುವ ದುಃಸ್ಥಿತಿಗೆ ಬಂದು ತಲುಪಿದ್ದೇವೆ ನಾವು. 'ಭೀಮನಿಗೆ ಕೋಪ ಬಂದು ಅವನ ಕಣ್ಣಿನಿಂದ ಕಿಡಿಯು ಹೊರಟಿತು' ಅಂದರೆ 'ಆ ಕಿಡಿಯಲ್ಲಿ ಸಿಗರೇಟು ಹಚ್ಚಬಹುದೇ' ಎಂದು ಕೇಳುವ ಶೋಚನೀಯ ಸ್ಥಿತಿಯಲ್ಲಿದ್ದೇವೆ ನಾವು.

ಕಿಡಿ ಎಂದರೆ ಮನಮುಟ್ಟುವ ಕಾವು ಎಂದು ಅರ್ಥವಾಗದೆ ತೊಗಲು ಮುಟ್ಟುವ ಬೆಂಕಿ ಎಂದು ಮಾತ್ರ ಅರ್ಥವಾಗುತ್ತದೆ. ಇದು ಅಂತರಂಗ ದಾರಿದ್ರ್ಯ. ತುಂಬಾ ನೆಗಡಿ ಹಿಡಿದವನಿಗೆ ಘ್ರಾಣೇಂದ್ರಿಯ ನಷ್ಟವಾಗಿರುವಂತೆ ನಮ್ಮ ಜನಕ್ಕೆ ರಸದೃಷ್ಟಿ ಮಂದವಾಗಿ ಹೋಗಿದೆ. ಅಂತಹವರಿಗೆ ಮಲ್ಲಿಗೆಯ ಹೂವು ಒಂದು ಬಿಳಿಯ ಸಾಮಗ್ರಿಯಾಗಿ ಕಾಣುತ್ತದೆಯೇ ಹೊರತು ಅವರಿಗೆ ಅದರಲ್ಲಿರುವ ಸೌರಭ, ಕೋಮಲತೆ, ಸೌಂದರ್ಯ ಗೋಚರಿಸುವುದಿಲ್ಲ. ಅಂತಹ ದರಿದ್ರ ಸ್ಥಿತಿಯಲ್ಲಿ ನಾವಿದ್ದೇವೆ ಇಂದು.

ಕೈಗೆ ಸಿಗುವ ಹೂವಿನಲ್ಲಿ ಕೈಗೆ ಸಿಗದ ಸುವಾಸನೆಯಿರುವಂತೆ, ಕ್ಯಾಮರಾಕ್ಕೆ ಸಿಗುವ ಮನುಷ್ಯನ ಆಕೃತಿಯಲ್ಲಿ ಅದರ ಕೈಗೆ ಸಿಗದ ಮನುಷ್ಯನ ಮನೋಬುದ್ಧಿಗಳು ಇರುವಂತೆ, ಭಾಷೆಗಳಲ್ಲಿ, ಚಿತ್ರಗಳಲ್ಲಿ, ಶಿಲ್ಪಗಳಲ್ಲಿ ವ್ಯಾಕರಣ-ನಿಘಂಟುಗಳಿಗೆ ಸಿಗುವ ಅರ್ಥಗಳಲ್ಲಿ ವ್ಯಾಕರಣ-ನಿಘಂಟುಗಳಿಂದ ಚೆನ್ನಾಗಿ ವಿವರಿಸಲಾಗದ ಭಾವವಿಶೇಷಗಳಿರುತ್ತವೆ; ಧ್ವನಿ-ಸೂಚಕಶಕ್ತಿಗಳಿರುತ್ತವೆ ಎಂಬುದನ್ನು ಅರಿಯುವವರೆಗೆ ಇಂತಹ ಅವಘಡಗಳು ಸಂಭವಿಸುತ್ತಲೇ ಇರುತ್ತವೆ.

ಪ್ರಸಕ್ತ

ರಮಾನಂದ ಶರ್ಮಾ

ಸಂಭ್ರಮ ಇಳಿಸಿದ ಖಾತೆ ಕ್ಯಾತೆ

ಪಕ್ಷ ಕಟ್ಟಿ, ಚುನಾವಣೆಯಲ್ಲಿ ಹೋರಾಡಿ ಅಧಿಕಾರ ಹಿಡಿಯುವದಕ್ಕಿಂತ ಸಚಿವ ಸಂಪುಟ ರಚನೆ, ಖಾತೆಗಳ ಹಂಚುವಿಕೆ ಕಷ್ಟದ ಕೆಲಸ ಮತ್ತು ಇದು ರಾಜಕಾರಣದ ತಂತ್ರ, ವರಸೆ ಮತ್ತು ಚಾಣಾಕ್ಷತನವನ್ನು ಅಗ್ನಿ ಪರೀಕ್ಷೆಗೆ ಒಳಪಡಿಸುತ್ತದೆ ಎಂಬ, ಮೂರು ಬಾರಿ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರ ಮಾತು ನೆನಪಿಗೆ ಬರುತ್ತಿದೆ. ಅಧಿಕಾರ ಹಸ್ತಾಂತರ ಸುಗಮವಾಗಿ ನಡೆದಾಗ ಇದು ಸುಸೂತ್ರ ಆಡಳಿತಕ್ಕೆ ಬುನಾದಿಯಾಗಬಹುದು, ಅಡೆ ತಡೆ ಇಲ್ಲದೇ ಸರಕಾರ ನಡೆಯಬಹುದು ಎಂದು ನಿಟ್ಟುಸಿರು ಹೊರಹೊಮ್ಮಿತ್ತು. ಆದರೆ, ಹೋದೆಯಾ ಪಿಶಾಚಿ ಎಂದರೆ ಬಂದೆಯಾ ಗವಾಕ್ಷಿಯಲ್ಲಿ ಎನ್ನುವಂತೆ ಈ ಅಡಚಣೆಗಳು ಸಂಪುಟ ರಚನೆ ಮತ್ತು ಖಾತೆಗಳ ಹಂಚುವಿಕೆಯಲ್ಲಿ ಭುಗಿಲೆದ್ದಿವೆ.

ಸಚಿವ ಸಂಪುಟ ರಚನೆ, ಮಂತ್ರಿಗಳ ಆಯ್ಕೆ ಮತ್ತು ಖಾತೆಗಳ ಹಂಚುವಿಕೆ ಮುಖ್ಯಮಂತ್ರಿಗಳ ಪರಮಾಧಿಕಾರ ಮತ್ತು ಅದು ಅವರ ವಿವೇಚನೆಗೆ ಬಿಟ್ಟದ್ದು ಎಂದು ಪ್ರತಿಯೊಬ್ಬ ಶಾಸಕ, ಸಂಸದ ಮತ್ತು ರಾಜಕಾರಣಿ ಅವಕಾಶ ದೊರಕಿದಾಗೆಲ್ಲಾ ಉರುಹೊಡೆದಂತೆ ಜಪಿಸುತ್ತಾರೆ. ಆದರೆ, ವಾಸ್ತವದಲ್ಲಿ ವಿವೇಚನೆ ಮತ್ತು ಪರಮಾಧಿಕಾರ ಎನ್ನುವುದು ಹೇಳಿಕೆಗೆ ಮಾತ್ರ ಸೀಮಿತವಾಗಿದ್ದು, ಎಲ್ಲವೂ ಹೈಕಮಾಂಡ್ (ಕಾಂಗ್ರೆಸ್), ವರಿಷ್ಠರು (ಭಾಜಪ) ಮತ್ತು ಪಾಲಿಟ್ ಬ್ಯುರೋ (ಎಡ ಪಕ್ಷಗಳು) ಗಳ ಪರಮಾಧಿಕಾರ ಮತ್ತು ಅವುಗಳ ವಿವೇಚನೆಗೆ ಬಿಟ್ಟದ್ದು. ಈ ಪಕ್ಷಗಳಲ್ಲಿ ಇವರ ಒಪ್ಪಿಗೆ ಇಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲುಗಾಡದು. ಪಕ್ಷದ ನಿರ್ದೇಶನಕ್ಕೆ ತಲೆಬಾಗದವರ ತಲೆದಂಡ ಮಲಾಜಿಲ್ಲದೆ ಆಗುತ್ತದೆ. ಸಿದ್ದರಾಮಯ್ಯ ಪಕ್ಷ ಹೇಳಿದ ತಕ್ಷಣ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿ ಪಕ್ಷದ ಶಿಸ್ತನ್ನು ಎತ್ತಿ ಹಿಡಿದಿದ್ದಾರೆ. ಮನಸ್ಸು ಮಾಡಿದ್ದರೆ ಅವರು ವಿಭಿನ್ನ ಮಾರ್ಗವನ್ನು ಹಿಡಿಯಬಹುದಿತ್ತು. ಆದರೆ, ಅವರು ತಾವೊಬ್ಬ ಪಕ್ಷದ ನಿಷ್ಠಾವಂತ ಸೇವಕ ಮತ್ತು ಶಿಸ್ತಿನ ಸಿಪಾಯಿ ಎನ್ನುವುದನ್ನು ತೋರಿಸಿ ಮೇಲ್ಪಂಕ್ತಿ ಹಾಕಿದ್ದಾರೆ. ಕಾರ್ಯಕರ್ತ, ಶಾಸಕ ಅಥವಾ ಸಂಸದರ ಅಹವಾಲು ಏನೇ ಇರಲಿ, ಎಷ್ಟೇ ಅರ್ಥಪೂರ್ಣವಾಗಿರಲಿ, ಹೈಕಮಾಂಡ್ ನಿಲುವು ಅಂತಿಮ.

ಸಚಿವ ಸಂಪುಟ ರಚನೆಯಲ್ಲಿ ಸಾಮಾನ್ಯವಾಗಿ ವಿದ್ಯಾರ್ಹತೆ, ಹಿನ್ನೆಲೆ, ವಯಸ್ಸು, ಮಂತ್ರಿಯಾಗುವ ಅರ್ಹತೆ, ಅನುಭವವನ್ನು ಪರಿಗಣಿಸಲಾಗುತ್ತದೆ. ಆದರೆ ನಮ್ಮಲ್ಲಿ ಮಂತ್ರಿಯಾಗಲು ಧರ್ಮ, ಜಾತಿ, ಉಪ ಜಾತಿ, ಪಂಗಡ, ಮುಂದುಳಿದವರು, ಹಿಂದುಳಿದವರು, ಸಾಮಾಜಿಕ ನ್ಯಾಯ, ಪಕ್ಷದಲ್ಲಿ ಹಳಬರು, ಹೊಸಬರು, ಪಕ್ಷ ನಿಷ್ಠರು, ಪಕ್ಷದ ಕಚೇರಿಯ ಕಸ ಗುಡಿಸಿದವರು, ಹೈಕಮಾಂಡ್ ಆಪ್ತರು, ಇಂಥವರ ಮಕ್ಕಳು, ಸಹೋದರರು, ಬಹುಕಾಲದಿಂದ ಮಂತ್ರಿಯಾಗಿ ಸೇವೆ ಸಲ್ಲಿಸಿ ಅನುಭವದ ಮೂಸೆ ಹೊತ್ತವರು, ಪಕ್ಷಕ್ಕೆ ಆರ್ಥಿಕ ಸಹಾಯ ನೀಡಿದವರು, ಆ ಪ್ರದೇಶದವರು, ಈ ಜಿಲ್ಲೆಯವರು, ಹೀಗೆ ಹಲವು ಹತ್ತು ಆಯಾಮಗಳಲ್ಲಿ ಸಮೀಕರಣವನ್ನು ಬಿಡಿಸಬೇಕಾಗುತ್ತದೆ. ದೇಶದಲ್ಲಿ ಯಾವ ಮುಖ್ಯಮಂತ್ರಿಯೂ ಈ ನಿಟ್ಟಿನಲ್ಲಿ ತನ್ನ ವಿವೇಚನೆ ಬಳಸಿದ ಉದಾಹರಣೆ ಇಲ್ಲ. ಅಂತೆಯೇ ಡಿಕೆಶಿ ಅಪವಾದವಾಗಲು ಸಾಧ್ಯವಿಲ್ಲ.

ದಶಕಗಳ ಹಿಂದೆ ಸಚಿವ ಸಂಪುಟದ ಗಾತ್ರದ ಬಗೆಗೆ ಗರಿಷ್ಠ ಮಿತಿ ಇರಲಿಲ್ಲ. ಬೇಕಾದವರನ್ನು ಸೇರಿಸಿಕೊಳ್ಳಲು ಆಹಾರ ಖಾತೆಯನ್ನು ವಿಭಜಿಸಿ ಹೆಸರು ಬೇಳೆಗೊಂದು, ತೊಗರಿ ಬೇಳೆಗೊಂದು ಮಂತ್ರಿಯನ್ನು ನೇಮಿಸುತ್ತಾರೆ ಎಂದು ಚೋ ರಾಮಸ್ವಾಮಿ ಲೇವಡಿ ಮಾಡುತ್ತಿದ್ದರು. ಸಚಿವ ಸಂಪುಟದ ಗಾತ್ರ ಸದನದ ಒಟ್ಟೂ ಸಂಖ್ಯೆಯ 15% ಮೀರಬಾರದೆನ್ನುವ ಕೆಂಗಲ್ ಹನುಮಂತಯ್ಯನವರ ಆಡಳಿತ ಸುಧಾರಣ ಸಮಿತಿಯ ವರದಿಯ ಅನುಷ್ಠಾನದ ನಂತರ ಇರುವುದೊಂದು ಹೃದಯ ಯಾರಿಗಂತ ಕೊಡಲಿ ಎನ್ನುವಂತೆ ಮುಖ್ಯಮಂತ್ರಿಗಳ ಕೈ ಕಟ್ಟಿದ್ದು, ಹಿಂದಿನಂತೆ ಬೇಕಾಬಿಟ್ಟಿ ಮಂತ್ರಿಗಳ ನೇಮಕಾತಿ ಮಾಡಲು ಸಾಧ್ಯವಾಗುತ್ತಿಲ್ಲ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:143

ಸಮಾಚಾರ ಸಣ್ಣದಲ್ಲ

ರು.661 ಕೋಟಿ ವಂಚನೆ: 8 ಕಡೆ ಸಿಬಿಐ ಶೋಧ

ದೆಹಲಿ: ಹರಿಯಾಣ ಸರಕಾರದ 8 ಇಲಾಖೆಗಳು ಮತ್ತು ಕೇಂದ್ರಾಡಳಿತ ಪ್ರದೇಶವಾದ ಚಂಡೀಗಢ ಆಡಳಿತಕ್ಕೆ ಸಂಬಂಧಿಸಿದ 2 ಇಲಾಖೆಗಳಲ್ಲಿನ ಅನುದಾನದ ಮೊತ್ತವಾದ 661 ಕೋಟಿ ರು.ಗಳ ವಹಿವಾಟಿನಲ್ಲಿ ವಂಚನೆ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ 'ಐಡಿಎಫ್‌ಸಿ ಫಸ್ಟ್ ಬ್ಯಾಂಕ್-ಎಯು ಫೈನಾನ್ಸ್ ಬ್ಯಾಂಕ್‌ಗೆ ಸಂಬಂಧಿಸಿದ ಚಂಡೀಗಢ, ಪಂಚಕುಲಾ ಮತ್ತು ದೆಹಲಿ ಎನ್‌ಸಿಆರ್ ಪ್ರದೇಶಗಳಲ್ಲಿನ 6 ಕಡೆ ಕೇಂದ್ರದ ತನಿಖಾ ದಳ(ಸಿಬಿಐ) ಶುಕ್ರವಾರ ಮತ್ತು ಶನಿವಾರ ಶೋಧ ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ಭಾನುವಾರ ತಿಳಿಸಿದ್ದಾರೆ. ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಮತ್ತು ಎಯು ಫೈನಾನ್ಸ್‌ನಲ್ಲಿನ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಆರೋಪದ ಹರಿಯಾಣ ಸರಕಾರದ ಹಿರಿಯ ಅಧಿಕಾರಿ ಮತ್ತು ನೊಯಿಡಾ ಮೂಲದ ವಿಪಂ ಕನ್ಸಲ್ಟೆನ್ಸಿ ಪ್ರೈ.ಲಿ. ಮತ್ತು ಅದರ ನಿರ್ದೇಶಕರ ಮನೆಗಳಲ್ಲಿ ಸಿಬಿಐ ಶೋಧ ನಡೆಸಿದೆ ಎಂದು ವರದಿಯಾಗಿದೆ.

ಅಮೆರಿಕ ಗುಂಡಿನ ದಾಳಿ: 12 ಮಂದಿ ಗಾಯಾಳು

ಟೊಲೆಡೊ: ಅಮೆರಿಕದ ಮಧ್ಯಪಶ್ಚಿಮ ಭಾಗದಲ್ಲಿರುವ ಓಹಿಯೊ ರಾಜ್ಯದ ಟೊಲೆಡೊ ನಗರದಲ್ಲಿ ಸಮುದಾಯ ಉತ್ಸವ ವಾರ್ಷಿಕ 'ಓಲ್ಡ್ ವೆಸ್ಟ್ ಎಂಡ್ ಫೆಸ್ಟಿವಲ್' ನಡೆದಿದ್ದಾಗ ಶನಿವಾರ ಸಂಜೆ 5.37ರ ವೇಳೆ ಸಮೀಪದಲ್ಲೇ ಇಬ್ಬರು ಆಗುಂತಕರಿಂದ ಹಠಾತ್ ಗುಂಡಿನ ದಾಳಿಯಾಗಿದೆ. ಪರಿಣಾಮ 12 ಮಂದಿ ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಟೊಲೆಡೊ ಪೊಲೀಸ್ ಇಲಾಖೆ ಉಪ ಪೊಲೀಸ್ ಮುಖ್ಯಸ್ಥ ಜೋ ಹೆಫರ್‌ನನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಇಬ್ಬರು ಬಂದೂಕುಧಾರಿಗಳಿಗಾಗಿ ಪೊಲೀಸರು ಶೋಧ ನಡೆಸಲಾರಂಭಿಸಿದ್ದಾರೆ. 'ವಾರ್ಷಿಕ 'ಓಲ್ಡ್ ವೆಸ್ಟ್ ಎಂಡ್ ಫೆಸ್ಟಿವಲ್' ಉತ್ಸವದಲ್ಲಿ 2 ದಿನ ಲೈವ್ ಮ್ಯೂಸಿಕ್ ಮತ್ತು ಐತಿಹಾಸಿಕ ಮನೆಗಳ ವೀಕ್ಷಣೆ ಪ್ರಮುಖ ಆಕರ್ಷಣೆಯಾಗಿರುತ್ತದೆ. ನೂರಾರು ಜನರು ಭಾಗಿಯಾಗಿದ್ದಾಗ ಸಮೀಪದಲ್ಲೇ ಇಬ್ಬರು ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಟೊಲೆಡೊ ಘಟನೆ ತೀವ್ರ ಕಳವಳಕ್ಕೆ ಕಾರಣವಾಗಿದೆ' ಎಂದು ಓಹಿಯೊ ಗವರ್ನರ್ ಮೈಕ್ ಡಿವೈನ್ ಪ್ರತಿಕ್ರಿಯಿಸಿದ್ದಾರೆ.

2 ಸಾವಿರ ಕೈದಿಗಳಿಗೆ ಕ್ಷಮೆ ನೀಡಿದ ಇರಾನ್

ಟೆಹರಾನ್: ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಮೊಜ್ತಬಾ ಖಮೇನಿ ಅವರು 2 ಸಾವಿರಕ್ಕೂ ಹೆಚ್ಚು ಕೈದಿಗಳನ್ನು ಕ್ಷಮಿಸಿದ್ದಾರೆ, ಕೆಲವರ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಿ ಪ್ರಮುಖ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಅಮೆರಿಕ ಮತ್ತು ಇಸ್ರೇಲ್ ಸೇನಾ ಸಂಘರ್ಷ ಮತ್ತು ಉದ್ವಿಗ್ನತೆಯ ಮಧ್ಯೆಯೇ ಈ ಮಹತ್ವದ ಕ್ರಮವನ್ನು ಇರಾನ್ ಸರಕಾರ ಕೈಗೊಂಡಿದೆ. ದೇಶದ ನ್ಯಾಯಾಂಗದ ಮುಖ್ಯಸ್ಥ ಘೋಲಮ್ ಹೊಸೇನ್ ಮೊಹ್ಸೇನಿ ಎಜಿ ಅವರ ಶಿಫಾರಸಿನ ಮೇರೆಗೆ ಖಮೇನಿ ಅವರು ಈ ಮಾನವೀಯ ನಿರ್ಧಾರ ಕೈಗೊಂಡಿದ್ದಾರೆ. ಆದರೆ, ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಅಪರಾಧಗಳಲ್ಲಿ ಶಿಕ್ಷೆಗೊಳಗಾಗಿರುವ ಕೈದಿಗಳು, ಬೇಹುಗಾರಿಕೆ ನಡೆಸಿದ್ದಕ್ಕೆ ಶಿಕ್ಷೆ ಅನುಭವಿಸುತ್ತಿರುವವರು, ಇರಾನ್ನ ಆಂತರಿಕ ಅಥವಾ ಬಾಹ್ಯ ಭದ್ರತೆಗೆ ವಿರುದ್ಧವಾಗಿ ವರ್ತಿಸುವವರು ಮತ್ತು ಸಾರ್ವಜನಿಕ ಭದ್ರತೆಗೆ ಅಪಾಯವನ್ನುಂಟು ಮಾಡಿದ ಅಪರಾಧಗಳಲ್ಲಿ ಶಿಕ್ಷೆಗೊಳಗಾದವರಿಗೆ ಕ್ಷಮಾದಾನ ನೀಡಲಾಗಿಲ್ಲ ಎಂದು ಇರಾನ್‌ನ ಸರಕಾರಿ ಸುದ್ದಿ ವಾಹಿನಿ 'ಪ್ರೆಸ್ ಟಿವಿ' ಪ್ರಸಾರ ಮಾಡಿದೆ.

ಟಿಎಂಸಿ ವರಿಷ್ಠರು ರಾಜೀನಾಮೆ ಕೇಳಿಲ್ಲ

ಕೋಲ್ಕತ್ತ: ಪಶ್ಚಿಮ ಬಂಗಾಳದ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅವರಾಗಲಿ, ಟಿಎಂಸಿ ಪಕ್ಷದ ಬೇರಾವುದೇ ವರಿಷ್ಠರಾಗಲೀ ರಾಜೀನಾಮೆ ನೀಡಲು ನನಗೆ ಸೂಚನೆ ನೀಡಿಲ್ಲ ಎಂದು ಬಹರಾಮ್‌ಪುರ ಲೋಕಸಭಾ ಕ್ಷೇತ್ರದ ಟಿಎಂಸಿ ಸದಸ್ಯ ಯೂಸುಫ್ ಪಠಾಣ್ ಹೇಳಿದ್ದಾರೆ. ನನಗೆ ರಾಜೀನಾಮೆ ನೀಡುವಂತೆ ಸೂಚಿಸಲಾಗಿದೆ ಎಂಬುದೆಲ್ಲ ಕೇವಲ ವದಂತಿ ಅಷ್ಟೇ. ಇತ್ತೀಚೆಗೆ ಮಮತಾ ಅವರ ಮನೆಯಲ್ಲಿ ನಡೆದ ಸಭೆಯಲ್ಲಿಯೂ ಅವರು ಈ ಬಗ್ಗೆ ಮಾತನಾಡಿಲ್ಲ ಎಂದು ಪಠಾಣ್ ಸ್ಪಷ್ಟಪಡಿಸಿದ್ದಾರೆ. ಪಕ್ಷದ ನಾಯಕರ ನಡುವೆ ಉತ್ತಮ ಸಂವಹನವಿದೆ. ಕಾರ್ಯಕರ್ತರು ವದಂತಿಗಳಿಗೆ ಕಿವಿಗೊಡಬಾರದು ಎಂದಿದ್ದಾರೆ. ಮಮತಾ ಬ್ಯಾನರ್ಜಿ ಪರವಾಗಿ ತಾವು ಯೂಸುಫ್ ಪಠಾಣ್‌ರನ್ನು ಸಂಪರ್ಕಿಸಿ ಸಂದೇಶ ತಲುಪಿಸಿದ್ದೆ ಎಂದು ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಲಿಖಿತ ಹೇಳಿಕೆ ನೀಡಿದ್ದಾರೆ ಎಂಬುದನ್ನು ಪಠಾಣ್ ತಳ್ಳಿಹಾಕಿದ್ದಾರೆ.

{ ಉದ್ಧವ್ ಠಾಕ್ರೆ }
ಶಿವಸೇನೆ(ಯುಬಿಟಿ) ಮುಖ್ಯಸ್ಥ

ನೀಟ್, ಸಿಬಿಎಸ್‌ಇ ಪರೀಕ್ಷೆಗಳಲ್ಲಿನ ಲೋಪಗಳಿಗಾಗಿ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ 'ಸಿಜೆಪಿ' ಯುವಜನರ ಕೂಗನ್ನು ಕೇಂದ್ರ ಸರಕಾರ ಆಲಿಸಬೇಕು, ಕಡೆಗಣಿಸಬಾರದು. ಯುವಕರು ದೇಶದ ಭವಿಷ್ಯ, ಅವರಿಗೆ ನ್ಯಾಯ ನಿರಾಕರಿಸುವುದು, ಜಿರಲೆ ಎಂದು ಕರೆಯುವುದು ಅನುಚಿತ.

ಲೋಕಸಭೆಯ 20 ಸದಸ್ಯರಿಂದ ವರಿಷ್ಠರ ವಿರುದ್ಧ ಬಂಡಾಯ | ರಾಜ್ಯಸಭೆಯಲ್ಲಿನ 13 ಸದಸ್ಯರಲ್ಲೂ ಭಿನ್ನಮತದ ಹೂಂಕಾರ
ವಿ.ಸಭೆ ಪ್ರತಿಪಕ್ಷ ನಾಯಕ ಸ್ಥಾನಕ್ಕೆ ಮಮತಾ ಆಯ್ಕೆಗೆ ವಿರೋಧ | ವಿಧಾನಸಭೆಯಲ್ಲಿ ಟಿಎಂಸಿಯ 59 ಶಾಸಕರ ಪ್ರತ್ಯೇಕ ಬಣ ಸೃಷ್ಟಿ

ಸಂಸತ್ತಿನಲ್ಲೂ ಇಬ್ಭಾಗದತ್ತ ತೃಣಮೂಲ ಕಾಂಗ್ರೆಸ್

ದೆಹಲಿ/ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ತೃಣಮೂಲ ಕಾಂಗ್ರೆಸ್‌ನ 59 ಶಾಸಕರು ತಮ್ಮದೇ ಪ್ರತ್ಯೇಕ ಬಣ ಸೃಷ್ಟಿಸಿಕೊಂಡಿದ್ದು, ಪಕ್ಷದ ವರಿಷ್ಠೆ ಮಮತಾ ಬ್ಯಾನರ್ಜಿ ವಿರುದ್ಧವೇ ಬಂಡಾಯದ ಬಾವುಟ ಹಾರಿಸಿದ್ದಾರೆ. ಇದರಿಂದ ಪ್ರೇರಣೆಗೊಂಡವರಂತೆ ಸಂಸತ್ತಿನಲ್ಲಿಯೂ ಟಿಎಂಸಿಯ ಸಂಸದರು ತಮ್ಮದೇ ಪ್ರತ್ಯೇಕ ಬಣ ಸೃಷ್ಟಿಸಿಕೊಳ್ಳಲು ಮುಂದಾಗಿದ್ದಾರೆ. ಇದಕ್ಕೆ ಆಡಳಿತಾರೂಢ ಪಕ್ಷ ಬಿಜೆಪಿ ಕೂಡಾ ಬೆಂಬಲವಾಗಿದ್ದುಕೊಂಡು ತೆರೆಮರೆಯಲ್ಲೇ ಪಕ್ಕವಾದ್ಯ ನುಡಿಸುತ್ತಿದೆ.

ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದಲ್ಲಿನ ಭಿನ್ನಾಭಿಪ್ರಾಯ, ಆಂತರಿಕ ಸಂಘರ್ಷ, ನಾಯಕರ ನಡುವಿನ ಗೊಂದಲ, ಪಕ್ಷತ್ಯಾಗ ಪ್ರಕ್ರಿಯೆ ಇನ್ನೂ ಮುಂದುವರಿದೇ ಇದೆ. ಚುನಾವಣೆಯಲ್ಲಿನ ಹೀನಾಯ ಸೋಲಿನ ಬೆನ್ನಲ್ಲೇ ಪಕ್ಷದೊಳಗೆ ಶುರುವಾದ ಅಸಮಾಧಾನಕ್ಕೆ ಕೊನೆಯೇ ಇಲ್ಲದಂತಾಗಿದೆ. ಪಕ್ಷದ ವರಿಷ್ಠದ್ವಯರ ವಿರುದ್ಧ ಹೆಚ್ಚಿನ ಸಂಖ್ಯೆಯ ಶಾಸಕರು, ಸಂಸದರು ತಿರುಗಿಬಿದ್ದಿದ್ದಾರೆ. ಖುದ್ದು ಮಮತಾ ಬ್ಯಾನರ್ಜಿ ಅವರು ತಮ್ಮ ನಿವಾಸದಲ್ಲಿ ಕರೆದಿದ್ದ ಎರಡು ಸಭೆಗಳೂ ಹೆಚ್ಚಿನ ಸಂಖ್ಯೆಯ ಶಾಸಕ-ಸಂಸದರ ಗೈರು ಹಾಜರಿಯಿಂದಾಗಿ ಬಣಗುಟ್ಟಿದ್ದವು.

ತೃಣಮೂಲ ಕಾಂಗ್ರೆಸ್ ಪಕ್ಷದೊಳಗಿನ ಅಸಮಾಧಾನ, ಸಿಟ್ಟು ಈಗಲೂ ಮುಂದುವರಿದಿದೆ. ಕೆಲವರಿಗೆ ಮಮತಾ ಬ್ಯಾನರ್ಜಿ ಅವರ ಸರ್ವಾಧಿಕಾರಿ ಧೋರಣೆ ಬಗ್ಗೆ ವಿರೋಧವಿದ್ದರೆ, ಇನ್ನು ಕೆಲವರಿಗೆ ಮಮತಾ ಸೋದರಳಿಯ ಅಭಿಷೇಕ್ ಬ್ಯಾನರ್ಜಿಯ ದಬ್ಬಾಳಿಕೆ-ಹುಂಬತನದ ಬಗೆಗೆ ಸಿಟ್ಟಿದೆ.

ಪಕ್ಷದ ಪ್ರಥಮ ನಾಯಕಿ ಮಮತಾ ದೀದಿ, ಕೆಲವರಿಗಷ್ಟೇ ಆದ್ಯತೆ ನೀಡುತ್ತಾರೆ. ಎಲ್ಲಾ ಅಧಿಕಾರ, ಅನುಕೂಲವನ್ನೂ ಸೋದರಳಿಯನಿಗೇ ಕೊಡುತ್ತಾರೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಯೂ ಅಭಿಷೇಕ್‌ಗೆ, ಲೋಕಸಭೆಯಲ್ಲಿ ಟಿಎಂಸಿ ಪಕ್ಷದ ಶಾಸಕಾಂಗ ನಾಯಕ ಸ್ಥಾನವೂ ಅಭಿಷೇಕ್‌ಗೆ. ಇದು ಮಮತಾ ಬ್ಯಾನರ್ಜಿ ಕುಟುಂಬದ ವಂಶಪಾರಂಪರ್ಯ ಆಡಳಿತ ಎಂಬ ಅಸಮಾಧಾನ ಶಾಸಕ-ಸಂಸದರಲ್ಲಿ ಮಡು ಗಟ್ಟಿದೆ. ಅದೀಗ ಹಂತ ಹಂತವಾಗಿ ಹೊರಬೀಳುತ್ತಿದೆ.

'ಪಕ್ಷದಲ್ಲೇನಾಗುತ್ತಿದೆ ನೋಡೊ' ಎನ್ನುವಂತಿರುವ ಮಮತಾ ಬ್ಯಾನರ್ಜಿ, ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಚಿತ್ರ



ಬಣ್ಣ ಕಳೆದುಕೊಳ್ಳುತ್ತಿರುವ ತೃಣಮೂಲ ಕಾಂಗ್ರೆಸ್ ಪಕ್ಷದ ಚಿಹ್ನೆ,

ಅಭಿಷೇಕ್ ಪದಚ್ಯುತಿ: ಇದೇ ಬಗೆಯಲ್ಲಿ ಅಸಮಾಧಾನ ಹೆಚ್ಚಿದ್ದ ರಿಂದಾಗಿ 18ನೇ ಲೋಕಸಭೆ ಯಲ್ಲಿರುವ ಟಿಎಂಸಿಯ ಒಟ್ಟು 29 ಸದಸ್ಯರಲ್ಲಿ ಮೂರನೇ ಎರಡರಷ್ಟು ಸಂಖ್ಯೆಯ(20) ಸಂಸದರು ಮಮತಾ ಬ್ಯಾನರ್ಜಿ ಮತ್ತು ಅಭಿಷೇಕ್ ಬ್ಯಾನರ್ಜಿ ವಿರುದ್ಧ ತಿರುಗಿ ಬಿದ್ದಿದ್ದಾರೆ. ಅಭಿಷೇಕ್ ಬ್ಯಾನರ್ಜಿಯನ್ನು ಲೋಕ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕತ್ವದಿಂದ ಕೆಳಕ್ಕಿಳಿಸಿ ಬೇರೊಬ್ಬ ಹಿರಿಯ ಸಂಸದರನ್ನೇ ಆ ಸ್ಥಾನಕ್ಕೆ ಆಯ್ಕೆ ಮಾಡಬೇಕು ಎಂಬುದು ಬಂಡಾಯ ಸಂಸದರ ಆಲೋಚನೆಯಾಗಿದೆ. ಅದೇ ನಿಟ್ಟಿನಲ್ಲಿ 20 ಸಂಸದರ ತಂಡ ಮುಂದುವರಿದಿದೆ. ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕನಾಗಿ ಶಾಸಕ ಋತುಬ್ರತಾ ಬ್ಯಾನರ್ಜಿ ಅವರನ್ನು ಟಿಎಂಸಿಯ 59 ಶಾಸಕರು ಬೆಂಬಲಿಸಿದ ಕಾರಣ ಸ್ಪೀಕರ್ ಅವರು ಪಕ್ಷದ ವರಿಷ್ಠೆ ಮಮತಾ ಬ್ಯಾನರ್ಜಿ ಅವರು ತಮಗೆ ಕಳುಹಿಸಿಕೊಟ್ಟಿದ್ದ ಪತ್ರವನ್ನು ಪಕ್ಕಕ್ಕಿರಿಸಿ, ಋತುಬ್ರತಾ ಅವರನ್ನೇ ವಿಧಾನಸಭೆಯಲ್ಲಿನ ಅಧಿಕೃತ ಪ್ರತಿಪಕ್ಷ ನಾಯಕ ಎಂದು ಗುರುತಿಸಿ ಆದೇಶ ಹೊರಡಿಸಿದ್ದಾರೆ.

ರಾಜ್ಯ ವಿಧಾನಸಭೆಯಲ್ಲಿ ನಡೆದ ಮಾದರಿಯಲ್ಲಿ ಲೋಕಸಭೆಯಲ್ಲಿರುವ ಟಿಎಂಸಿಯ 20 ಸಂಸದರು ಪಕ್ಷದ ವರಿಷ್ಠರ ವಿರುದ್ಧವೇ ಬಂಡಾಯವೆದ್ದಿದ್ದು, ತಮ್ಮದೇ ಪ್ರತ್ಯೇಕ ಬಣವನ್ನು ರೂಪಿಸಿಕೊಳ್ಳಲು ಮುಂದಾಗಿದ್ದಾರೆ.

ತೃಣಮೂಲ ಸದಸ್ಯ ಬಲ

ರಾಜ್ಯಸಭೆ	13
ಲೋಕಸಭೆ	28

4 ದಶಕದ ಜತೆಗಾತಿ ಕಾಕೋಳಿ ಆಕ್ರೋಶ

ಪಶ್ಚಿಮ ಬಂಗಾಳದ ಬರಾಸಾತ್ ಲೋಕಸಭಾ ಕ್ಷೇತ್ರದಿಂದ ಸತತ ನಾಲ್ಕು ಬಾರಿಯಿಂದ ಗೆಲ್ಲುತ್ತಾ ಬಂದಿರುವ ಹಿರಿಯ ನಾಯಕಿ, 64 ವರ್ಷದ ಕಾಕೋಳಿ ಘೋಷ್ ದಸ್ತಿದಾರ್ ಅವರು, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಪೋಸ್ಟ್ 'ಟಿಎಂಸಿ ಸಂಸದರ ಬಣ' ಸೃಷ್ಟಿಯ ಬಗ್ಗೆ ಸುಳಿವು ನೀಡಿದೆ. 'ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧದ ಟಿಎಂಸಿಯ ಹೀನಾಯ ಸೋಲಿಗೆ ಪಕ್ಷದ ವರಿಷ್ಠೆ ಮಮತಾ ಬ್ಯಾನರ್ಜಿ ಅವರ ಕೆಟ್ಟ ಆಡಳಿತ ನೀತಿಗಳೇ ಕಾರಣ' ಎಂದು ಕಿಡಿಕಾರಿದ್ದಾರೆ. ಕಾಕೋಳಿ ಅವರು 3 ದಶಕಗಳ ಹಿಂದೆ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸುವುದಕ್ಕೂ ಮೊದಲಿನಿಂದಲೇ ಮಮತಾ ಬ್ಯಾನರ್ಜಿ ಅವರ ಆಪ್ತೆಯಾಗಿದ್ದರು. ಅದೇ ಕಾರಣವಾಗಿ ಕಾಕೋಳಿ ಘೋಷ್ ಅವರನ್ನು ಲೋಕಸಭೆಯಲ್ಲಿ ಪಕ್ಷದ ಚೀಫ್ ವಿಪ್(ಮುಖ್ಯ ಸಚೇತಕಿ) ಆಗಿ ನೇಮಿಸಲಾಗಿತ್ತು. ಇತ್ತೀಚೆಗೆ ಅವರನ್ನು ಆ ಹುದ್ದೆಯಿಂದ ಬದಲಾಯಿಸಲಾಗಿದೆ. ತಮ್ಮನ್ನು ಚೀಫ್ ವಿಪ್ ಹುದ್ದೆಯಿಂದ ಬದಲಿಸಿರುವುದಕ್ಕೂ ಕಿಡಿಕಾರಿರುವ ಸಂಸದೆ ಕಾಕೋಳಿ ಘೋಷ್, 'ನಮ್ಮದು ರಾಜಕೀಯ ಹಿನ್ನೆಲೆಯ ಪ್ರತಿಷ್ಠಿತ ಕುಟುಂಬ, ನಾನು ಸತತ 4 ಅವಧಿಗೆ ಸಂಸದೆ. ಕಳೆದ 4 ದಶಕಗಳಿಂದಲೂ ಮಮತಾಗೆ ಬೆಂಬಲವಾಗಿದ್ದೆ. ಇಂಥ ಪಕ್ಷ ನಿಷ್ಠೆಗೆ ಚೀಫ್ ವಿಪ್ ಸ್ಥಾನ ಕಿತ್ತುಕೊಂಡು ಮಮತಾ ಒಳ್ಳೆಯ ಬಹುಮಾನವನ್ನೇ ನೀಡಿದ್ದಾರೆ' ಎಂದು ಅಸಮಾಧಾನ ಹೊರಹಾಕಿದ್ದಾರೆ.

ಅಲ್ಪಸಂಖ್ಯಾತ ವಿಭಾಗ ಕಾರ್ಯದರ್ಶಿ ರಾಜೀನಾಮೆ

ಟಿಎಂಸಿ ಅಲ್ಪಸಂಖ್ಯಾತ ಕೋಷ್ಠಕದ ಕಾರ್ಯದರ್ಶಿ ಅಜಮಲ್ ಸಿದ್ದಿಖಿ ಭಾನುವಾರ ರಾಜೀನಾಮೆ ನೀಡಿದ್ದಾರೆ. ಇದು ಮಮತಾ ಬ್ಯಾನರ್ಜಿ ನಾಯಕತ್ವಕ್ಕೆ ಮತ್ತೊಂದು ಪೆಟ್ಟು ನೀಡಿದೆ. ಪಕ್ಷದೊಳಗೆ ಸದ್ಯ ನಡೆಯುತ್ತಿರುವ ಗೊಂದಲ, ಭಿನ್ನಮತ ಚಟುವಟಿಕೆ, ಶಾಸಕರ ಬಂಡಾಯ ಮೊದಲಾದವನ್ನು ನೋಡಿ ನಾನು ಹತಾಶನಾಗಿದ್ದೇನೆ. ಅದಲ್ಲದೇ, ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಲೋಕಸಭೆಯಲ್ಲಿ ಪಕ್ಷದ ನಾಯಕ ಅಭಿಷೇಕ್ ಬ್ಯಾನರ್ಜಿಯ ಸರ್ವಾಧಿಕಾರಿ ವರ್ತನೆಯಿಂದಲೂ ಬೇಸರಗೊಂಡಿದ್ದೇನೆ. ಹಾಗಾಗಿಯೇ ಅಲ್ಪಸಂಖ್ಯಾತ ವಿಭಾಗದ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿದ್ದೇನೆ ಎಂದು ಹೇಳಿದ್ದಾರೆ.

ರಾಜೌರಿಯ ಬಳಿ ಅರಣ್ಯದಲ್ಲಿ ಕಾರ್ಯಾಚರಣೆ | ಮೇ 23ರಂದು ಆರಂಭವಾದ ಕಾರ್ಯಾಚರಣೆಗೀಗ ಭರ್ತಿ 15ದಿನ

ಆಪರೇಷನ್ ಶೇರುವಾಲಿ: ಸೇನೆಯ ಲೆಫ್ಟಿನೆಂಟ್ ಬೀರೇಶ್ವರ್‌ಕಂದಕಕ್ಕೆ-ಸಾವು

ಶ್ರೀನಗರ: ಭಾರತೀಯ ಸೇನೆಯ ಲೆಫ್ಟಿನೆಂಟ್ ಬೀರೇಶ್ವರ್ ಗೋಸ್ವಾಮಿ ಆಪರೇಷನ್ ಶೇರಾವಾಲಿಯಲ್ಲಿ ಭಾಗಿಯಾಗಿದ್ದು, ಪಾಕ್ ಮೂಲದ ಉಗ್ರರಿಗಾಗಿ ಡೋರಿಮಲ್ ಅರಣ್ಯದೊಳಗೆ ಕಡಿದಾದ ಬಂಡೆಗಳು ಹಾಗೂ ದುರ್ಗಮ ಪರ್ವತಗಳ ನಡುವೆ ಶೋಧ ಕಾರ್ಯಾಚರಣೆ ನಡೆಸಿದ್ದಾಗ ಶನಿವಾರ ಸಂಜೆ ವೇಳೆ ಕಾಲು ಜಾರಿ 30 ಮೀ. ಆಳದ ಕಂದಕಕ್ಕೆ ಬಿದ್ದಿದ್ದಾರೆ. ಗಂಭೀರವಾಗಿ ಗಾಯಗೊಂಡು ಬಹಳ ರಕ್ತಸ್ರಾವವಾಗಿದ್ದರಿಂದ ಪ್ರಜ್ಞಾಹೀನರಾಗಿದ್ದಾರೆ. ತಕ್ಷಣವೇ ಜತೆಗಾಗ ಸೈನಿಕರು ತ್ವರಿತಗತಿಯಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಿ ಬೀರೇಶ್ವರ್ ಅವರನ್ನು ಕಂದಕದಿಂದ ಮೇಲಕ್ಕೆತ್ತಿದ್ದಾರೆ. ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಆದರೆ, ಗಂಭೀರ ಸ್ವರೂಪದ ಗಾಯಗಳಾಗಿದ್ದರಿಂದ ಚಿಕಿತ್ಸೆ ಫಲಕಾರಿಯಾಗಿಲ್ಲ. ಲೆ.ಬೀರೇಶ್ವರ್ ಕೊನೆಯುಸಿರೆಳೆದಿದ್ದಾರೆ.

ಆಪರೇಷನ್ ಶೇರಾವಾಲಿ: ಪಾಕಿಸ್ತಾನದಿಂದ ನುಸುಳಿಕೊಂಡು ಬಂದಿರುವ ಮೂವರು ಉಗ್ರರು ರಾಜೌರಿ ಜಿಲ್ಲೆಯ ಮಾಂಜಾಕೋಟ್ ಸೆಕ್ಟರ್‌ನ ಗಾಂಭಿ ಮುಘ್ಲನ್ ಪ್ರದೇಶ ಸಮೀಪದ ದೋರಿ ಮಲ್ ಅರಣ್ಯ ವ್ಯಾಪ್ತಿಯಲ್ಲಿ ಅಡಗಿಕೊಂಡಿದ್ದು, ಅವರಿಗಾಗಿ ಭಾರತೀಯ ಸೇನೆಯ ನೈಟ್ ಕಾರ್ಪ್ಸ್ ತಂಡ, ಕೇಂದ್ರದ ಪೊಲೀಸ್ ಮೀಸಲು ಪಡೆ(ಸಿಆರ್‌ಪಿಎಫ್) ಮತ್ತು ಜಮ್ಮು-ಕಾಶ್ಮೀರ ಪೊಲೀಸ್ ವಿಶೇಷ ತಂಡಗಳು ಜಂಟಿಯಾಗಿ ಶೋಧ ನಡೆಸುತ್ತಿದ್ದು, ಇನ್ನೂ ಉಗ್ರರು ಕಾಣಲು ಸಿಕ್ಕಿಲ್ಲ. ಆಪರೇಷನ್ ಶೇರಾವಾಲಿ (ದುರ್ಗಾಮಾತೆ) ಹೆಸರಿನಲ್ಲಿ ಮೇ 23ರಂದು ಆರಂಭಗೊಂಡ ಈ ಸುದೀರ್ಘ ಅವಧಿಯ ಜಂಟಿ ಭದ್ರತಾ ಪಡೆ ಕಾರ್ಯಾಚರಣೆ ಭಾನುವಾರ 15ನೇ ದಿನಕ್ಕೆ ಕಾಲಿಟ್ಟಿದೆ. ದಟ್ಟ ಅರಣ್ಯದೊಳಗೆ ಅಡಗಿರುವ ಉಗ್ರರ ಶೋಧಕ್ಕಾಗಿ ಡ್ರೋನ್‌ಗಳು, ಹೆಲಿಕಾಪ್ಟರ್, ಶ್ವಾನದಳಗಳನ್ನೂ ಬಳಸಿಕೊಳ್ಳಲಾಗಿದೆ.

ಟಿಎಂಸಿ ಶಾಸಕ ಮದನ್ ಮಿತ್ರಗೆ ಮೊಟ್ಟೆ ಏಟು

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಸತತ 15 ವರ್ಷ ಆಡಳಿತ ನಡೆಸಿದ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ನಾಯಕರ ವಿರುದ್ಧ ವಂಗನಾಡಿನ ಜನರಲ್ಲಿ ಮಡುಗಟ್ಟಿದ್ದ ಆಕ್ರೋಶ ಈಗ ಒಂದೊಂದಾಗಿ ಹೊರಬೀಳುತ್ತಿದೆ. ಸಂಸದ ಅಭಿಷೇಕ್ ಬ್ಯಾನರ್ಜಿ ಬಳಿಕ ಈಗ ಟಿಎಂಸಿಯ ಹಿರಿಯ ಶಾಸಕ ಮದನ್ ಮಿತ್ರ ಅವರ ವಾಹನದ ಮೇಲೆ ಕಮರ್ಹಾತಿಯ ಅರಿಯದಹ ಪ್ರದೇಶದಲ್ಲಿ ಸ್ಥಳೀಯರು ಶನಿವಾರ ರಾತ್ರಿ ಕೋಳಿಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ಥಳೀಯ ಆಟೋರಿಕ್ಷಾ ಮತ್ತು ಇ-ರಿಕ್ಷಾ ಚಾಲಕರು ವಾರ್ಡ್ ಸಂಖ್ಯೆ 14ರ ಕೌನ್ಸಿಲರ್ ಕಚೇರಿ ಮುಂದೆ ಜಮಾಯಿಸಿದ್ದು, ತಮ್ಮಿಂದ ಕಳೆದ ಹಲವು ವರ್ಷಗಳಿಂದ ಬಲವಂತವಾಗಿ ವಸೂಲಿ ಮಾಡಿದ್ದ ಕಟ್ ಮನಿ(ಅಕ್ರಮ ಕಮಿಷನ್ ಹಣ)ಯನ್ನು ವಾಪಸ್ ಮಾಡುವಂತೆ ಒತ್ತಾಯಿಸುತ್ತಿದ್ದರು. ಇದೇ ವೇಳೆ ಸ್ಥಳಕ್ಕೆ ಬಂದ ಶಾಸಕ ಮದನ್ ಮಿತ್ರ ಅವರ ಕಾರಿನ ಮೇಲೆಯೂ ಕೋಳಿಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದರು. ಶಾಸಕರ ಕಾರಿನ ಚಾಲಕನ ಮೇಲೂ ಹಲ್ಲೆ ನಡೆಸಿದರು ಎಂದು ವರದಿಯಾಗಿದೆ. ಕಳೆದ ವಾರ ಸೋನಂಪುರದಲ್ಲಿ ಟಿಎಂಸಿ ಪ್ರಧಾನ ಕಾರ್ಯದರ್ಶಿ, ಸಂಸದ ಅಭಿಷೇಕ್ ಬ್ಯಾನರ್ಜಿಗೂ ಸ್ಥಳೀಯರು ಕೋಳಿಮೊಟ್ಟೆ, ಚಪ್ಪಲಿ, ಕಲ್ಲುಗಳನ್ನು ಎಸೆದು ಹಲ್ಲೆ ನಡೆಸಿದ್ದರು.

ಸಹಾರಾ ಮರುಭೂಮಿ: ಬಾಯಾರಿ 49 ಮರಣ

ನೈಜರ್: ಆಫ್ರಿಕಾ ಖಂಡದ ಪಶ್ಚಿಮ ಭಾಗದಲ್ಲಿನ ದೇಶ ನೈಜರ್‌ನ ಸಹಾರಾ ಮರುಭೂಮಿ ಮಾರ್ಗವಾಗಿ ಈದ್ ಅಲ್-ಅಧಾ ಆಚರಿಸಲು ಮನೆಗೆ ಮರಳುತ್ತಿದ್ದ 49 ಜನರಿದ್ದ ವಾಹನ ಮರುಭೂಮಿ ಮಧ್ಯೆಯೇ ಕೆಟ್ಟು ನಿಂತಿದ್ದರಿಂದ ವಾಹನದಲ್ಲಿದ್ದವರೆಲ್ಲರೂ ಬಾಯಾರಿ ಬಳಲಿ ದೇಹದಲ್ಲಿನ ನೀರಿನಂಶ ಆವಿಯಾಗಿ ನರಳಿ ಸಾವನ್ನಪ್ಪಿದ್ದಾರೆ. ಸುಡುವ ಬಿಸಿಲು, ಶಾಖದ ನಡುವೆ ಮರುಭೂಮಿ ಮಧ್ಯದಲ್ಲೇ ವಾಹನ ಕೆಟ್ಟು ನಿಂತಿದ್ದು 49 ಪ್ರಯಾಣಿಕರು ಮತ್ತು ಚಾಲಕರಿಗೆ ಮಾರಣಾಂತಿಕವಾಗಿದೆ.

ಮಾಲಿಯಲ್ಲಿ ಉದ್ಯೋಗದಲ್ಲಿದ್ದ ಪುರುಷರು ತಮ್ಮ ಕುಟುಂಬದವರೊಂದಿಗೆ ಈದ್ ಹಬ್ಬ ಆಚರಿಸಲು ನೈಜರ್‌ಗೆ ಹಿಂತಿರುಗುತ್ತಿದ್ದಾಗ ಅವರು ಪ್ರಯಾಣಿಸುತ್ತಿದ್ದ ಟ್ರಕ್ ಅಸ್ಮಾಕಾದಿಂದ 80 ಕಿ.ಮೀ. ದೂರದಲ್ಲಿನ ಜನ ಸಂಚಾರವಿಲ್ಲದ ಸ್ಥಳದಲ್ಲಿ ಕೆಟ್ಟು ನಿಂತಿತು. ಚಾಲಕ, ಆತನ ಸಹಾಯಕರು ಮತ್ತು ಪ್ರಯಾಣಿಕರು ಟ್ರಕ್ ದುರಸ್ತಿ ಮಾಡಲು ಯತ್ನಿಸಿ ವಿಫಲರಾದರು. ಅವರೆಲ್ಲರ ಬಳಿಯಿದ್ದ ನೀರು ಕೆಲವೇ ಸಮಯದಲ್ಲಿ ಖಾಲಿಯಾಯಿತು. ಪ್ರಯಾಣಿಕರು-ಚಾಲಕ ವರ್ಗದವರು ಸುಡುವ ಬಿಸಿಲು-ತೀವ್ರ ತಾಪಮಾನದಲ್ಲಿ ಸಿಲುಕಿ ಒಬ್ಬೊಬ್ಬರಾಗಿ ಸಾವನ್ನಪ್ಪಿದ್ದಾರೆ ಎಂದು ನೈಜರ್ನ ಅಗಾಡೆಜ್ ಪ್ರಾಂತ್ಯದ ಅಧಿಕಾರಿಗಳು ಹೇಳಿದ್ದಾರೆ. ಸುಡುವ ಬಿಸಿಲಿನಲ್ಲಿಯೇ 50 ಕಿ.ಮೀ. ನಡೆದು ಸಾಗಿದ್ದಕ್ಕೆ ಇಬ್ಬರು ಮಾತ್ರ ಪವಾಡಸದೃಶ ರೀತಿ ಜೀವಂತ ಪಾರಾಗಿದ್ದಾರೆ. ಮೊದಲು ನೀರಿನ ಮೂಲ ಹುಡುಕಿ ಬಾಯಾರಿಸಿಕೊಂಡು, ನೀರು ಸಂಗ್ರಹಿಸಿಕೊಂಡು ಅಸ್ಸಾಮಕಾ ಪಟ್ಟಣವನ್ನು ತಲುಪಿ ಘಟನೆ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದ್ದಾರೆ. ನಂತರ, ರಕ್ಷಣಾ ಕಾರ್ಯಕ್ಕೆ ತೆರಳಿದ್ದವರೇ ಮರುಳುಗಾಡಿ ನಲ್ಲಿಯೇ 49 ದೇಹಗಳನ್ನು ಸಮಾಧಿ ಮಾಡಿದರು.

ದುಷ್ಕರ್ಮಿ ಗುಂಡೇಟಿಗೆ ಭಾರತೀಯ ಬಲಿ

ನ್ಯೂಯಾರ್ಕ್/ಹೈದರಾಬಾದ್: ಅಮೆರಿಕದ ಫಿಲಡೆಲ್ಫಿಯಾದಲ್ಲಿ ಗ್ರಾಹಕರ ಕೋರಿಕೆ ಮೇರೆಗೆ ಪಿಜ್ಜಾ ವಿತರಿಸಲು ಹೋಗಿದ್ದ ಭಾರತ ಮೂಲದ 28 ವರ್ಷದ ಯುವಕ ಅನ್ಮೊಲ್ ಕುಂಚ ಎಂಬಾತನನ್ನು ದುಷ್ಕರ್ಮಿಗಳಿಬ್ಬರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ವ್ಯಾಸಂಗದ ರಜೆ ದಿನಗಳಲ್ಲಿ, ವಾರಾಂತ್ಯದಲ್ಲಿ ಪಿಜ್ಜಾ ಡೆಲಿವರಿ ಕೆಲಸವನ್ನು ಅರೆಕಾಲಿಕವಾಗಿ ಮಾಡುತ್ತಿದ್ದ ತೆಲಂಗಾಣ ಮೂಲದ ಅನ್ಮೊಲ್ ಕುಂಚ ಹತನಾದ ಯುವಕ.



ಜನವಸತಿ ಪ್ರದೇಶದಿಂದ ದೂರವಿದ್ದ ನಿರ್ಜನ ಸ್ಥಳಕ್ಕೆ ಪಿಜ್ಜಾ ತಲುಪಿಸುವಂತೆ ಶನಿವಾರ ರಾತ್ರಿ ಕೋರಿಕೆ ಬಂದಿತ್ತು. ಆ ಸ್ಥಳಕ್ಕೆ ತೆರಳಿದಾಗ ಅನ್ಮೊಲ್ ತಲೆಗೆ ಗುರಿಯಿಟ್ಟು ದುಷ್ಕರ್ಮಿಗಳಿಬ್ಬರು ಹಲವು ಬಾರಿ ಗುಂಡು ಹಾರಿಸಿದ್ದಾರೆ. ಅನ್ಮೊಲ್ ಪರ್ಸ್, ಮೊಬೈಲ್ ಮತ್ತಿತರ ವಸ್ತುಗಳೇನೂ ಕಳುವಾಗಿಲ್ಲ. ಹಾಗಾಗಿ ಹತ್ಯೆ ಉದ್ದೇಶದಿಂದಲೇ ನಡೆದಿರುವ ಪೂರ್ವಯೋಜಿತ ಕೃತ್ಯ ಎಂದು ಪೊಲೀಸರು ಶಂಕಿಸಿದ್ದಾರೆ.

ಅನ್ಮೊಲ್ ಬಹಳ ಉತ್ತಮ ವ್ಯಕ್ತಿ. ವ್ಯಾಸಂಗಕ್ಕಾಗಿ 4 ವರ್ಷಗಳಿಂದ ಅಮೆರಿಕದಲ್ಲಿದ್ದ. ಈ ಹಿಂದೆಯೂ ಆತನಿಂದ ಮೊಬೈಲ್, ಚಿನ್ನದಸರ ಹಾಗೂ ಹಣವನ್ನು ದುಷ್ಕರ್ಮಿಗಳು ಕಸಿದುಕೊಂಡಿದ್ದರು. ಈ ಬಾರಿ ಜೀವವನ್ನೇ ಕಸಿದಿದ್ದಾರೆ. ಘಟನೆ ನಡೆದಾಗ ಬ್ಯಾಕ್‌ಪ್ಯಾಕ್ ಧರಿಸಿದ್ದ ಮುಸುಕುಧಾರಿ ವ್ಯಕ್ತಿಗಳಿಬ್ಬರು ಆ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದರು. ಸೋದರನನ್ನು ಕೊಲ್ಲುವ ಉದ್ದೇಶದಿಂದಲೇ ಈ ನಕಲಿ ಪಿಜ್ಜಾ ಆರ್ಡರ್ ಮಾಡಲಾಗಿದೆ ಎಂದು ಮೃತನ ಸಹೋದರಿ ತನ್ವಿ ಕುಂಚ ಹೇಳಿದ್ದಾರೆ. ಅಮೆರಿಕಕ್ಕೆ ಉನ್ನತ ವ್ಯಾಸಂಗಕ್ಕೆ ಮಕ್ಕಳನ್ನು ಕಳುಹಿಸುವ ಬಗ್ಗೆ ಪೋಷಕರು ಮರುಚಿಂತನೆ ಮಾಡಬೇಕು ಎಂಬ ಮಾತನ್ನೂ ಹೇಳಿದ್ದಾರೆ.

ಅನ್ಮೊಲ್ ಅಕಾಲಿಕ ಸಾವಿನಿಂದ ತೀವ್ರ ದುಃಖವಾಗಿದೆ. ಸ್ಥಳೀಯ ಅಧಿಕಾರಿಗಳು ಮತ್ತು ಅನ್ಮೊಲ್ ಕುಟುಂಬದ ಜತೆ ಸಂಪರ್ಕದಲ್ಲಿದ್ದು ಅಗತ್ಯ ನೆರವು ನೀಡಲಾಗುತ್ತಿದೆ ಎಂದು ನ್ಯೂಯಾರ್ಕ್‌ನಲ್ಲಿನ ಭಾರತೀಯ ಕಾನ್ಸುಲೇಟ್ ಜನರಲ್ ಕಚೇರಿ ಅಧಿಕಾರಿಗಳು ತಿಳಿಸಿದ್ದಾರೆ.

ಪುಣೆ ಜಾತ್ರೆ ಪಾಕ್ ಚಾದರ್ ಮಾರಾಟ: ತನಿಖೆ

ಪುಣೆ: ಮಹಾರಾಷ್ಟ್ರ ರಾಜ್ಯದ ಪುಣೆ ನಗರದಲ್ಲಿ ಧಾರ್ಮಿಕ ಜಾತ್ರೆಯೊಂದರಲ್ಲಿ ಪಾಕಿಸ್ತಾನದಲ್ಲಿ ತಯಾರಾದ ಹಾಸಿಗೆ ಹೊದಿಕೆಗಳನ್ನು ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಪಿಂಪ್ರಿ-ಚಿಂಚ್ವಾಡ್‌ನ ಮೊರಯಾ ಗೋಸಾವಿ ದೇವಸ್ಥಾನದಲ್ಲಿನ ಜಾತ್ರೆಯಲ್ಲಿ ತಾವು ಖರೀದಿಸಿದ ಬೆಡ್ ಷೀಟ್‌ನಲ್ಲಿ 'ಮೇಡ್ ಇನ್ ಪಾಕಿಸ್ತಾನ್' ಟ್ಯಾಗ್ ಇದೆ ಎಂದು ಪೂಜಾ ಸರಾಫ್ ಎಂಬ ಮಹಿಳೆ ಜಾಲತಾಣದಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ.

ಜಮ್ಮು-ಕಾಶ್ಮೀರದಲ್ಲಿನ ಪಹಲ್ಗಾಮ್‌ನಲ್ಲಿ ಪಾಕ್ ಮೂಲದ ಉಗ್ರರು ಭಯೋತ್ಪಾದಕ ದಾಳಿ ನಡೆಸಿ 26 ಜನರನ್ನು ಕೊಂದ ಬಳಿಕ ಭಾರತ ಸರಕಾರ ಪಾಕ್ ಜತೆಗಿನ ಎಲ್ಲಾ ನೇರ-ಪರೋಕ್ಷ ಸರಕುಗಳ ಆಮದು-ರಫ್ತು ವಹಿವಾಟನ್ನು ನಿಷೇಧಿಸಿದೆ. ನಾವಿರುವ ಪ್ರದೇಶ ಪಾಕ್ ಗಡಿ ಭಾಗದಲ್ಲೇನೂ ಇಲ್ಲ. ಆದರೂ ಇಲ್ಲಿ 'ಮೇಡ್ ಇನ್ ಪಾಕಿಸ್ತಾನ್' ವಸ್ತುಗಳು ಮಾರಾಟವಾಗುತ್ತಿರುವುದು ಹೇಗೆ? ಎಂದು ಪ್ರಶ್ನೆ ಮಾಡಿರುವ ಪೂಜಾ, ನನಗೆ ಈಗ ಈ ಬೆಡ್‌ಶೀಟ್ ಖರೀದಿಸಿದ್ದಕ್ಕೆ ಬಹಳ ಬೇಸರವಾಗುತ್ತಿದೆ. ನನ್ನಂತೆಯೇ ಅನೇಕರು ಅಲ್ಲಿಂದ ಚಾದರ್ ಖರೀದಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಈ ವಿಡಿಯೊವನ್ನು ಗಮನಿಸಿದ ಪಿಂಪ್ರಿ-ಚಿಂಚ್ವಾಡ್ ಪೊಲೀಸರು, ಕಾರ್ಯಪ್ರವೃತ್ತರಾಗಿ ಮಹಿಳೆಯ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಪಾಕ್ ಮೂಲದ ಬೆಡ್‌ಶೀಟ್ ಭಾರತದ ಮಾರುಕಟ್ಟೆಗೆ ಬಂದಿರುವ ಬಗ್ಗೆ ತನಿಖೆ ನಡೆಸುತ್ತಿದ್ದು, ವಿಶೇಷ ತಂಡವನ್ನು ರಚಿಸಿದ್ದಾರೆ.

ಮಲಯಾಳಂ ಚಿತ್ರನಟ ಸಲೀಂಕುಮಾರ್ ನಿಧನ

ಕೊಚ್ಚಿ: ಮಲಯಾಳಂ ಚಿತ್ರರಂಗದ ಖ್ಯಾತ ನಟ, ನಿರ್ದೇಶಕ ಹಾಗೂ ರಾಷ್ಟ್ರೀಯ ಪ್ರಶಸ್ತಿ ವಿಜೇತ ಸಲೀಂ ಕುಮಾರ್(57) ಹಠಾತ್ ಅನಾರೋಗ್ಯದ ಕಾರಣ ಶನಿವಾರ ನಿಧನರಾದರು. ಆರೋಗ್ಯ ಹದಗೆಟ್ಟ ಹಿನ್ನೆಲೆ ಅವರನ್ನು ಶನಿವಾರ ಬೆಳಗ್ಗೆ ಕೊಚ್ಚಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿ ವೆಂಟಿಲೇಟರ್ ನೆರವಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಕೆಲ ವರ್ಷಗಳ ಹಿಂದೆ ಯಕೃತ್ತಿನ ಸಿರೋಸಿಸ್ ಕಾಯಿಲೆ ಯಿಂದ ಬಳಲುತ್ತಿದ್ದ ಕಾರಣ ಯಕೃತ್ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. 1969ರಲ್ಲಿ ಪರವೂರಿನಲ್ಲಿ ಜನಿಸಿದ ಸಲೀಂ ಕುಮಾರ್ ವಿಶಿಷ್ಟ ಮುಖಭಾವ, ವಿಭಿನ್ನ ರೀತಿಯ ಸಂಭಾಷಣೆ, ಅದ್ಭುತ ಹಾಸ್ಯಪ್ರಜ್ಞೆ ಕಾರಣದಿಂದಾಗಿ ಮಲಯಾಳಂ ಚಿತ್ರರಂಗದಲ್ಲಿ ಅತ್ಯಂತ ಜನಪ್ರಿಯ ಹಾಸ್ಯನಟರಾಗಿದ್ದರು. ಮಿಮಿಕ್ರಿ ಕಲಾವಿದರಾಗಿ ಕಲಾ ಪಯಣ ಆರಂಭಿಸಿ ಹಲವಾರು ವೇದಿಕೆ ಕಾರ್ಯಕ್ರಮ ನೀಡಿ 1997ರಲ್ಲಿ 'ಇಷ್ಟಮಾನು ನೂರು ವಟ್ಟಂ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು.



'ಸತ್ಯಮೇವ ಜಯತೇ' ಮತ್ತು 'ತೆಂಕಾಸಿ ಪಟ್ಟಣಂ' ಅವರಿಗೆ ಜನಪ್ರಿಯತೆ ತಂದ ಚಿತ್ರಗಳು. ಅವರು ಒಟ್ಟು 300ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. 'ಅಚನು ರಂಗಾಥ' ವೀಡು ಚಿತ್ರದ ಅಭಿನಯಕ್ಕಾಗಿ ದ್ವಿತೀಯ ಅತ್ಯುತ್ತಮ ನಟ ರಾಜ್ಯ ಚಲನಚಿತ್ರ ಪ್ರಶಸ್ತಿ ಪಡೆದರು.

2011ರಲ್ಲಿ 'ಆದಮಿ ಂಟೆ ಮಗನ್ ಅಬು' ಚಿತ್ರದಲ್ಲಿನ ಜೀವನಪೂರ್ತಿ ಹಜ್ ಯಾತ್ರೆ ಕನಸು ಕಾಣುವ ಅತ್ತರ್ ಮಾರಾಟಗಾರ ವೃದ್ಧ ಅಬು ಪಾತ್ರದ ಅಭಿನಯಕ್ಕಾಗಿ ಅತ್ಯುತ್ತಮ ನಟ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಹಾಗೂ ಕೇರಳ ರಾಜ್ಯ ಚಲನಚಿತ್ರ ಪ್ರಶಸ್ತಿ ಪಡೆದರು.

ಸಲೀಂ ನಿರ್ದೇಶಕ ಮತ್ತು ಕಥೆಗಾರರೂ ಆಗಿದ್ದರು. 'ಕರುತ್ತ ಜೂಥನ್' ಚಿತ್ರಕ್ಕೆ 2017ರಲ್ಲಿ ಅತ್ಯುತ್ತಮ ಕಥೆಗಾಗಿ ರಾಜ್ಯ ಚಲನಚಿತ್ರ ಪ್ರಶಸ್ತಿ ಪಡೆದರು.

ರಷ್ಯಾದಿಂದ ಬಂದಿಳಿದಿರುವ 4ನೇ ಬ್ಯಾಚ್‌ನ ಎಸ್-400

ದೆಹಲಿ:ಭಾರತದ 'ಆಪರೇಷನ್ ಸಿಂಧೂರ್' ಸೇನಾಪಡೆ ಕಾರ್ಯಾಚರಣೆ ವೇಳೆ ಪ್ರತಿದಾಳಿಯಾಗಿ ಪಾಕಿಸ್ತಾನ ಹಾರಿಸಿದ ಕ್ಷಿಪಣಿಗಳನ್ನು ಹೊಡೆದುರುಳಿಸುವಲ್ಲಿ ಮತ್ತು ಆಕಾಶದಲ್ಲೇ ಸುಟ್ಟು ಭಸ್ಮವಾಗುವಂತೆ ಮಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದು ರಷ್ಯಾ ನಿರ್ಮಿತ ಅತ್ಯಂತ ಶಕ್ತಿಶಾಲಿ ಎಸ್-400. ಈ ವಾಯುದಾಳಿ ರಕ್ಷಣಾ ಕ್ಷಿಪಣಿ ವ್ಯವಸ್ಥೆಯ 4ನೇ ಬ್ಯಾಚ್ ಜೂ.3ರಂದು ಭಾರತಕ್ಕೆ ಬಂದು ತಲುಪಿದೆ. ಇದರೊಂದಿಗೆ ಭಾರತದಲ್ಲಿನ ವಾಯುದಾಳಿ ನಿಗ್ರಹ ವ್ಯವಸ್ಥೆಯ ಶಕ್ತಿ ಮತ್ತಷ್ಟು ಹೆಚ್ಚಿದಂತಾಗಿದೆ.

- ಭಾರತ 2018ರ ಅಕ್ಟೋಬರ್‌ನಲ್ಲಿ ರಷ್ಯಾ ಜತೆ 543 ಕೋಟಿ ಡಾಲರ್(40,000 ಕೋಟಿ ರು.) ವೆಚ್ಚದಲ್ಲಿ ಎಸ್-400ನ ಒಟ್ಟು 5 ಘಟಕಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿದೆ.
- ಈ ಮೊದಲು 3 ಘಟಕಗಳು ಭಾರತಕ್ಕೆ ರವಾನೆಯಾಗಿದ್ದು, ಪೂರ್ವ ಮತ್ತು ಉತ್ತರದ ಗಡಿಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.
- 2023ರಲ್ಲೇ ಪೂರ್ಣಗೊಳ್ಳಬೇಕಿದ್ದ ಎಸ್-400ನ 5 ಘಟಕಗಳ ಪೂರೈಕೆ ಪ್ರಕ್ರಿಯೆ ರಷ್ಯಾ-ಉಕ್ರೇನ್ ಯುದ್ಧದ ಕಾರಣದಿಂದಾಗಿ ತಡವಾಗಿದೆ.
- ಭಾರತೀಯ ವಾಯುಪಡೆಯ(ಐಎಎಫ್) ಉನ್ನತ ಅಧಿಕಾರಿಗಳ ತಂಡ ಮೇ ತಿಂಗಳಲ್ಲಿ ರಷ್ಯಾಕ್ಕೆ ಭೇಟಿ ನೀಡಿ, ಭಾರತಕ್ಕೆ ರವಾನೆ ಆಗಲಿರುವ 'ಎಸ್-400' ಘಟಕಗಳ 4ನೇ ತಂಡದ ಗುಣಮಟ್ಟ, ತಾಂತ್ರಿಕತೆ ಪರೀಕ್ಷಿಸಿದೆ.
- ಈಗ ಎಸ್-400ನ 4ನೇ ಬ್ಯಾಚ್‌ನ ಉಪಕರಣಗಳು ಭಾರತದ ಬಂದರುಗಳಿಗೆ ತಲುಪಿದ್ದು, ಜೋಡಣೆಗೊಂಡು ಸಂಪೂರ್ಣ ಬಳಕೆಗೆ ಮಾಸಾಂತ್ಯ ವೇಳೆಗೆ ಸಜ್ಜಾಗಲಿವೆ.
- ಎಸ್-400ನ ಐದನೇ ಬ್ಯಾಚ್ ಇದೇ ವರ್ಷಾಂತ್ಯದೊಳಗೆ(ನವೆಂಬರ್‌ಗೆ) ಭಾರತಕ್ಕೆ ರವಾನಿಸಲಾಗುವುದು. ಅದರೊಂದಿಗೆ 2018ರ ಒಪ್ಪಂದ ಪೂರ್ಣಗೊಳ್ಳಲಿದೆ ಎಂಬುದು ರಷ್ಯಾದ ಖಚಿತ ನುಡಿ.
- ಪಂಜಾಬ್ ವಲಯದ ಪಠಾಣ್ ಕೋಟ್ ವ್ಯಾಪ್ತಿಯಲ್ಲಿ ಮೊದಲ ಎಸ್-400 ಸ್ಕ್ವಾಡ್ರನ್ ನಿಯೋಜಿಸಲಾಗಿದೆ.

ಮತ್ತೊಂದು ಬ್ಯಾಚ್‌ನ ಎಸ್-400 ಜಮ್ಮು-ಕಾಶ್ಮೀರ ವಲಯದಲ್ಲಿದೆ.

- ಎಸ್-400ರ 3ನೇ ಬ್ಯಾಚ್ ಘಟಕವನ್ನು ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂ ವಲಯದ ಸಿಲಿಗುರಿ ಕಾರಿಡಾರ್‌ನಲ್ಲಿ ಚೀನಾ ಗಡಿಗೆ ಸಮೀಪವಾದ 'ಚಿಕನ್ ನೆಕ್ ಕಾರಿಡಾರ್' ನಲ್ಲಿ ನೆಲೆಗೊಳಿಸಿದೆ.

- ಈಗ ಭಾರತಕ್ಕೆ ಬಂದಿರುವ ಎಸ್-400ರ 4ನೇ ಬ್ಯಾಚ್‌ನ ಘಟಕವನ್ನು ರಾಜಸ್ಥಾನ ವಲಯದಲ್ಲಿ ಪಾಕ್ ಗಡಿ ಸಮೀಪ ನಿಯೋಜಿಸಲಾಗುವುದು.
- ಶತ್ರು ದೇಶ ಪಾಕ್ ಕಡೆಯಿಂದ ಹಾರಿ ಬರುವ ಡ್ರೋನ್, ಯುದ್ಧ ವಿಮಾನ, ಖಂಡಾಂತರ ಕ್ಷಿಪಣಿಗಳನ್ನು ಭಾರತ ವಾಯುಪ್ರದೇಶ ಪ್ರವೇಶಿಸುವ ಮುನ್ನವೇ ಹೊಡೆದುರುಳಿಸುವ ಸಾಮರ್ಥ್ಯ ಎಸ್-400ಗಿದೆ.
- ರಷ್ಯಾದಲ್ಲಿ ನಿರ್ಮಾಣಗೊಂಡಿರುವ ವಿಶ್ವದ ಅತ್ಯಂತ ಸುಧಾರಿತ ವಾಯುರಕ್ಷಣಾ ವ್ಯವಸ್ಥೆ ಎಸ್-400ರ ಶಕ್ತಿಗೆ ಹೊಂದುವಂತೆ ಭಾರತೀಯ ಸೇನೆ ಅದಕ್ಕೆ 'ಸುದರ್ಶನ ಚಕ್ರ' ಎಂಬ ಹೆಸರಿಟ್ಟಿದೆ.
- ಎಸ್-400 ವಾಯುದಾಳಿ ನಿಗ್ರಹ ವ್ಯವಸ್ಥೆ, 400 ಕಿ.ಮೀ. ವ್ಯಾಪ್ತಿಯಲ್ಲಿ ಹಾರಾಡುವ ಶತ್ರು ಯುದ್ಧ ವಿಮಾನ-ಡ್ರೋನ್‌ಗಳು ಮತ್ತು ಕ್ಷಿಪಣಿಗಳನ್ನು ಪತ್ತೆಹಚ್ಚಿ ಕ್ಷಣಾರ್ಧದಲ್ಲಿ ನಾಶ ಮಾಡಬಲ್ಲದು.
- ಹೆಚ್ಚುವರಿಯಾಗಿ ಇನ್ನೂ ಐದು 'ಎಸ್-400' ವಾಯುದಾಳಿ ನಿರೋಧಕ ಘಟಕಗಳನ್ನು ರಷ್ಯಾದಿಂದ ಖರೀದಿಸಲು ಭಾರತದ ರಕ್ಷಣಾ ಸಚಿವಾಲಯ ಅನುಮೋದಿಸಿದೆ.
- ಈ ಒಪ್ಪಂದವೇನಾದರೂ ನಡೆದು ಮತ್ತೆ 5 ಘಟಕಗಳ ರಷ್ಯಾದಿಂದ ಬಂದರೆ ಭಾರತದ ಸಶಸ್ತ್ರ ಪಡೆಗಳ ಬಳಿ ಎಸ್-400 ಘಟಕಗಳ ಸಂಖ್ಯೆ 10ಕ್ಕೆ ಏರಿಕೆಯಾಗಲಿದೆ. ಭಾರತದ ದಶದಿಕ್ಕುಗಳೂ ಇಸ್ರೇಲ್‌ನ ಐರನ್ ಡೋಮ್ ರೀತಿ ಅಬೇಧ್ಯವಾಗಲಿವೆ.

ಸಮಾಚಾರ ಸಣ್ಣದಲ್ಲ

ಅರಸು ಕಾಲೇಜ್‌ಗೆ ರಾಜ್ಯ ಮಟ್ಟದ ಶ್ರೇಯಾಂಕ

ಕೋಲಾರ: ಇಲ್ಲಿನ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯು ಇಂಡಿಯನ್ ಇನ್ ಸ್ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಮ್ ವರ್ಕ್ 2026ರ ಅಡಿಯಲ್ಲಿ ಅತ್ಯುತ್ತಮ ಡೀಮ್ಡ್ ವಿಶ್ವವಿದ್ಯಾಲಯ ವಿಭಾಗದಲ್ಲಿ ರಾಷ್ಟ್ರೀಯ ಶ್ರೇಯಾಂಕ 90 ಮತ್ತು ರಾಜ್ಯ ಶ್ರೇಯಾಂಕ 9 ಅನ್ನು ಪಡೆದುಕೊಂಡಿದೆ. ನವದೆಹಲಿಯ ಐಐಆರ್‌ಎಫ್ ಸಂಸ್ಥಾ ಸಂಶೋಧನಾ ಕೇಂದ್ರ ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ ಈ ಶ್ರೇಯಾಂಕವನ್ನು ನೀಡಲಾಗಿದ್ದು, ಪ್ರಮಾಣಪತ್ರವನ್ನು ಜೂ.3ರಂದು ನೀಡಲಾಗಿದೆ. ಭವಿಷ್ಯದಲ್ಲಿಯೂ ಉನ್ನತ ಮಟ್ಟದ ಶಿಕ್ಷಣ, ಸಂಶೋಧನೆ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುವ ಮೂಲಕ ಮತ್ತಷ್ಟು ಸಾಧನೆಗಳನ್ನು ಮಾಡುವ ಸಂಕಲ್ಪವನ್ನು ರಿಜಿಸ್ಟ್ರಾರ್ ಡಾ.ಮುನಿನಾರಾಯಣ ಆಶಯ ವ್ಯಕ್ತಪಡಿಸಿದ್ದಾರೆ.

17ರಂದು ಉಚಿತ ಐವಿಎಫ್ ಶಿಬಿರ

ಕೋಲಾರ: ನಗರದ ಕುರುಬರ ಪೇಟೆಯ ಶ್ರೀ ಸಾಯಿ ಆಸ್ಪತ್ರೆಯಲ್ಲಿ ಜೂ.17ರಂದು ಬೆಳಗ್ಗೆ 10 ಗಂಟೆಗೆ ಉಚಿತ ಐವಿಎಫ್ ಸಂತಾನೋತ್ಪತ್ತಿ ಶಿಬಿರ ಆಯೋಜಿಸಲಾಗಿದೆ. ಬೆಂಗಳೂರಿನ ಕಲ್ಯಾಣನಗರದ ಮದರ್ ವುಡ್ ಆಸ್ಪತ್ರೆಯ ಸಂತಾನೋತ್ಪತ್ತಿ ಮತ್ತು ಪ್ರಸೂತಿ ತಜ್ಞರಾದ ಡಾ.ಕುಸುಮಾ ಎಂ.ವಿಜಯ್ ಅವರು ಶಿಬಿರದಲ್ಲಿ ದಂಪತಿಯನ್ನು ಪರೀಕ್ಷೆ ಮಾಡಿ ಚಿಕಿತ್ಸೆ ಮತ್ತು ಸಲಹೆಯನ್ನು ನೀಡುವರು. ಮದುವೆ ಆಗಿ ಒಂದು ವರ್ಷ ಆದರೂ ಮಕ್ಕಳು ಆಗದವರು ಶಿಬಿರದಲ್ಲಿ ಭಾಗವಹಿಸುವ ಮೂಲಕ ಸಲಹೆ ಪಡೆಯಬಹುದು. ಈಗಾಗಲೇ ಚಿಕಿತ್ಸೆ ಪಡೆದಿದ್ದರೆ ಸಂಬಂಧಪಟ್ಟ ದಾಖಲೆಗಳನ್ನು ತಂದರೆ ಮುಂದಿನ ಚಿಕಿತ್ಸೆ ನೀಡಲು ಅನುಕೂಲ ಆಗುತ್ತದೆ ಎಂದು ಶ್ರೀ ಸಾಯಿ ಆಸ್ಪತ್ರೆ ವ್ಯವಸ್ಥಾಪಕ ಲಕ್ಷ್ಮಣ್ ತಿಳಿಸಿದ್ದಾರೆ. ಆಸಕ್ತರು 9380398290 ಸಂಪರ್ಕಿಸಬಹುದಾಗಿದೆ.

ಜೂಜಾಟ: ಮೂವರ ಬಂಧನ, ನಗದು ಜಪ್ತಿ

ಚಿಂತಾಮಣಿ: ತಾಲೂಕಿನ ರಾಸಪಲ್ಲಿ ಗ್ರಾಮದ ಸರಕಾರಿ ಜಮೀನಿನ ನೀಲಗಿರಿ ತೋಪಿನಲ್ಲಿ ಅಕ್ರಮವಾಗಿ ಅಂದರ್-ಬಹರ್ ಇಸ್ಪೀಟ್ ಜೂಜಾಟ ಆಡುತ್ತಿದ್ದ ಅಡ್ಡೆಯ ಮೇಲೆ ಕೆಂಚಾರ್ಲಹಳ್ಳಿ ಪೊಲೀಸರು ನಿಖರ ಮಾಹಿತಿ ಆಧರಿಸಿ ದಾಳಿ ನಡೆಸಿದ್ದಾರೆ. ಜೂಜಾಟ ಆಡುತ್ತಿದ್ದ ರಾಸಪಲ್ಲಿ ಗ್ರಾಮದ ಮಂಜುನಾಥ್ ಬಿನ್ ಗಂಗೂಲಪ್ಪ(41)ಭಾಸ್ಕರ್ ಬಿನ್ ನರಸಿಂಹಪ್ಪ(29) ಕಲ್ಯಾಣ್ ಬಿನ್ ಚೌಡರೆಡ್ಡಿ ಇವರನ್ನು ವಶಕ್ಕೆ ಪಡೆದು ಜೂಜಾಟದ ಸ್ಥಳದಿಂದ ಒಟ್ಟು 2,120ರು.ನಗದು ಮತ್ತು 52 ಇಸ್ಪೀಟ್ ಎಲೆಗಳನ್ನು ಪೊಲೀಸರು ವಶಪಡಿಸಿಕೊಂಡು ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ

ತುಮಕೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಪಿ.ಯು.ಸಿ., ಡಿಪ್ಲೋಮಾ, ಐ.ಟಿ.ಐ. ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ವರ್ಗದವರಿಗೆ ಶೇ. 75ರಷ್ಟು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಕ್ಕೆ ಶೇ. 25ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಜೂ.30ರೊಳಗಾಗಿ ತಮ್ಮ ಅರ್ಜಿಯನ್ನು ಜಾಲತಾಣದ ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಇಂದಿರಾ ಕಾಲೇಜು ಮುಂಭಾಗ, ಉಪ್ಪಾರಹಳ್ಳಿ, ತುಮಕೂರು-572102 ಅಥವಾ ದೂ.ವಾ. ಸಂ.0816-2273724ನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

ಕೌಶಲಾಭಿವೃದ್ಧಿ ತರಬೇತಿ: ಆಕ್ಷೇಪಣೆಗೆ ಅವಕಾಶ

ತುಮಕೂರು: ಪ್ರವಾಸೋದ್ಯಮ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸುವ ಸಲುವಾಗಿ 1 ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟೀನ್ ನಡೆಸಲು 5 ಲಕ್ಷ ರು.ಗಳ ಸಹಾಯಧನ ನೀಡುವ ಸಂಬಂಧ ಅರ್ಜಿ ಆಹ್ವಾನಿಸಲಾಗಿತ್ತು. ಸ್ವೀಕೃತವಾದ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅವರಿಂದ ಅನುಮೋದನೆಗೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳ ಅರ್ಹತಾ ಪಟ್ಟಿ, ಅನರ್ಹತಾ ಪಟ್ಟಿ, ಅಂತಿಮ ಪಟ್ಟಿ ಹಾಗೂ ಕಾಯ್ದಿರಿಸಿರುವ ಪಟ್ಟಿಯನ್ನು ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ತುಮಕೂರು ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

{ಈಶ್ವರ ಖಂಡ್ರೆ} ಸಚಿವ

ಕಳೆದ 3 ತಿಂಗಳಲ್ಲಿ 2ನೇ ಬಾರಿ ಅಡುಗೆ ಅನಿಲ ದರ ಏರಿಕೆ ಮಾಡಲಾಗಿದ್ದು, ಸುಮಾರು 90ರು. ಹೊರೆ ಬಿದ್ದಿದೆ. ಇದರಿಂದ ಬಡವರು, ಮಧ್ಯಮವರ್ಗದವರು ನಲುಗಿ ಹೋಗಿದ್ದಾರೆ. ಇದೆಲ್ಲವೂ ಕೇಂದ್ರ ಸರಕಾರದ ದುರಾಡಳಿತದ ಫಲ. ಬಿಜೆಪಿ ಮತ್ತು ಮಿತ್ರಪಕ್ಷಗಳಿಗೆ ಜನರೇ ಬೀದಿಗಿಳಿದು ಬುದ್ಧಿಕಲಿಸುವ ದಿನ ದೂರವಿಲ್ಲ.

ನಾನಾ ಇಲಾಖೆಯ ಪ್ರಗತಿ ಪರಿಶೀಲನೆ | ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್

ಕಾಮಗಾರಿ ಪರಿಶೀಲನೆಗೆ ಟಾಸ್ಕ್ ಫೋರ್ಸ್

ವಿಶ್ವವಾಣಿ ಸುದ್ದಿಮನೆ ತುಮಕೂರು

ಜಿಲ್ಲೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಪರಿಶೀಲನೆಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ರಚಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಭಾನುವಾರ ವಿವಿಧ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಸಮಯ ವ್ಯರ್ಥ ಮಾಡದೆ, ಮುಖ್ಯಮಂತ್ರಿ ಹಾಗೂ ತಾವು ಕೆಲಸ ಮಾಡಬೇಕಿದೆ.

ಈ ನಿಟ್ಟಿನಲ್ಲಿ ತುಮಕೂರು ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಿದ್ದು, ಇನ್ನೆರಡು ವರ್ಷಗಳಲ್ಲಿ ಬಾಕಿ ಇರುವ ಎಲ್ಲ ಕಾಮಗಾರಿಗಳು ಪೂರ್ಣಗೊಳ್ಳಬೇಕಿದೆ ಹಾಗೂ ಆಗಲೇಬೇಕಿರುವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪ್ರಗತಿ ಸಾಧಿಸಬೇಕಿದೆ. ಈ ನಿಟ್ಟಿನಲ್ಲಿ ಕಾಮಗಾರಿಗಳು ತ್ವರಿತವಾಗಿ ಆಗಬೇಕೆಂಬ ದೃಷ್ಟಿಯಲ್ಲಿ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್ ರಚಿಸಲಾಗುವುದು. ಈ ಸಮಿತಿ ಆಯಾ ಇಲಾಖೆಗಳು ಕೈಗೊಂಡ ಕಾಮಗಾರಿಗಳ ಪ್ರಗತಿಯನ್ನು ತಿಂಗಳಂತ್ಯದಲ್ಲಿ ಟಾಸ್ಕ್ ಫೋರ್ಸ್ ಗೆ ನೀಡಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯ ನೀರಾವರಿ ಯೋಜನೆಗಳಾದ ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಹಾಗೂ ಹೇಮಾವತಿ ನಾಲಾ ಯೋಜನೆಗಳು ಪ್ರಗತಿಯಲ್ಲಿದ್ದು, ಇವುಗಳ ಭೂಸ್ವಾಧೀನ ಪ್ರಕ್ರಿಯೆ ವಿವಿಧ ಹಂತದಲ್ಲಿವೆ ಈ ಬಗ್ಗೆ ಪ್ರತ್ಯೇಕವಾಗಿ ಸಭೆ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಇದಲ್ಲದೆ ವಿವಿಧ ಇಲಾಖೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಎಲ್ಲ ಕಾಮಗಾರಿಗಳ ವರದಿಯನ್ನು ವಾರಾಂತ್ಯದಲ್ಲಿ ಜಿಲ್ಲಾಧಿಕಾರಿಯವರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಒಟ್ಟಾರೆ ಜಿಲ್ಲೆಯ ಅಭಿವೃದ್ಧಿ ತ್ವರಿತವಾಗಬೇಕೆಂಬುದು ಪ್ರಮುಖ ಉದ್ದೇಶವಾಗಿದೆ ಎಂದು ಉಪ ಮುಖ್ಯಮಂತ್ರಿ ತಿಳಿಸಿದರು.

130 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಜಿಲ್ಲಾಸ್ಪತ್ರೆ ಕಾಮಗಾರಿಗೆ ಸೋಮವಾರ ಹಳೆ ಕಟ್ಟಡ ತೆರವು ಕಾರ್ಯ ಆರಂಭವಾಗಲಿದೆ. 10 ಕೋಟಿ ರು. ವೆಚ್ಚದಲ್ಲಿ ಗುಬ್ಬಿ ವೀರಣ್ಣ ರಂಗಮಂದಿರ ಹೊಸದಾಗಿ ನಿರ್ಮಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಈಗಾಗಲೇ 3 ಕೋಟಿ ರು. ಸರಕಾರ ನೀಡಿದೆ. ಜಿಲ್ಲೆಯ ಎಚ್‌ಎಎಲ್ ಕಾರ್ಖಾನೆ ತಮ್ಮ ಸಿಎಸ್‌ಆರ್‌ಅಡಿಯಲ್ಲಿ 3 ಕೋಟಿ ರು. ಹಾಗೂ ಹೆಚ್ಚುವರಿ ಸರಕಾರದಿಂದ ಅನುದಾನ ಒದಗಿಸಲಾಗುವುದು. ಅಲ್ಲದೆ, 175 ಕೋಟಿ ರು. ವೆಚ್ಚದಲ್ಲಿ ತುಮಕೂರು ನಗರದಲ್ಲಿ ಮಹಾತ್ಮಗಾಂಧೀ ನಗರ ವಿಕಾಸ ಯೋಜನೆಯಡಿ ಕಾಮಗಾರಿ ಆರಂಭಿಸಲಾಗಿದೆ.

ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಅಂತಾರಾಷ್ಟ್ರೀಯ ಈಜುಕೊಳ, ಅಂತಾರಾಷ್ಟ್ರೀಯ ಹಾಕಿ ಕ್ರೀಡಾಂಗಣ ಹೀಗೆ ತುಮಕೂರು ಕ್ರೀಡಾ ನಗರವಾಗಿ ಬೆಳೆಯಲಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಅಶ್ವಿಜ ಬಿ.ವಿ. ಜಿಲ್ಲಾ ಪೊಲೀಸ್ ಅಧೀಕ್ಷಕ ಅಶೋಕ್ ಕೆ.ವಿ. ಅಪರ ಜಿಲ್ಲಾಧಿಕಾರಿ ಡಾ.ಎನ್.ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಭಾನುವಾರ ವಿವಿಧ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮಾತನಾಡಿದರು.

ಎತ್ತಿನಹೊಳೆ ಯೋಜನೆಯ ಭೂಸ್ವಾಧೀನ ಪೂರ್ಣಗೊಂಡಿದ್ದು ಜುಲೈನಲ್ಲಿ ನೀರು ಹರಿಸುವ ನಿರೀಕ್ಷೆ ಇತ್ತು. ಆದರೆ ಇನ್ನೂ ಕೆಲವೆಡೆ ಕಾಮಗಾರಿಗಳು ಆಗಬೇಕಿದೆ. ಹೇಮಾವತಿ ಎಕ್ಸ್ ಪ್ರೆಸ್ ಕೆನಾಲ್ ಯೋಜನೆಯಡಿ ಭೂಸ್ವಾಧೀನ ಪ್ರಕ್ರಿಯೆಯನ್ನು ತಿಂಗಳೊಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಜಿಲ್ಲೆಯ ಎರಡು ರೈಲ್ವೆ ಯೋಜನೆಗಳ ಪೈಕಿ ತುಮಕೂರು-ದಾವಣಗೆರೆ ವೇಗವಾಗಿ ನಡೆಯುತ್ತಿದೆ ಆದರೆ ತುಮಕೂರು-ರಾಯದುರ್ಗ ಯೋಜನೆಯಲ್ಲಿ ತುಮಕೂರಿನಿಂದ ಪಾವಗಡವರೆಗೆ ಇರುವ ಕೆಲವು ತೊಡಕುಗಳನ್ನು ಸರಿಪಡಿಸಬೇಕಿದೆ.

– **ಡಾ.ಜಿ.ಪರಮೇಶ್ವರ್**, ಉಪ ಮುಖ್ಯಮಂತ್ರಿ

ಎಸ್ಸೆಸ್ಸೆಲ್ಸಿಯ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಬಾಗೇಪಲ್ಲಿ: 2025-26 ನೇ ಸಾಲಿನ ತಾಲೂಕು ಕಸಬಾ ಹೋಬಳಿ ಸರಕಾರಿ ಪ್ರೌಢಶಾಲೆ ಘಂಟಂವಾರಿಪಲ್ಲಿ ಶಾಲೆಯಲ್ಲಿ ಎಸ್‌ಎಸ್ ಎಲ್‌ಸಿ ಪರೀಕ್ಷೆ-1 ರಲ್ಲಿ ಉತ್ತಮ ಸಾಧನೆ ಮಾಡಿದ ಮೂರು ವಿದ್ಯಾರ್ಥಿಗಳಿಗೆ ದಾನಿಗಳು ಹಾಗೂ ಶಾಲಾ ವತಿಯಿಂದ ಆತ್ಮೀಯವಾಗಿ ಶ್ಯಾಲು ಹೊದಿಸಿ ಹಣ್ಣು ಹಂಪಲು ಹಾಗೂ ನಗದು ಬಹುಮಾನ ನೀಡಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಈ ಶಾಲೆಯಲ್ಲಿ ಅತ್ಯುತ್ತಮ ಅತಿಹೆಚ್ಚು ಅಂಕಗಳನ್ನು ಗಳಿಸಿದ ಹತ್ತು ವಿದ್ಯಾರ್ಥಿಗಳ ಪೈಕಿ ಮೂರು ವಿದ್ಯಾರ್ಥಿಗಳಾದ ಚೈತ್ರ ಎಸ್.558(89.28%), ಹೇಮಾವತಿ 556(88.08%), ಸಿದ್ಧಾರ್ಥ ಎಚ್.ವಿ. 526 (84.15%)ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮಿಟ್ಟೇಮರಿ ಕ್ಲಸ್ಟರ್‌ಸಂಪನ್ಮೂಲ ವ್ಯಕ್ತಿ ಡಾ.ಶಿವಪ್ಪ ಮಾತನಾಡಿ, ನಿರಂತರ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಹಾಗೂ ಪೋಷಕರ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ. ಮುಂದಿನ ವಿದ್ಯಾಭ್ಯಾಸದಲ್ಲಿಯೂ ಇದೇ ಉತ್ಸಾಹ ಮತ್ತು ಶಿಸ್ತು ಮುಂದುವರೆಯಲಿ.

ನಿಮ್ಮ ಈ ಸಾಧನೆಗೆ ಸನ್ಮಾನ ಮಾಡಿದರೆ ಕಿರಿಯ ವಿದ್ಯಾರ್ಥಿಗಳಿಗೆ ನಿಮ್ಮಂದ ಸ್ಫೂರ್ತಿ ಪಡೆದು ನಿಮ್ಮಂತೆ ಅವರು ಸಾಧನೆ ಮಾಡಿ ಇತರರಿಗೆ ಮಾದರಿಯಾಗಲಿ ಎಂದು ವಿದ್ಯಾರ್ಥಿಗಳಿಗೆ ಹಾರೈಸಿದರು.

ಮುಖ್ಯ ಶಿಕ್ಷಕಿ ಜಿ.ರಾಮಸುಬ್ಬಮ್ಮ ಮಾತನಾಡಿದರು. ಈ ಸಂದರ್ಭದಲ್ಲಿ ಎಸ್.ಎಸ್.ಸಂಧ್ಯಾ, ಜಿ.ಲಕ್ಷ್ಮೀದೇವಮ್ಮ, ಸಿ.ನಾರಾಯಣ ಸ್ವಾಮಿ, ಕೆ.ಬಿ.ಆಂಜನೇಯ ರೆಡ್ಡಿ , ಜಿ.ವಿ.ಚಂದ್ರಶೇಖರ, ಶರ್ಮಿಳಾ, ಸಿಬ್ಬಂದಿ ವರ್ಗ ಎಚ್.ಆರ್. ರಘುನಾಥ್, ಶಾಲಾ ಮಕ್ಕಳು ಹಾಗೂ ಪೋಷಕರು ಹಾಜರಿದ್ದರು.

ಅದ್ದೂರಿ ಶ್ರೀರಾಮ ಶೋಭಾಯಾತ್ರೆ

ನಗರದಲ್ಲಿ ಶ್ರೀರಾಮ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು.

ಶಿಡ್ಲಘಟ್ಟ: ಶ್ರೀರಾಮ ಶೋಭಾಯಾತ್ರೆ ಆಚರಣೆ ಸಮಿತಿಯ ವತಿಯಿಂದ ನಗರದಲ್ಲಿ ಶ್ರೀರಾಮ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು.

ನಗರದ ಹನುಮಂತರಪುರ ಗೇಟ್ ನ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾದ ಮೆರವಣಿಗೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ನಗರವನ್ನು ಕೇಸರಿಮಯಗೊಳಿಸಿತು.

ಶೋಭಾಯಾತ್ರೆಯಲ್ಲಿ ಮಹಿಳೆಯರು, ಯುವಕರು, ಹಿರಿಯ ನಾಗರಿಕರು ಹಾಗೂ ಮಕ್ಕಳು ಸೇರಿದಂತೆ ಸಾವಿರಾರು ಭಕ್ತರು ಭಾಗವಹಿಸಿ 'ಜೈ ಶ್ರೀರಾಮ' ಘೋಷಣೆಗಳನ್ನು ಮೊಳಗಿಸಿದರು. ಮಹಿಳೆಯರು ಪೂರ್ಣಕುಂಭ, ಆರತಿ ಹಾಗೂ ಭಜನೆಗಳ ಮೂಲಕ ಕಾರ್ಯಕ್ರಮಕ್ಕೆ ಮೆರುಗು ತಂದರೆ, ಯುವಕರು ಡೊಳ್ಳು ಕುಣಿತ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸಂಭ್ರಮ ಹೆಚ್ಚಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಪುಟ್ಟು ಆಂಜಿನಪ್ಪ ಮಾತನಾಡಿ, ಶ್ರೀರಾಮ ಶೋಭಾಯಾತ್ರೆಯಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಸೌಹಾರ್ದತೆ, ಭಕ್ತಿ ಮತ್ತು ಒಗ್ಗಟ್ಟಿನ ಸಂದೇಶವನ್ನು ಸಾರುತ್ತವೆ. ಸಾವಿರಾರು ಭಕ್ತರು ಭಾಗವಹಿಸಿರುವುದು ಶ್ರೀರಾಮನ ಮೇಲಿನ ಜನರ ಅಪಾರ ಭಕ್ತಿಗೆ ಸಾಕ್ಷಿಯಾಗಿದೆ. ತಾಲೂಕಿನ ಜನರ ಸುಖ, ಶಾಂತಿ ಹಾಗೂ ಸಮೃದ್ಧಿಗಾಗಿ ಶ್ರೀರಾಮನಲ್ಲಿ ಪ್ರಾರ್ಥಿಸಿದ್ದೇನೆ ಎಂದು ಹೇಳಿದರು.ಮಾಜಿ ಶಾಸಕ ರಾಜಣ್ಣ ಮಾತನಾಡಿ, 'ಶ್ರೀರಾಮನ ಆದರ್ಶಗಳು ಸಮಾಜಕ್ಕೆ ಮಾರ್ಗದರ್ಶಕವಾಗಿವೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳು ಜನರನ್ನು ಒಗ್ಗೂಡಿಸಿ ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ' ಎಂದರು. ಈ ಸಂದರ್ಭದಲ್ಲಿ ಸಮಿತಿ ಅಧ್ಯಕ್ಷ ವೆಂಕಟೇಶ್, ಅನಿಲ್ ಕುಮಾರ್, ನಾಗೇಶ್, ಸ್ಕೂಲ್ ದೇವರಾಜ್, ಡಾ ಸತ್ಯನಾರಾಯಣರಾವ್ ವೆಂಕೋಬರಾವ್ ಉಪಸ್ಥಿತರಿದ್ದರು.

ಯಕ್ಷಗಾನ ಸಾಮಾಜಿಕ ಜವಾಬ್ದಾರಿಯ ಕಲೆ

ತುಮಕೂರು: ವಿವೇಕಾನಂದ ಅವರ ವಿವೇಕ ಹಾಗೂ ರಾಮಕೃಷ್ಣ ಪರಮಹಂಸರ ತತ್ವಗಳು ಯಕ್ಷಗಾನಕ್ಕೆ ಅತ್ಯಗತ್ಯವಾಗಿದ್ದು, ಅವರೆಲ್ಲರೂ ನಮಗೆ ಸ್ಫೂರ್ತಿಯಾಗಬೇಕು. ಯಕ್ಷಗಾನವು ಕೇವಲ ಮನರಂಜನೆಯಲ್ಲ, ಅದು ಸಾಮಾಜಿಕ ಜವಾಬ್ದಾರಿಯನ್ನು ಹೊತ್ತಿರುವ ಬೃಹತ್ ಕಲೆಯಾಗಿದೆ ಎಂದು ಹಿರಿಯ ಯಕ್ಷಗಾನ ಕಲಾವಿದ ಹಾಗೂ ಬಹುಶ್ರುತ ವಿದ್ವಾಂಸ ಡಾ.ಎಂ.ಪ್ರಭಾಕರ ಜೋಶಿ ಅಭಿಪ್ರಾಯಪಟ್ಟರು.

ನಗರದ ರಾಮಕೃಷ್ಣ-ವಿವೇಕಾನಂದ ಆಶ್ರಮದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ 'ಯಕ್ಷದೀವಿಗೆ' ಸಂಸ್ಥೆಯ ದಶಮಾನೋತ್ಸವ ಆಚರಣೆಯ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶ್ರೀ ಸಿದ್ದಗಂಗಾದಂತಹ ಪುಣ್ಯ ಕ್ಷೇತ್ರವಿರುವ ಊರಿನಲ್ಲಿ ಯಕ್ಷಗಾನ ಪಸರಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಯಕ್ಷಗಾನ ಎನ್ನುವುದು ಒಂದು ಸ್ಥಿರೀಕರಣ, ದೃಢೀಕರಣ ಮತ್ತು ಸಮೀಕರಣವಾಗಿದೆ. ವಸ್ತು, ಆಶಯ ಹಾಗೂ ಸಂಘಟನೆ ಇದರ ಮೂರು ಪ್ರಮುಖ ಸೂತ್ರಗಳಾಗಿವೆ ಎಂದರು.

ಕಲೆಯ ವೇಷಭೂಷಣದ ಅರಿವಿಲ್ಲದಿದ್ದರೆ ಅದನ್ನು ಮಾಡುವುದು ವ್ಯರ್ಥ. ಕಲಾ ರೂಪಕ್ಕೆ ಪ್ರಧಾನವಾದ ಯಕ್ಷಗಾನ ಮಾಧ್ಯಮದ ಒಳಗೆ ವೇಷ ಇರಬೇಕು. ಕಥೆ, ಸ್ಥಾನ ಹಾಗೂ ಪ್ರಸಂಗಗಳ ಸ್ಪಷ್ಟ ಅರಿವು ಕಲಾವಿದರಿಗೆ ಇರಬೇಕು ಎಂದರು.

ಹಿರಿಯ ಯಕ್ಷಗಾನ ಕಲಾವಿದ ಗಣರಾಜ ಕುಂಬ್ಳೆ ಮಾತನಾಡಿ, ಯಕ್ಷಗಾನ ಬೆಳೆದು ಬಂದಿದ್ದೇ ಅರಮನೆ ಹಾಗೂ ಗುರುಮನೆಗಳ ಆಶ್ರಯದಲ್ಲಿ. ಸಾಧನೆ ಮಾಡಬೇಕೆಂಬ ಆಸಕ್ತಿ ಇದ್ದರೆ ಎಲ್ಲದರೂ ಸಾಧಿಸಬಹುದು ಎಂಬುದನ್ನು ಯಕ್ಷದೀವಿಗೆ ತೋರಿಸಿಕೊಟ್ಟಿದೆ. ತಾವೂ ಕಲಿತು, ಬೇರೆಯವರಿಗೂ ಕಲಿಸಿ, ಕನ್ನಡದ ಬಳಕೆಯನ್ನು ಹೆಚ್ಚಿಸಿದ ಹಾಗೂ ಸುಲಲಿತವಾಗಿ ಕನ್ನಡ ಮಾತನಾಡುವುದನ್ನು ಕಲಿಸಿದ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತೀ ಮಾತನಾಡಿ, ಭಾರತೀಯ ಪರಂಪರೆಯನ್ನು ಅವಲೋಕಿಸಿದಾಗ ನಾವೇ ಪುಣ್ಯವಂತರು ಎನಿಸುತ್ತದೆ. ಮನುಷ್ಯನ ಇತಿಹಾಸ, ವರ್ತಮಾನ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳಲು ಶಿಕ್ಷಣದ ಜತೆಗೆ ನಾಗರಿಕತೆ, ಸಂಸ್ಕೃತಿ ಮತ್ತು ಪರಂಪರೆಯ ಅರಿವು ಅತ್ಯಗತ್ಯ ಎಂದರು.

ಹಿರಿಯ ಯಕ್ಷಗಾನ ಗುರುಗಳಾದ ಕೋಡ್ಲ ಗಣಪತಿ ಭಟ್ ಅವರಿಗೆ ಯಕ್ಷದೀವಿಗೆಯ ವಾರ್ಷಿಕ ಗೌರವವನ್ನು ನೀಡಿ ಸತ್ಕರಿಸಲಾಯಿತು. ಯಕ್ಷದೀವಿಗೆ ಸಂಸ್ಥೆಯ ಅಧಿಕೃತ ಜಾಲತಾಣ ಹಾಗೂ ಯಕ್ಷದೀವಿಗೆ ನಡೆದುಬಂದ ಹಾದಿ ಎಂಬ ವಿಶೇಷ ಸಾಕ್ಷ್ಯಚಿತ್ರವನ್ನು ಬಿಡುಗಡೆ ಮಾಡಲಾಯಿತು.

ಚಿತ್ರದುರ್ಗ, ಧಾರವಾಡ, ತುಮಕೂರು, ಬೆಂಗಳೂರು, ದಾವಣಗೆರೆ, ಮೈಸೂರು, ಕೋಲಾರ ಸೇರಿದಂತೆ ಕರಾವಳಿಯೇತರ ಪ್ರದೇಶಗಳಲ್ಲಿ ತೆಂಕುತಿಟ್ಟು ಯಕ್ಷಗಾನದ ವಿಸ್ತರಣೆಗಾಗಿ ಶ್ರಮಿಸಿದ ಗುರುಗಳು ಹಾಗೂ ಸಂಘಟಕರನ್ನು ಗೌರವಿಸಲಾಯಿತು.

ಆಶ್ರಮದ ಸ್ವಾಮಿ ಧೀರಾನಂದಜೀ, ಯಕ್ಷದೀವಿಗೆ ಅಧ್ಯಕ್ಷೆ ಡಾ.ಆರತಿ ಪಟ್ರಮೆ ಉಪಸ್ಥಿತರಿದ್ದರು. ಕೋಶಾಧಿಕಾರಿ ಡಾ.ಸಿಬಂತಿ ಪದ್ಮನಾಭ ಕೆ.ವಿ. ಪ್ರಾಸ್ತಾವಿಕ ನುಡಿಗಳನ್ನಾಡಿ, ಸ್ವಾಗತಿಸಿದರು. ಕಾರ್ಯದರ್ಶಿ ಶಶಾಂಕ ಅರ್ನಾಡಿ ವಂದಿಸಿದರು. ಡಾ.ರಾಮಕೃಷ್ಣ ಭಟ್ ನಿರೂಪಿಸಿದರು. ಯಕ್ಷದೀವಿಗೆಯ ವಿದ್ಯಾರ್ಥಿಗಳಿಂದ ಬಭ್ರುವಾಹನ ಕಾಳಗ, ನರಕಾಸುರ ಮೋಕ್ಷ, ಇಂದ್ರಜಿತು ಕಾಳಗ ಎಂಬ ಯಕ್ಷಗಾನ ಪ್ರದರ್ಶನಗಳು ನಡೆದವು.

'ಯಕ್ಷದೀವಿಗೆ' ಸಂಸ್ಥೆಯ ದಶಮಾನೋತ್ಸವ ಆಚರಣೆಯ ಸಮಾರೋಪ ಸಮಾರಂಭವನ್ನು ಹಿರಿಯ ಯಕ್ಷಗಾನ ಕಲಾವಿದ ಹಾಗೂ ಬಹುಶ್ರುತ ವಿದ್ವಾಂಸ ಡಾ.ಎಂ.ಪ್ರಭಾಕರ ಜೋಶಿ ಉದ್ಘಾಟಿಸಿದರು.

ಉಪನ್ಯಾಸಕರ ಸಂಘದ ಅಧ್ಯಕ್ಷರಾಗಿ ಡಾ.ಶಂಕರಪ್ಪ

ಚಿಕ್ಕಬಳ್ಳಾಪುರ: 2026 ರಿಂದ 2031ರ 5 ವರ್ಷದ ಅವಧಿಗೆ ಕರ್ನಾಟಕ ರಾಜ್ಯ ಪದವಿಪೂರ್ವ ಉಪನ್ಯಾಸಕರ ಸಂಘದ ಅಧ್ಯಕ್ಷ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಡಾ.ಶಂಕರಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಮಧುಸೂಧನ್ ಆಯ್ಕೆಯಾಗಿದ್ದು ಉಪನ್ಯಾಸಕವರ್ಗ ಆತ್ಮೀಯವಾಗಿ ಅಭಿನಂದನೆ ಸಲ್ಲಿಸಿದ್ದಾರೆ.

ನಗರದ ಸರಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಭಾನುವಾರ ನಡೆದ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿ ಎರಡು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಒಟ್ಟು 125 ಮತಗಳ ಪೈಕಿ 119 ಮತಗಳು ಚಲಾವಣೆ ಆಗಿದ್ದವು. ಇದರಲ್ಲಿ ಡಾ.ಬಸವರಾಜ್ ಎಚ್.ಚಿಕ್ಕಣಜಿ 49 ಮತಗಳನ್ನು ಪಡೆದರೆ ಡಾ.ಶಂಕರಪ್ಪ ಅವರು 68 ಮತಗಳನ್ನು ಪಡೆಯುವ ಮೂಲಕ ಅಧ್ಯಕ್ಷರಾಗಿ ಆಯ್ಕೆಯಾದರು. ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಇಬ್ಬರು ಸ್ಪರ್ಧಿಸಿದ್ದು ಎಂ.ಸಿ.ನಾಗೇಶ್ 38 ಮತಗಳನ್ನು ಪಡೆದು ಪರಾಭವಗೊಂಡರೆ, ಮಧುಸೂಧನ್ ಅವರು 80 ಮತಗಳನ್ನು ಪಡೆದು ಜಯಶೀಲರಾಗಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಡಾ.ಸಿ.ಶಂಕರಪ್ಪ ನಮ್ಮ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಕೆ.ಎಚ್ .ನಿಂಗೇಗೌಡ ಅವರ ಬಣವು ಅಭೂತಪೂರ್ವ ಗೆಲುವು ಸಾಧಿಸಿದ್ದು ಜಿಲ್ಲೆಯಲ್ಲಿಯೂ ಅವರದೇ ಬಣ ಎಲ್ಲ 9 ಸ್ಥಾನಗಳಲ್ಲಿ ಜಯಶಾಲಿಯಾಗಿದೆ ಎಂದು ಹೇಳಲು ಸಂತೋಷವಾಗುತ್ತಿದೆ. ನಮ್ಮ ಬಣದ ಮೇಲೆ ವಿಶ್ವಾಸವಿಟ್ಟು ಮತಚಲಾಯಿಸಿದ ಎಲ್ಲ ಗೌರವಾನ್ವಿತ ಮತದಾರ ಉಪನ್ಯಾಸಕ ಬಂಧುಗಳಿಗೆ ಆಭಾರಿಯಾಗಿರುತ್ತೇವೆ. ನಿಮ್ಮ ಯಾವುದೇ ಸಮಸ್ಯೆ ಇರಲಿ ಕಾನೂನಿನ ಪರಿಮಿತಿಯಲ್ಲಿ ಅದನ್ನು ಈಡೇರಿಸುವ ಕೆಲಸ ಮಾಡಲಾಗುವುದು ಎಂದರು.

ಜಿಲ್ಲೆಯು ಫಲಿತಾಂಶ ಸುಧಾರಣೆಯಲ್ಲಿ 8ನೇ ಸ್ಥಾನದಲ್ಲಿದೆ. ಅದಕ್ಕೂ ಹಿಂದೆ 11, ಅದರ ಹಿಂದಿನ ವರ್ಷ 18ನೇ ಸ್ಥಾನದಲ್ಲಿತ್ತು. ಫಲಿತಾಂಶ ಸುಧಾರಣೆಗೆ ಕಾರಣವೇ ನಮ್ಮೆಲ್ಲಾ ಉಪನ್ಯಾಸಕರ ಬದ್ಧತೆ, ಪರಿಣಾಮಕಾರಿ ಬೋಧನೆ ಮತ್ತು ಸಮರ್ಪಣಾ ಭಾವವೇ ಆಗಿದೆ. ರಾಜ್ಯದಲ್ಲಿ 8ನೇ ಸ್ಥಾನಕ್ಕೆ ಏರಲು ನಮ್ಮೆಲ್ಲಾ ಉಪನ್ಯಾಸಕರ ಪರಿಶ್ರಮವೇ ಕಾರಣ ಎಂಬ ಹೆಮ್ಮೆ ನಮಗಿದೆ ಎಂದರು.

ಜಿಲ್ಲೆಯಲ್ಲಿ 21 ಸರಕಾರಿ ಪದವಿಪೂರ್ವ ಕಾಲೇಜು, 5 ಅನುದಾನಿತ ಕಾಲೇಜು, 4 ಆದರ್ಶ ಪದವಿಪೂರ್ವ ಕಾಲೇಜುಗಳಿವೆ. 200 ಉಪನ್ಯಾಸಕರಿದ್ದು ಈ ಚುನಾವಣೆಯಲ್ಲಿ 125 ಮತದಾರರಿದ್ದು 119 ಮಂದಿ ಮತಚಲಾಯಿಸಿದ್ದಾರೆ ಎಂದರು.

2026 ರಿಂದ 2031ರ 5 ವರ್ಷದ ಅವಧಿಗೆ ಆಯ್ಕೆಯಾಗಿರುವ ಕರ್ನಾಟಕ ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘದ ನೂತನ ಸಮಿತಿ ಹೀಗಿದೆ: ಅಧ್ಯಕ್ಷರಾಗಿ ಡಾ.ಶಂಕರಪ್ಪ, ಕಾರ್ಯಾಧ್ಯಕ್ಷರಾಗಿ ಕೃಷ್ಣಪ್ಪ ಎಂ.ಎನ್., ರೆಡ್ಡಮ್ಮ ಉಪಾಧ್ಯಕ್ಷರು, ಶಾಂತರಾಜು.ಎ. ಖಜಾಂಚಿ, ಕೆ.ಎನ್.ಶ್ರೀನಿವಾಸಯ್ಯ ಪ್ರಧಾನ ಸಂಘಟನಾ ಕಾರ್ಯದರ್ಶಿ, ಕೆ.ಶ್ರೀನಿವಾಸ್ ಕಾರ್ಯದರ್ಶಿ, ಬಿ.ಕೆ. ರವಿ ಜಂಟಿ ಕಾರ್ಯದರ್ಶಿ, ಮುನಿರಾಜು ಎಚ್. ಸಿ.ಸಂಚಾಲಕರು.

ಪಿಯು ಉಪನ್ಯಾಸಕ ಸಂಘದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಡಾ.ಶಂಕರಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಮಧುಸೂಧನ್ ಆಯ್ಕೆಯಾಗಿದ್ದುಅವರನ್ನು ಅಭಿನಂದಿಸಲಾಯಿತು.

ಕೃತಿಗಳು ಮನಸ್ಸಿಗೆ ನಾಟುವಂತಿರಲಿ

ಚಿಕ್ಕನಾಯಕನಹಳ್ಳಿ: ಪುಸ್ತಕಗಳು ಮನುಷ್ಯನ ಮನಸ್ಸಿಗೆ ತಟ್ಟುವಂತಿರಬೇಕು. ಯಾರೇ ಬರೆಯಲಿ, ಎಲ್ಲರ ಬರವಣಿಗೆಯ ಗುರಿ ಒಂದೇ ಆಗಿರುತ್ತದೆ. ಸಾಗುವ ದಾರಿ ಬೇರೆಯಾದರೂ ಕೊನೆಗೆ ಸೇರುವ ಗುರಿ ಜನರ ಹಾಗೂ ಸಮಾಜದ ಕಲ್ಯಾಣವೇ ಆಗಿದೆ. ಆದ್ದರಿಂದ ಪುಸ್ತಕಗಳು ಇಂದು ಸಮಾಜದ ಆಸ್ತಿಯಾಗಬೇಕಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಎಂ.ಎಸ್.ರವಿಕುಮಾರ್ ತಿಳಿಸಿದರು.

ಪಟ್ಟಣದ ಕನ್ನಡ ಸಂಘದ ವೇದಿಕೆಯಲ್ಲಿ ತುಮಕೂರಿನಲ್ಲಿ ನಡೆಯಲಿರುವ 'ಪುಸ್ತಕ ಸಂತೆ' ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕಾದ ಅಗತ್ಯವಿದೆ. ಆದರೆ ಪ್ರಸ್ತುತ ಯಾವ ಪುಸ್ತಕ ಓದಬೇಕು ಎಂಬುದರಲ್ಲೇ ಗೊಂದಲಗಳಿವೆ. ಕಾಟಾಚಾರಕ್ಕೆ ಬರೆಯುವಂತಹ ಪುಸ್ತಕಗಳೇ ಹೆಚ್ಚಾಗುತ್ತಿವೆ. ಇದರ ನಡುವೆ ನಮ್ಮಲ್ಲಿ ಸಾಮರಸ್ಯ ಬೆಳೆಸುವ ಹಾಗೂ ನಮ್ಮ ಸಮಸ್ಯೆಗಳನ್ನು ಹೋಗಲಾಡಿಸುವಂತಹ ಪುಸ್ತಕಗಳನ್ನು ನಾವು ಓದಬೇಕಿದೆ. ಉತ್ತಮ ಓದುಗ ಮಾತ್ರ ಒಬ್ಬ ಉತ್ತಮ ಬರಹಗಾರನಾಗಲು ಸಾಧ್ಯ. ಪ್ರತಿಯೊಬ್ಬರ ಜ್ಞಾನವನ್ನು ಹೆಚ್ಚಿಸುವ ಕೆಲಸವನ್ನು ಓದು ಮಾಡುತ್ತದೆ. ಇಂತಹ ಪುಸ್ತಕ ಸಂತೆಯ ಮೂಲಕ ಪುಸ್ತಕಗಳು ಕನ್ನಡ ಮನಸ್ಸುಗಳನ್ನು ಮುಟ್ಟುವಂತಾಗಲಿ ಮತ್ತು ಕನ್ನಡ ಕಟ್ಟುವ ಕೆಲಸವಾಗಲಿ ಎಂದು ಆಶಿಸಿದರು.

ಪುಸ್ತಕ ಸಂತೆಯ ಸಂಚಾಲಕ ಶ್ರೀನಿವಾಸ್ ಮಾತನಾಡಿ, ಕನ್ನಡ ಪುಸ್ತಕಗಳಿಗೆ ಭವ್ಯ ವೇದಿಕೆ ಕಲ್ಪಿಸುವ ಮೂಲಕ ಓದುಗರನ್ನು ಹೆಚ್ಚಿಸುವ ಹಾಗೂ ಬರಹಗಾರರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ತುಮಕೂರಿನ ಗಾಜಿನ ಮನೆಯಲ್ಲಿ ಇದೇ ತಿಂಗಳ 26, 27 ಮತ್ತು 28 ರಂದು ಮೂರು ದಿನಗಳ ಕಾಲ 'ಪುಸ್ತಕ ಸಂತೆ'ಯನ್ನು ಆಯೋಜಿಸಲಾಗಿದೆ. ಜಿಲ್ಲೆಯ ಪ್ರತಿಯೊಂದು ಗ್ರಾಮದ, ಪ್ರತಿಯೊಂದು ಕುಟುಂಬದವರೂ ಬಂದು ಈ ಸಂತೆಯನ್ನು ನೋಡಿ, ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು.

ಈ ಕಾರ್ಯಕ್ರಮದಲ್ಲಿ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಹಿರಿಯ ಸಾಹಿತಿಗಳ ಸಮಾಗಮ, ಲೇಖಕರ ಭಾಗಿತ್ವದ ಜತೆಗೆ ಆರೋಗ್ಯ ಶಿಬಿರ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕಸಾಪ ಪ್ರಧಾನ ಕಾರ್ಯದರ್ಶಿ ಸಿ.ರವಿಕುಮಾರ್, ಪುಸ್ತಕ ಸಂತೆಯ ಸಂಚಾಲಕರುಗಳಾದ ಪ್ರಶಾಂತ್, ಗೋವರ್ದನ್, ಶಿವರುದ್ರಪ್ಪ, ನರಸಿಂಹಮೂರ್ತಿ, ರಂಗನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ರಾಮಚಂದ್ರಗೌಡರ ತೋಟದ ಮನೆಯಲ್ಲಿ ಚಂಡಿಕಾಹೋಮ | ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ 2028ಕ್ಕೆ ಧೂಳಿಪಟ

ಚಿಕ್ಕಬಳ್ಳಾಪುರದ 4 ಸ್ಥಾನಗಳಲ್ಲಿ ಬಿಜೆಪಿ ಗೆಲ್ಲುವ ವಿಶ್ವಾಸ: ಜಿಲ್ಲಾಧ್ಯಕ್ಷ

ವಿಶ್ವವಾಣಿ ಸುದ್ದಿಮನೆ ಚಿಕ್ಕಬಳ್ಳಾಪುರ

2028ಕ್ಕೆ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ ಖಂಡಿತವಾಗಿ ಬಿಜೆಪಿ ಪಕ್ಷದ ಎಂಎಲ್‌ಎ ಆಯ್ಕೆಯಾಗಿ ಜನಸೇವೆಗೆ ಸಂಕಲ್ಪತೊಡಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ ತಿಳಿಸಿದರು.

ಚಿಂತಾಮಣಿ ತಾಲೂಕಿನ ಸೀಕಲ್ ಗ್ರಾಮದಲ್ಲಿರುವ ರಾಮಚಂದ್ರಗೌಡರ ತೋಟದ ಮನೆಯಲ್ಲಿ ಏರ್ಪಡಿಸಿದ್ದ ಚಂಡಿಕಾಹೋಮ ಹಾಗೂ ಸತ್ಯನಾರಾಯಣ ಪೂಜೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಮಾಧ್ಯಮದವರನ್ನು ಉದ್ದೇಶಿಸಿ ಅವರು ಮಾತನಾಡಿದರು.

ದೇಶದಲ್ಲಿ ಮಾತ್ರವಲ್ಲದೆ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಕೂಡ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು ಕೆಲಸ ಮಾಡುತ್ತಿರುವುದನ್ನು ನೋಡಿ ಭಾರತೀಯರು ಬಿಜೆಪಿ ಪಕ್ಷವನ್ನು ಹರಸಿ ಹಾರೈಸಿದ್ದಾರೆ. ಇದೇ ಕಾರಣವಾಗಿ ಮೂರನೇ ಅವಧಿಗೂ ಕೂಡ ಅವರು ಪ್ರಧಾನಿಯಾಗಿ ಮುಂದುವರೆಯುವ ಮೂಲಕ ದೇಶವನ್ನು ಸಂಕಷ್ಟದಿಂದ ಪಾರು ಮಾಡಿದ್ದಾರೆ. ಹೀಗಾಗಿ ದೇಶದ ಬಹುತೇಕ ರಾಜ್ಯಗಳಲ್ಲಿ ನಮ್ಮ ಅಧಿಕಾರದಲ್ಲಿದೆ. 2028ಕ್ಕೆ ರಾಜ್ಯದಲ್ಲಿಯೂ ಕೂಡ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತವಾಗಿದ್ದು ಶಿಡ್ಲಘಟ್ಟದಲ್ಲಿ ಕೂಡ ಬಿಜೆಪಿ ಅಭ್ಯರ್ಥಿಯೇ ಎಂಎಲ್‌ಎ ಆಗುವ ವಿಶ್ವಾಸವಿದೆ ಎಂದರು.

ಎರಡನೇ ಅವಧಿಯಲ್ಲಿ ಗ್ಯಾರೆಂಟಿಗಳ ಭಾರದಲ್ಲಿ ಜನಮೆಚ್ಚುವ ರೀತಿಯಲ್ಲಿ ಕೆಲಸ ಮಾಡಲಾಗಿಲ್ಲ ಎಂಬುದೇ ಸತ್ಯ. ಈ ಸತ್ಯ ಅರಿವಾದ ಕೂಡಲೇ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ನಿರುಮ್ಮಳವಾಗಿ ಅಧಿಕಾರ ಬಿಟ್ಟುಕೊಟ್ಟಿದ್ದಾರೆ. ಈಗಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಸಬೇಕು ಎಂಬ ಹಂಬಲ ಹೊಂದಿದ್ದರೂ ಕಾಂಗ್ರೆಸ್ ನ ಈಗಿನ ಸ್ಥಿತಿ ಮನೆಯೊಂದು ನಾಲ್ಕು ಬಾಗಿಲು ಎಂಬತಾಗಿದೆ. ಸರಕಾರ ಟೇಕಾಫ್ ಆಗುವ ಮೊದಲೇ ಖಾತೆ ಖ್ಯಾತೆ ಮಿತಿಮೀರಿದೆ. ನನ್ನ ಪ್ರಕಾರ 2ವರ್ಷ ಕೂಡ ಅಧಿಕಾರದಲ್ಲಿ ಇರುವುದೇ ಅನುಮಾನ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್‌ನ ಆಂತರಿಕ ಕಲಹ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಬರಡಾಗಿರುವ ರಾಜ್ಯ ಖಜಾನೆ ಅಥವಾ ಭಂಡಾರ ಈಡೇರಿಸಲಾಗದ ಭರವಸೆಗಳ ಭಾರಕ್ಕೆ ಸಿಕ್ಕಿ ನಲಗಿರುವ ರಾಜ್ಯದ ಕಾಂಗ್ರೆಸ್ ಸರಕಾರ 2028ಕ್ಕೆ ಧೂಳಿಪಟ ಆಗುವುದು ಖಚಿತ. ಬಿಜೆಪಿ ಅಧಿಕಾರಕ್ಕೆ ಬರುವುದು ಅಷ್ಟೇ ಖಚಿತ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 4 ಸ್ಥಾನಗಳನ್ನು ಬಿಜೆಪಿ ತನ್ನದಾಗಿಸಿಕೊಳ್ಳುವುದೂ ಕೂಡ ಅಷ್ಟೇ ಸತ್ಯ ಎಂದು ಭರವಸೆಯ ಮಾತುಗಳಾಡಿದರು.

ಜಿಲ್ಲೆಯಲ್ಲಿ ಜನತೆಯ ಕಷ್ಟಗಳು ದೂರವಾಗಬೇಕು. ಸಕಾಲಕ್ಕೆ ಮುಂಗಾರು ಜಿಲ್ಲೆಯನ್ನು ಪ್ರವೇಶಿಸಿ ರೈತರು ಜನಜಾನುವಾರುಗಳ ಬದುಕಿಗೆ ಆಶ್ರಯವಾಗಲಿ ಎಂಬ ಸದುದ್ದೇಶದಿಂದ ಚಂಡಿಕಾಹೋಮ ಹಾಗೂ ಸತ್ಯನಾರಾಯಣ ವ್ರತವನ್ನು ಏರ್ಪಡಿಸಲಾಗಿದೆ. ಈ ಪೂಜೆಯಲ್ಲಿ ಜಿ.ಟಿ.ದೇವೇಗೌಡ, ಆನಂದಗುರೂಜಿ, ಕರುನಾಡ ಚಕ್ರವರ್ತಿ ಡಾ.ಶಿವರಾಜಕುಮಾರ್, ನಿರ್ದೇಶಕ ಆರ್.ಚಂದ್ರು ಸೇರಿದಂತೆ ನಾಡಿನ ನಾನಾ ಗಣ್ಯರು ಬಂದು ದೇವರ ಕೃಪೆಗೆ ಪಾತ್ರವಾಗಿದ್ದಾರೆ. ಬಂದಿದ್ದ ಎಲ್ಲರಿಗೂ ದೇವರ ಪ್ರಸಾದ ವಿನಿಯೋಗ ಮಾಡಲಾಗಿದೆ. ದೇವರ ಕೃಪೆಯೆಂಬಂತೆ ಮಳೆಬರುವ ಸೂಚನೆ ಕಾಣಿಸುತ್ತಿದೆ ಎಂದರು.

ಈ ವೇಳೆ ಸೀಕಲ್ ರಾಮಚಂದ್ರಗೌಡ, ಆನಂದ್ ಗೌಡ ಕುಟುಂಬ ಪರಿವಾರದವರು ಹಾಜರಿದ್ದು ದೇವತಾ ಕಾರ್ಯಗಳು ಸಾಂಗವಾಗಿ ನಡೆಯುವಂತೆ ನೋಡಿಕೊಂಡರು.

ಮಾಧ್ಯಮದವರನ್ನು ಉದ್ದೇಶಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ ಮಾತನಾಡಿದರು.

ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಳ ಆಗಿದೆ ಎಂದು ಕಾಂಗ್ರೆಸ್ ಸೇರಿದಂತೆ ಎಲ್ಲ ವಿರೋಧ ಪಕ್ಷಗಳು ಖಂಡಿಸುತ್ತಿವೆ. ಆದರೆ ನಿಜವಾದ ಭಾರತೀಯರು ಯಾರೂ ಕೂಡ ಖಂಡಿಸುವುದಿಲ್ಲ. ಕಾರಣ ನೆರೆ ರಾಷ್ಟ್ರಗಳಿಗಿಂತ ಭಾರತದಲ್ಲಿಯೇ ಬೆಲೆ ಕಡಿಮೆಯಿದೆ ಎಂಬುದು ಬುದ್ಧಿವಂತರಿಗೆ ಮಾತ್ರ ಅರ್ಥವಾಗಲಿದೆ. ದೇಶಕ್ಕೆ ತಮ್ಮಿಡೀ ಬದುಕನ್ನು ಮೀಸಲಾಗಿಟ್ಟ ಏಕೈಕ ಪ್ರಧಾನಿ ನರೇಂದ್ರ ಮೋದಿ ಆಗಿದ್ದಾರೆ.

-**ಸೀಕಲ್ ರಾಮಚಂದ್ರಗೌಡ**, ಬಿಜೆಪಿ ಜಿಲ್ಲಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ಜ್ವರೆವ್‌ಗೆ ಫ್ರೆಂಚ್ ಓಪನ್ ಕಿರೀಟ

ಪ್ಯಾರಿಸ್: ಇಲ್ಲಿ ಭಾನುವಾರ ನಡೆದ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವರೆವ್ ಫ್ರೆಂಚ್ ಓಪನ್ ಕಿರೀಟವನ್ನು ಮುಡಿಗೇರಿಸಿ ಕೊಂಡರು. ಅಂತಿಮ ಹಣಾಹಣಿಯಲ್ಲಿ ಅವರು ಇಟಲಿಯ ಫ್ಯಾಬಿಯೊ ಕೊಬೆಲ್ಲಾ ಅವರನ್ನು 6-1, 4-6, 6-4, 6-7 (5-7), 6-1 ಸೆಟ್‌ಗಳಿಂದ ಸೋಲಿಸಿದರು. ಫೈನಲ್ ಪಂದ್ಯವು ತೀವ್ರ ಹಣಾಹಣಿಯಿಂದ ಕೂಡಿತ್ತು, ಹಾಗಾಗಿ ಸುಮಾರು ಮೂರೂವರೆ ತಾಸುಗಳ ವರೆಗೂ ಮುಂದುವರಿ ಯಿತು. ಮೊದಲ ಸೆಟ್ ಅನ್ನು ಜ್ವರೆವ್ ಬಹಳ ಸುಲಭವಾಗಿ ಗೆದ್ದರು. ಆದರೆ 2ನೇ ಸೆಟ್‌ನಲ್ಲಿ ಕೊಬೆಲ್ಲಾ ಅವರು ಮೇಲುಗೈ ಸಾಧಿಸಿ ಸೆಟ್ ಅನ್ನು ಸರಿಸಮ ಮಾಡಿದರು. 3ನೇ ಸೆಟ್ ಅನ್ನು ಜ್ವರೇವ್ ಮತ್ತೆ ಗೆದ್ದರು. ಪಂದ್ಯದುದ್ದಕ್ಕೂ ತೀವ್ರ ಹಣಾಹಣಿ ಕಂಡುಬಂತು. ಸೆಮಿ ಫೈನಲ್ ಪಂದ್ಯದಲ್ಲಿ ಜಾಕುಬ್ ಮುನ್ಸಿಕ್ ವಿರುದ್ಧ ಜ್ವರೆವ್ ಗೆದ್ದು ಫೈನಲ್ ಪ್ರವೇಶಿಸಿದ್ದರೆ, ಕೊಬೆಲ್ಲಿ ಮಾರ್ಟಿಯೋ ಅರ್ನಾಲ್ಡಿ ವಿರುದ್ಧ ಸೆಣಸಾಡಿ ಫೈನಲ್ ಪ್ರವೇಶಿಸಿದ್ದರು.

ತೆಲಂಗಾಣ ಟಿ20: ತಿಲಕ್‌ಗೆ ಬೇಡಿಕೆ

ಹೈದರಾಬಾದ್: ಭಾನುವಾರ ನಡೆದ ಉದ್ಘಾಟನಾ ತೆಲಂಗಾಣ ಟಿ20ಲೀಗ್‌ನ ಆಟಗಾರರ ಹರಾಜಿನಲ್ಲಿ ತಿಲಕ್ ವರ್ಮಾ ಅತೀ ಹೆಚ್ಚು ಮೌಲ್ಯದ ಆಟಗಾರನಾಗಿ ಹೊರಹೊಮ್ಮಿದರು, 33 ಲಕ್ಷಕ್ಕೆ ಮೇಡಕ್ ಫಾಲ್ಕನ್ಸ್ ತಂಡವನ್ನು ಅವರು ಸೇರಿಕೊಂಡರು. ಮುಂಬರುವ ಐರ್ಲೆಂಡ್ ಮತ್ತು ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿರುವ ಭಾರತ ಕ್ರಿಕೆಟ್ ತಂಡದ ಉಪನಾಯಕರಾಗಿ ತಿಲಕ್ ವರ್ಮಾ ಅವರನ್ನು ನೇಮಕ ಮಾಡಿದ ಮರುದಿನವೇ ತೆಲಂಗಾಣ ಟಿ20ಲೀಗ್‌ನಲ್ಲಿ ಉತ್ತಮ ಮೊತ್ತಕ್ಕೆ ಅವರು ಹರಾಜಾದರು.ಟೀಮ್ ಇಂಡಿಯಾ ವೇಗಿ ಮೊಹಮ್ಮದ್ ಸಿರಾಜ್ 14 ಲಕ್ಷಕ್ಕೆ ವಾರಂಗಲ್ ವಾರಿಯರ್ಸ್ ತಂಡ ಸೇರಿದರು. ಹರಾಜಿನಲ್ಲಿ 1,300ಕ್ಕೂ ಹೆಚ್ಚು ಹೈದರಾಬಾದ್ ಮೂಲದ ಆಟಗಾರರು ಹೆಸರು ನೋಂದಾಯಿಸಿದ್ದರು. ತೆಲಂಗಾಣದ ಪ್ರೀಮಿಯರ್ ಟಿ20 ಲೀಗ್‌ನ ಫ್ರಾಂಚೈಸಿಗಳು ವಿವಿಧ ವಿಭಾಗಗಳಲ್ಲಿ ಆ ರಾಜ್ಯದ ಅತ್ಯುತ್ತಮ ಕ್ರಿಕೆಟ್ ಪ್ರತಿಭೆಗಳನ್ನು ಪಡೆದುಕೊಳ್ಳುವ ಮೂಲಕ ತಮ್ಮ ತಂಡಗಳನ್ನು ಪ್ರಕಟಿಸಿತು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಪಂತ್, ಸುತಾರ್ ಭರ್ಜರಿ ಪ್ರದರ್ಶನ | ಭಾರತದ ಬಿಗಿ ಹಿಡಿತದಲ್ಲಿ ಏಕೈಕ ಟೆಸ್ಟ್

ಫಾಲೋಆನ್ ಭೀತಿಯಲ್ಲಿ ಆಫ್ಘನ್

ಮುಲ್ಲನ್‌ಪುರ: ಭಾರತದ ವಿರುದ್ಧ ಏಕೈಕ ಟೆಸ್ಟ್ ಪಂದ್ಯದಲ್ಲಿ ಅಫ್ಘಾನಿಸ್ತಾನ ಫಾಲೋ ಆನ್ ಭೀತಿಯಲ್ಲಿದೆ. ಭಾರತ 8 ವಿಕೆಟ್‌ಗೆ 564 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡ ಬಳಿಕ, ಆಫ್ಘನ್ 113 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದು, ಇನ್ನೂ 451 ರನ್‌ಗಳ ಹಿನ್ನಡೆಯಲ್ಲಿದೆ. ಮೂರು ದಿನಗಳ ಆಟ ಬಾಕಿ ಇರುವ ಕಾರಣ ಭಾರತ ಪಂದ್ಯದಲ್ಲಿ ಸುಲಭ ಗೆಲುವು ಸಾಧಿಸುವ ನಿರೀಕ್ಷೆಯಲ್ಲಿದೆ.

ಟೀಮ್ ಇಂಡಿಯಾದ ಬೃಹತ್ ಮೊತ್ತವನ್ನು ಬೆನ್ನಟ್ಟಲಾರಂಭಿಸಿದ ಆಫ್ಘನ್ ತಂಡಕ್ಕೆ ಪದಾರ್ಪಣ ಪಂದ್ಯವನ್ನಾಡಿದ ಮಾನವ್ ಸುತಾರ್ ತಾನು ಎಸೆದ ಮೊದಲ ಓವರ್‌ನಲ್ಲಿಯೇ ಆಘಾತ ನೀಡಿದರು. ಅಬ್ದುಲ್ ಮಲಿಕ್ (16) ವಿಕೆಟ್ ಕಿತ್ತು ಚೊಚ್ಚಲ ಅಂತಾರಾಷ್ಟ್ರೀಯ ವಿಕೆಟ್ ಪಡೆದರು. ದಿನದಾಟದ ಅಂತ್ಯಕ್ಕೆ ಅವರು 21 ರನ್‌ಗೆ ಒಟ್ಟಾರೆ ಮೂರು ವಿಕೆಟ್ ಕಿತ್ತರು. ರಹಮತ್ ಶಾ 43 ರನ್ ಗಳಿಸಿ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಅಫ್ಸರ್ ಜಜೈ (3) ವಿಕೆಟ್ ಪತನಗೊಳ್ಳುತ್ತಿದ್ದಂತೆ ದಿನದಾಟ ಮುಕ್ತಾಯಗೊಳಿಸಲಾಯಿತು. ನಾಯಕ ಹಶ್ಮತುಲ್ಲಾ ಶಾಹಿದಿ(20), ಆರಂಭಕಾರ ಸೇದಿಕುಲ್ಲಾ ಅಟಲ್(17) ಸಣ್ಣ ಮೊತ್ತಕ್ಕೆ ವಿಕೆಟ್ ಕಳೆದುಕೊಂಡರು. ಕನ್ನಡಿಗ ಪ್ರಸಿದ್ಧ್ ಕೃಷ್ಣ 2 ವಿಕೆಟ್ ಪಡೆದರು.

ಇದಕ್ಕೂ ಮುನ್ನ 3 ವಿಕೆಟ್ ನಷ್ಟಕ್ಕೆ 368 ರನ್ ಗಳಿಸಿದ್ದಲ್ಲಿಂದ ಭಾನುವಾರ 2ನೇ ದಿನದಾಟ ಆರಂಭಿಸಿದ ಭಾರತ 196 ರನ್ ಕಲೆಹಾಕಿ ಒಟ್ಟಾರೆ 564ರನ್ ಗಳಿಸಿತು. 103 ರನ್ ಗಳಿಸಿದ್ದ ಶುಭ್‌ಮನ್ ಗಿಲ್ 23 ರನ್ ಸೇರಿಸಿ 126 ರನ್ ಆದಾಗ ಔಟ್ ಆದರು. 50 ರನ್ ಗಳಿಸಿದ್ದ ರಿಷಭ್ ಪಂತ್ ತಮ್ಮ ಮೊತ್ತವನ್ನು 81ರನ್ ವರೆಗೂ ಕೊಂಡೊಯ್ದರು. ಈ ಜೋಡಿ 4 ವಿಕೆಟ್‌ಗೆ 169 ರನ್ ಒಟ್ಟುಗೂಡಿಸಿತು.

2ನೇ ದಿನದಾಟದಲ್ಲಿ ವಾಷಿಂಗ್ಟನ್ ಸುಂದರ್ ಅಜೇಯ ಅರ್ಧಶತಕ ಬಾರಿಸಿ ಮಿಂಚಿದರು. 7ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಸುಂದರ್ 68 ಎಸೆತಗಳಿಂದ 52 ರನ್ ಬಾರಿಸಿದರು. ಅವರ ಅರ್ಧಶತಕ ಪೂರ್ತಿಗೊಳಿಸುತ್ತಿದ್ದಂತೆ ಭಾರತ ಡಿಕ್ಲೇರ್ ಘೋಷಿಸಿತು.

ಬೌಲಿಂಗ್ ಮಾತ್ರವಲ್ಲದೆ ಬ್ಯಾಟಿಂಗ್‌ನಲ್ಲಿಯೂ ಮಿಂಚಿದ ಆಲ್‌ರೌಂಡರ್ ಮಾನವ್ ಸುತಾರ್ ತಲಾ ಎರಡು ಸಿಕ್ಸರ್ ಮತ್ತು ಬೌಂಡರಿ ನೆರವಿನಿಂದ 28ರನ್ ಗಳಿಸಿದರು. ಅಂತಿಮ ಹಂತದಲ್ಲಿ ವೇಗಿ ಮೊಹಮ್ಮದ್ ಸಿರಾಜ್ 22 ರನ್ ಕೊಡುಗೆ ನೀಡಿದರು. ಆಫ್ಘನ್ ಪರ ಉತ್ತಮ ಬೌಲಿಂಗ್ ದಾಳಿ ನಡೆಸಿದ ಮೊಹಮ್ಮದ್ ಸಲೀಂ 6 ವಿಕೆಟ್ ಪಡೆದರು.

ರಿಷಭ್ ಪಂತ್ ಭರ್ಜರಿ ಆಟ.

ಸುತಾರ್ ಆಲ್‌ರೌಂಡ್ ಪ್ರದರ್ಶನ.

ಸಂಕ್ಷಿಪ್ತ ಸ್ಕೋರ್

ಭಾರತ ಪ್ರ.ಇನಿಂಗ್ಸ್: 564/8 ಡಿಕ್ಲೇರ್ಡ್ (ಗಿಲ್ 126, ರಾಹುಲ್ 100, ಪಂತ್ 81, ಸುಂದರ್ 52, ಮೊಹಮ್ಮದ್ ಸಲೀಂ 140 ರನ್‌ಗೆ 6 ವಿಕೆಟ್)

ಆಫ್ಘನ್ ಪ್ರ.ಇನ್ನಿಂಗ್ಸ್: 113/5 (ರಹಮತ್ ಶಾ 43, ಮಾನವ್ ಸುತಾರ್ 21 ರನ್‌ಗೆ 3 ವಿಕೆಟ್, ಪ್ರಸಿದ್ಧ್ ಕೃಷ್ಣ 27 ರನ್‌ಗೆ 2 ವಿಕೆಟ್)

ನ್ಯೂಜಿಲೆಂಡ್ ವಿರುದ್ಧ ಇಂಗ್ಲೆಂಡ್‌ಗೆ ಜಯ

ಲಾರ್ಡ್ಸ್: ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ನಡುವೆ ನಡೆದ ಐತಿಹಾಸಿಕ ಲಾರ್ಡ್ಸ್ ಮೊದಲ ಟೆಸ್ಟ್ ಪಂದ್ಯದ 4ನೇ ದಿನವಾದ ಭಾನುವಾರ ಆತಿಥೇಯ ಇಂಗ್ಲೆಂಡ್ ತಂಡವು ನ್ಯೂಜಿಲೆಂಡ್ ತಂಡವನ್ನು 115 ರನ್‌ಗಳಿಂದ ಮಣಿಸಿ 3 ಪಂದ್ಯಗಳ ಸರಣಿಯಲ್ಲಿ 1-0 ಅಂತರದ ಮುನ್ನಡೆ ಪಡೆದುಕೊಂಡಿದೆ.

ಗೆಲುವಿಗೆ 254 ರನ್‌ಗಳ ಗುರಿ ಪಡೆದಿದ್ದ ನ್ಯೂಜಿಲೆಂಡ್ ಕೇವಲ 40.3 ಓವರ್ ಬ್ಯಾಟಿಂಗ್ ಮಾಡಿ 138 ರನ್ ಕಲೆ ಹಾಕುವುದರೊಳಗೆ ತನ್ನಲ್ಲೇ ವಿಕೆಟ್ ಕಳೆದುಕೊಂಡು ಹೀನಾಯ ಸೋಲು ಅನುಭವಿಸಿತು. ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ಕೇವಲ 140 ರನ್ ಕಲೆ ಹಾಕಲಷ್ಟೇ ಶಕ್ತವಾಯಿತು. ಇಂಗ್ಲೆಂಡ್ ಬೌಲರ್‌ಗಳ ಮುಂದೆ ಮಂಡಿಯೂರಿದ ನ್ಯೂಜಿಲೆಂಡ್ ಕೇವಲ 113 ರನ್‌ಗಳಿಗೆ ತನ್ನ ಮೊದಲ ಇನ್ನಿಂಗ್ಸ್ ಮುಗಿಸಿತು. ಇಂಗ್ಲೆಂಡ್ ಎರಡನೇ ಇನಿಂಗ್ಸ್ ಅದ್ಭುತ ಬ್ಯಾಟಿಂಗ್ ಪ್ರದರ್ಶಿಸಿ 226 ರನ್ ಕಲೆ ಹಾಕಿತು. ತಂಡದ ಪರ ಎಮಿಲಿಯೊ ಗೇ ನಿರ್ಣಾಯಕ 57 ರನ್‌ಗಳ ಇನಿಂಗ್ಸ್ ಆಡಿದರೆ, ಜೇಮೀ ಸ್ಮಿತ್ ಕೂಡ 39 ರನ್ ಬಾರಿಸಿದರು. ಕೊನೆಯಲ್ಲಿ ಓಲ್ಲಿ ರಾಬಿನ್ಸನ್ 29 ರನ್ ಬಾರಿಸಿ ತಂಡ ಉತ್ತಮ ಸ್ಕೋರ್ ತಲುಪಲು ಸಹಾಯ ಮಾಡಿದರು.

ಫಿಫಾ ವಿಶ್ವಕಪ್ ಪ್ರಶಸ್ತಿ ಗೆಲ್ಲುವ ತಂಡದ ಬಗ್ಗೆ ಗರಿಗೆದರಿದ ನಿರೀಕ್ಷೆ | ಭಾರೀ ಕುತೂಹಲ

ಫ್ರಾನ್ಸ್ ಫೇವರಿಟ್: ಎಐ ಭವಿಷ್ಯವಾಣಿ

ಮೆಕ್ಸಿಕೋ: ಫಿಫಾ ವಿಶ್ವಕಪ್ ಪ್ರಾರಂಭವಾಗಲು ಬೆರಳೆಣಿಕೆಯ ದಿನಗಳು ಬಾಕಿ ಉಳಿದಿದ್ದು, ಅನೇಕ ಆಟಗಾರರಿಗೆ ಇದು ಕೊನೆಯ ವಿಶ್ವಕಪ್ ಫುಟ್ಬಾಲ್ ಎಂದೇ ಹೇಳಲಾಗುತ್ತಿದೆ, ಆದ್ದರಿಂದ ಈ ಸಲದ ಟೂರ್ನಿಯ ಬಗ್ಗೆ ನಿರೀಕ್ಷೆಗಳು ಬಹಳಷ್ಟು ಹೆಚ್ಚಾಗಿದೆ. ಈ ಬಾರಿ ಫಿಫಾ ವಿಶ್ವಕಪ್ ಗೆಲ್ಲುವ ಫೇವರಿಟ್ ತಂಡ ಯಾವುದು ಎಂಬ ಬಗ್ಗೆ ಅನೇಕರು ಈಗಾಗಲೇ ಭವಿಷ್ಯವಾಣಿ ನುಡಿದಿದ್ದಾರೆ. ಇದೀಗ ವಿವಿಧ ಕೃತಕ ಬುದ್ಧಿಮತ್ತೆ (ಎ.ಐ) ಪರಿಕರಗಳು ಈ ವರ್ಷದ ಫುಟ್ಬಾಲ್ ವಿಶ್ವಕಪ್ ವಿಜೇತ ತಂಡ ಯಾವುದು ಎಂಬ ಬಗ್ಗೆಯೂ ಭವಿಷ್ಯವಾಣಿ ನುಡಿಯ ತೊಡಗಿದೆ.

ಈ ಬಾರಿ ಟ್ರೋಫಿ ಗೆಲ್ಲುವು ಫೇವರಿಟ್ ತಂಡ ಫ್ರಾನ್ಸ್ ಆಗಿರಲಿದೆ ಎಂದು ಹೆಚ್ಚಿನ ಎ.ಐ ಪರಿಕರಗಳು ಭವಿಷ್ಯ ನುಡಿದಿವೆ. 2018ರ ಚಾಂಪಿಯನ್ ಫ್ರಾನ್ಸ್ ತಂಡವು 2022ರ ಕತಾರ್ ವಿಶ್ವಕಪ್ ಫೈನಲ್‌ನ ಶೂಟೌಟ್‌ನಲ್ಲಿ ಅರ್ಜೆಂಟೀನಾ ವಿರುದ್ಧ ಸೋಲನ್ನು ಕಂಡಿತ್ತು. ಆದರೆ ಈ ಬಾರಿಯೂ ಬಲಿಷ್ಠ ತಂಡದೊಂದಿಗೆ ಅಖಾಡಕ್ಕಿಳಿಯುತ್ತಿರುವ ಫ್ರಾನ್ಸ್ ತಂಡವು ಪ್ರಶಸ್ತಿಯನ್ನು ಗೆಲ್ಲುವ ಹೆಚ್ಚಿನ ಅವಕಾಶವನ್ನು ಹೊಂದಿದೆ ಎಂದು ಹೆಚ್ಚಿನ ಎ.ಐ ಪರಿಕರಗಳು ಭವಿಷ್ಯವಾಣಿ ನುಡಿದಿವೆ. ಎ.ಐ ಟೂಲ್ ಕೋ-ಪೆಲೆಟ್ ಕೂಡಾ ಫ್ರಾನ್ಸ್ ಈ ವರ್ಷದ ವಿಶ್ವಕಪ್ ಗೆಲ್ಲುತ್ತದೆ ಎಂದು ಭವಿಷ್ಯ ನುಡಿದಿದೆ. ಅದು ಟೂರ್ನಿ ಯುದ್ದಕ್ಕೂ ಸ್ಥಿರತೆಯನ್ನು ಕಾಪಾಡಬಲ್ಲ ತಂಡವಾಗಿದೆ ಎಂದೂ ಅದು ತಿಳಿಸಿದೆ

ಚಾಟ್ ಜಿಪಿಟಿ ಕೂಡಾ ತನ್ನ ಭವಿಷ್ಯವಾಣಿಯಲ್ಲಿ ಫ್ರಾನ್ಸ್ ತಂಡವೇ ಟ್ರೋಫಿ ಗೆಲ್ಲುವ ಫೇವರಿಟ್ ಎಂದು ಹೇಳಿದೆ. ಕೈಲಿಯನ್ ಎಂಬಪ್ಪೆ ಮತ್ತು ಔಸ್ಮಾನೆ ಡೆಂಬೆಲೆ ಅವರ ಅದ್ಭುತ ಫಾರ್ಮ್‌ನಿಂದಾಗಿ ಫ್ರಾನ್ಸ್ ಈ ಸಲ ಮುನ್ನಡೆ ಸಾಧಿಸಿ ಪ್ರಶಸ್ತಿಯನ್ನು ಗೆಲ್ಲುತ್ತದೆ ಎಂದು ಅದು ಭವಿಷ್ಯ ನುಡಿದಿದೆ. ಹಿರಿಯ ಕೋಚ್ ಡಿಡಿಯರ್ ಡೆಸ್ಚಾಂಪ್ಸ್ ಅವರ ಅನುಭವವು ಫ್ರಾನ್ಸ್‌ಗೆ ಹೆಚ್ಚು ಅನುಕೂಲಕರವಾಗಿರಲಿದೆ ಎಂದು ಚಾಟ್ ಜಿಪಿಟಿ ತಿಳಿಸಿದೆ.

ಸೂರ್ಯವಂಶಿ ಜತೆ ತೆರಳಲು ಪೋಷಕರಿಗೆ ಬಿಸಿಸಿಐ ಅವಕಾಶ

ದೆಹಲಿ: ಮುಂಬರುವ ಐರ್ಲೆಂಡ್- ಇಂಗ್ಲೆಂಡ್ ಪ್ರವಾಸ ಮತ್ತು ಏಷ್ಯನ್ ಗೇಮ್ಸ್‌ಗೆ ಬಿಸಿಸಿಐ ಪ್ರಕಟಿಸಿದ ಭಾರತ ಟಿ20 ತಂಡದಲ್ಲಿ ಸ್ಥಾನ ಪಡೆ ಯುವ ಮೂಲಕ ವೈಭವ್ ಸೂರ್ವವಂಶಿ ಅತಿ ಕಿರಿಯ ಆಟಗಾರ ಎಂಬ ದಾಖಲೆ ಬರೆದಿದ್ದಾರೆ. ಇದೀಗ ಬಿಸಿಸಿಐ, ಸೂರ್ಯವಂಶಿ ಸಣ್ಣ ವಯಸ್ಸಿನ ಹುಡುಗನಾಗಿರುವುದರಿಂದ ವಿದೇಶ ಪ್ರವಾಸ ವೇಳೆ ಆತನ ತಂದೆ-ತಾಯಿಗೂ ಆತನ ಜತೆಯಲ್ಲಿ ತೆರಳಲು ಅವಕಾಶ ಕಲ್ಪಿಸಿದೆ.

ಈ ಬಗ್ಗೆ ಮಾತನಾಡಿದ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ, ಕ್ರಿಕೆಟ್ ಮಂಡಳಿಯು ಸಾಮಾನ್ಯವಾಗಿ ಆಟಗಾರರೊಂದಿಗೆ ಪ್ರವಾಸಗಳಿಗೆ ಹೋಗಲು ಪೋಷಕರಿಗೆ ಅವಕಾಶ ನೀಡುವುದಿಲ್ಲವಾದರೂ, ಭಾರತವು ವಿಶೇಷ ಪ್ರತಿಭೆಯನ್ನು ರಾಷ್ಟ್ರೀಯ ತಂಡಕ್ಕೆ ತರಲು ಪ್ರಯತ್ನಿಸುತ್ತಿರುವುದರಿಂದ ವೈಭವ್ ಮತ್ತು ಅವರ ಕುಟುಂಬಕ್ಕೆ ಈ ಒಂದು ವಿಶೇಷ ಅನುಮತಿ ನೀಡಲಾಗಿದೆ ಎಂದು ಹೇಳಿದ್ದಾರೆ. 'ಸೂರ್ಯವಂಶಿ ಇನ್ನೂ ಅಪ್ರಾಪ್ತ ವಯಸ್ಕ. ತಂಡದೊಂದಿಗೆ ಪ್ರಯಾಣಿಸುವ ಎಲ್ಲರೂ ವಯಸ್ಕರು, ಆದ್ದರಿಂದ ಅವನ ಪೋಷಕರು ಅಥವಾ ಕುಟುಂಬದ ಯಾರಾದರೂ ಅವನೊಂದಿಗೆ ಶ್ರೀಲಂಕಾಕ್ಕೆ ಮಾತ್ರವಲ್ಲದೆ ಐರ್ಲೆಂಡ್ ಮತ್ತು ಇಂಗ್ಲೆಂಡ್‌ಗೂ ಪ್ರಯಾಣಿಸುವುದು ಸೂಕ್ತವೆಂದು ನಾವು ಭಾವಿಸುತ್ತೇವೆ' ಎಂದು ಸೈಕಿಯಾ ಹೇಳಿದ್ದಾರೆ.

'ಅವನಿಗೆ ಹಿರಿಯರೊಂದಿಗೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ.ಆದ್ದರಿಂದ ಆ ದೃಷ್ಟಿಕೋನದಿಂದ, ನಾವು ರೀತಿಯ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. 15 ವರ್ಷ ವಯಸ್ಸಷ್ಟೇ ಆಗಿರುವುದರಿಂದ, ಅವನು ಆರಾಮವಾಗಿರಬೇಕು ಮತ್ತು ಇತರರ ಜತೆ ಹೊಂದಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳುವುದು ಸಹಜ' ಎಂದು ಬಿಸಿಸಿಐ ಕಾರ್ಯದರ್ಶಿ ಹೇಳಿದ್ದಾರೆ.

ಹೊಸ ಅವತಾರದಲ್ಲಿ ಸಾಯಿ ಪಲ್ಲವಿ

ಬಹುಭಾಷಾ ನಟಿ ಸಾಯಿ ಪಲ್ಲವಿ ಸಾಮಾಜಿಕ ಸಂದೇಶ ಸಾರುವ ಸಿನಿಮಾಗಳಲ್ಲಿ ಹೆಚ್ಚಾಗಿ ನಟಿಸಿ, ಪ್ರೇಕ್ಷಕರ ಮನಗೆದ್ದವರು. ಅವರ ಆಯ್ದುಕೊಳ್ಳುತ್ತಿದ್ದ ಪಾತ್ರಗಳೂ ಅಷ್ಟೇ ಬಹಳ ಸರಳ ಮತ್ತು ಸುಂದರವಾಗಿರುತ್ತಿದ್ದವು. ತಮಗೆ ನೀಡಿ ಪಾತ್ರಗಳಿಗೆ ಜೀವತುಂಬುತ್ತಿದ್ದ ಸಾಯಿ ಪಲ್ಲವಿ ಸಹಜಾಭಿನಯದ ಮೂಲಕವೇ ಮನಸೆಳೆದರು. ವಿರಾಟ ಪರ್ವ, ಶ್ಯಾಮ್ ಸಿಂಗ್ ರಾಯ್ ಸಿನಿಮಾಗಳಲ್ಲಿ ಒಂದಷ್ಟು ವಿಭಿನ್ನ ಪಾತ್ರಗಳಲ್ಲಿ ಕಂಗೊಳಿ ಸಿದರು. ಈಗ ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನ ಗೆಟಪ್‌ನಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಅಮರನ್ ಸಿನಿಮಾ ನಿರ್ದೇಶಿಸಿ ಪ್ರಸಿದ್ಧಿ ಪಡೆದ ರಾಜಕುಮಾರ್ ಪೆರಿಯಸ್ವಾಮಿ ಈಗ ಮತ್ತೊಂದು ಹೊಸ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ಸಾಯಿ ಪಲ್ಲವಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಶೇಷ ಎಂದರೆ ಧನುಷ್ ಈ ಚಿತ್ರದ ನಾಯಕನಾಗಿ ನಟಿಸುತ್ತಿದ್ದು, ಕಳ್ಳನ ಪಾತ್ರದಲ್ಲಿ ಮಿಂಚಲಿದ್ದಾರೆ. ಹಾಗಾಗಿ ಇಲ್ಲಿ ಕಳ್ಳ ಪೊಲೀಸ್ ಕಥೆಯೂ ಇರಲಿದ್ದು, ಅದರ ಜತೆಗೆ ಲವ್, ಕಾಮಿಡಿ, ಎಮೋಷನ್ಸ್, ಸಸ್ಪೆನ್ಸ್ ಹೀಗೆ ಎಲ್ಲಾ ಎಲ್ಲವೂ ಕಥೆಯಲ್ಲಿ ಬೆರೆತಿದೆ. ಈ ಸಿನಿಮಾಗೂ ಮೊದಲು ಸಾಯಿ ಪಲ್ಲವಿ ಹಾಗೂ ಧನುಷ್ ಮಾರಿ ಚಿತ್ರದಲ್ಲಿ ಅಭಿನಯಿಸಿದ್ದರು. ಈ ಚಿತ್ರವೂ ಯಶಸ್ಸು ಪಡೆದಿತ್ತು. ಈಗ ಬಹುದಿನಗಳ ಬಳಿಕ ಇಬ್ಬರು ಮತ್ತೆ ಒಂದೇ ಚಿತ್ರದಲ್ಲಿ ನಟಿಸುತ್ತಿದ್ದು, ಅಭಿಮಾನಿಗಳು ಸಂತಸ ಗೊಂಡಿದ್ದಾರೆ. ಇನ್ನು ಬಾಲಿವುಡ್ ಅಂಗಳಕ್ಕೂ ಕಾಲಿಟ್ಟಿರುವ ಸಾಯಿ ಪಲ್ಲವಿ, ಅದ್ದೂರಿಯಾಗಿ ಮೂಡಿಬರುತ್ತಿರುವ ರಾಮಾ ಯಣ ಸಿನಿಮಾದಲ್ಲಿ ನಟಿಸುತ್ತಿದ್ದು, ಸೀತೆಯ ಪಾತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ರಾಮಾಯಾಣ ಎರಡು ಭಾಗಗಳಲ್ಲಿ ನಿರ್ಮಾಣವಾಗುತ್ತಿದ್ದು, ಮೊದಲ ಭಾಗ ಈ ಬಾರಿಯ ದೀಪಾವಳಿಗೆ ವಿಶ್ವಾದ್ಯಂತ ತೆರೆಗೆ ಬರಲಿದೆ.

ಕಾಮನ್‌ಮ್ಯಾನ್‌ನ ರೋಚಕ ಕಥೆ

ಸಾಮಾನ್ಯ ವ್ಯಕ್ತಿಯ ಅಸಾಮಾನ್ಯ ಸಾಧನೆಯ ಕಥೆಯನ್ನು ಹೊತ್ತುಬರುತ್ತಿರುವ ಕಾಮನ್‌ಮ್ಯಾನ್ ಸಿನಿಮಾದ ಮೋಷನ್ ಪೋಸ್ಟರ್ ರಿಲೀಸ್ ಆಗಿದೆ. ಎನ್.ನರಸಿಂಹಮೂರ್ತಿ ಕಥೆ ಬರೆದು ಸುರಭಿ ಫಿಲಂಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಹಿರಿಯ ನಿರ್ದೇಶಕ ಓಂ ಸಾಯಿಪ್ರಕಾಶ್ ಅವರು ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಗೌರಿಶಂಕರ್ ಚಿತ್ರದ ನಾಯಕನಾಗಿ ನಟಿಸಿದ್ದಾರೆ.

ರಂಗಭೂಮಿ ಹಿನ್ನೆಲೆಯಿಂದ ಬಂದ ನಾನು ಹಲವು ಬೀದಿ ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಇದು ನನ್ನ ನಿರ್ಮಾಣದ ಮೂರನೇ ಚಿತ್ರ. ಮೊದಲು ನಮ್ಮ ಚಿತ್ರಕ್ಕೆ ನಾನೇ ಸಿಎಂ ಎಂಬ ಶೀರ್ಷಿಕೆ ಅಂದುಕೊಂಡಿದ್ದೆವು. ನಂತರ ಕಾಮನ್‌ಮ್ಯಾನ್ ಅಂತ ಬದಲಾಯಿಸಿದೆವು. ಶಾಸಕನಾಗಬೇಕಾದರೆ ಚುನಾವಣೆ ನಡೆಯಬೇಕು. ಚಿತ್ರದ ನಾಯಕ ಚುನಾವಣೆ ಇಲ್ಲದೆ ಸರಕಾರದ ಮೇಲೆ ಒತ್ತಡ ತಂದು ಹೇಗೆ ಸಿಎಂ ಆಗುತ್ತಾನೆ ಎನ್ನುವುದೇ ಚಿತ್ರದ ಕಥೆ.

ಸಾಯಿಪ್ರಕಾಶ್ ಅವರು ಅದ್ಭುತವಾಗಿ ಸಿನಿಮಾ ನಿರ್ದೇಶನ ಮಾಡಿದ್ದಾರೆ ಎಂದು ನಿರ್ಮಾಪಕ ನರಸಿಂಹಮೂರ್ತಿ ಹೇಳಿದರು.

ಇದು ನಾನು ನಿರ್ದೇಶನ ಮಾಡಿರುವ 106ನೇ ಚಿತ್ರ. ಒಬ್ಬ ಕಾಮನ್‌ಮ್ಯಾನ್ ರಾಜ್ಯದ ಸಿಎಂ ಆದರೆ ಏನು ಮಾಡಬಹುದು ಎಂದು ನಮ್ಮ ಚಿತ್ರದಲ್ಲಿ ತೋರಿಸಿದ್ದೇವೆ. ನಾಯಕ ಒಬ್ಬ ಲಾಯರ್, ಆತ ಅನಿರೀಕ್ಷಿತವಾಗಿ ರಾಜ್ಯದ ಸಿಎಂ ಆಗಿ ಏನೇನು ಸುಧಾರಣೆ ಮಾಡಬಹುದು, ಅದು ಸಾಧ್ಯವಾಯಿತ ಎಂಬುದನ್ನು ಕುತೂಹಲಕರವಾಗಿ ಹೇಳುವ ಪ್ರಯತ್ನ ಮಾಡಿದ್ದೇನೆ. ಜೀವನದಲ್ಲಿ ಪ್ರತಿಯೊಬ್ಬರಿಗೂ ಒಂದು ಅವಕಾಶ ಬರುತ್ತದೆ. ಹಾಗೆಯೇ ನಾಯಕನಿಗೂ ಅವಕಾಶ ಅರಸಿ ಬಂದಾಗ ಅದನ್ನಾತ ಹೇಗೆ ಸದುಪಯೋಗಪಡಿಸಿಕೊಳ್ಳುತ್ತಾನೆ ಎನ್ನುವುದೆ ಸಿನಿಮಾದ ಕಥಾಹಂದರ ಎಂದು ನಿರ್ದೇಶಕ ಓಂ ಸಾಯಿಪ್ರಕಾಶ್ ಹೇಳಿದರು.

ಕೆರೆಬೇಟೆ ನಂತರ ಒಳ್ಳೆಯ ಕಥೆಗಾಗಿ ಕಾಯುತ್ತಿದ್ದೆ, ಆಗ ಈ ಕಥೆ ಸಿಕ್ಕಿತು. ಬಯಸಿದಂಥ ಪಾತ್ರವೇ ಹುಡುಕಿಕೊಂಡು ಬಂದಿತ್ತು. ಆಗಸ್ಟ್‌ನಲ್ಲಿ ಕಾಮನ್ ಮ್ಯಾನ್ ತೆರೆಗೆ ಬರಲಿದೆ ಎಂದು ನಟ ಗೌರಿಶಂಕರ್ ತಿಳಿಸಿದರು. ಸೋನಾ ಲದ್ವಾ ನಾಯಕಿಯಾಗಿ ನಟಿಸಿದ್ದು, ಹಿರಿಯ ನಟ ಅಶೋಕ್ ರಾಜ್ಯಪಾಲರಾಗಿ ಕಾಣಿಸಿಕೊಂಡಿದ್ದಾರೆ. ನಿರ್ಮಾಪಕ ನರಸಿಂಹ ಮೂರ್ತಿ ಕೂಡ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಉಳಿದಂತೆ ಗಣೇಶರಾವ್ ಕೇಸರಕರ್, ಶ್ರೀನಿವಾಸ್, ಪ್ರಕಾಶ್ ತುಮ್ಮಿನಾಡು ಮುಂತಾದವರು ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ವಿನಯ್‌ಚಂದ್ರ ಸಂಗೀತ ಸಂಯೋಜಿಸಿದ್ದಾರೆ. ಚೈತ್ರಾ ಆಚಾರ್, ಕೈಲಾಶ್ ಖೇರ್, ಬಾಬಾ ಸೈಗಲ್ ಹಾಡಿಗೆ ದನಿಯಾಗಿದ್ದಾರೆ. ಜೆ.ಜಿ.ಕೃಷ್ಣ, ದೀಪಕ್ ಕುಮಾರ್ ಛಾಯಾಗ್ರಹಣ, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಕರಾವಳಿ ಸೊಗಡಿನ ಕ್ಷೇತ್ರಪಾಲ

ಕರ್ನಾಟಕದ ಕರಾವಳಿಯ ಸೊಗಡನ್ನು ಒಳಗೊಂಡ ಹಲವ, ಸಿನಿಮಾಗಳು ತೆರೆಗೆ ಬಂದಿವೆ. ಯಶಸ್ವಿಯಾಗಿವೆ. ಈಗ ಕರಾವಳಿ ಸೊಗಡಿನ ಮತ್ತೊಂದು ಚಿತ್ರ ಸೆಟ್ಟೇರಿದ್ದು ಭರದಿಂದ ಚಿತ್ರೀಕರಣ ನಡೆಯುತ್ತಿದೆ. ಕ್ಷೇತ್ರಪಾಲ ಶೀರ್ಷಿಕೆಯಲ್ಲಿ ಸಿನಿಮಾ ತೆರೆಗೆ ಬರಲಿದೆ.

ಕರಾವಳಿಯ ಪ್ರತೀತಿಯಂತೆ, ಪ್ರತಿ ಕ್ಷೇತ್ರದಲ್ಲೂ ಆ ಕ್ಷೇತ್ರದ ರಕ್ಷಣೆಗೆ ಕ್ಷೇತ್ರಪಾಲನಾಗಿ ದೈವವೊಂದು ಇರುತ್ತದೆ. ಆಯಾಯ ಕ್ಷೇತ್ರದಲ್ಲಿ ನ್ಯಾಯ, ನೀತಿ, ಧರ್ಮವನ್ನು ಪಾಲನೆ , ಪೋಷಣೆ ಮಾಡಿ ಜನರನ್ನು ಕ್ಷೇತ್ರಪಾಲ ಕಾಪಾಡುತ್ತಾನೆ ಎಂಬುದು ಕರಾವಳಿ ಜನರ ಬಲವಾದ ನಂಬಿಕೆ. ಅಂಥದ್ದೇ ಒಂದು ನಂಬಿಕೆಯ ಕಥೆಯನ್ನು ಇಟ್ಟುಕೊಂಡು ಕ್ಷೇತ್ರಪಾಲ ಸಿದ್ಧವಾಗುತ್ತಿದೆ.

ಧಾರ್ಮಿಕ ಹಿನ್ನೆಲೆಯಲ್ಲಿ ಊರನ್ನು ರಕ್ಷಣೆ ಮಾಡುವ ವ್ಯಕ್ತಿಯೊಬ್ಬನ ಕಥೆ ಈ ಸಿನಿಮಾದಲ್ಲಿ ಇರಲಿದೆಯಂತೆ. ನ್ಯಾಯ, ನೀತಿ, ಧರ್ಮ, ನಂಬಿಕೆ, ಜೀವನ, ಹೋರಾಟ ಎಲ್ಲವೂ ಕ್ಷೇತ್ರಪಾಲ ಸಿನಿಮಾದಲ್ಲಿ ಕಾಣಬಹುದಾಗಿದೆ.

ಚಿತ್ರದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ, ಚಿತ್ರದ ಶೀರ್ಷಿಕೆ ಮತ್ತು ಮೋಶನ್ ಪೋಸ್ಟರ್ ಅನ್ನು ಬಿಡುಗಡೆ ಮಾಡಿದೆ. ಜಗದೀಶ್ ಮಂಜಣ್ಣ ಕ್ಷೇತ್ರಪಾಲ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಕನ್ನಡದಲ್ಲಿ ಈಗಾಗಲೇ ಕೆಲ ಸಿನಿಮಾಗಳಲ್ಲಿ ಸಹ ನಟನಾಗಿ ಕಾಣಿಸಿಕೊಂಡಿರುವ ರಾಘವ ಪೂಜಾರಿ ಕ್ಷೇತ್ರಪಾಲ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕ ನಟನಾಗಿ ಬೆಳ್ಳಿತೆರೆಗೆ ಪರಿಚಯವಾಗುತ್ತಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ಸುಚೇಂದ್ರ ಪ್ರಸಾದ್, ಅದ್ವಿಕಾ ಶೆಟ್ಟಿ, ರಾಘು ರಾಮನಕೊಪ್ಪ, ಗೌತಮಿ ಗೌಡ, ನಮಿತಾ ಕಿರಣ್ ಮುಂತಾದವರು ತಾರಾಗಣದಲ್ಲಿದ್ದಾರೆ.

> ಇದು ಕರಾವಳಿ ಸೊಗಡಿನ ಕಥೆಯ ಸಿನಿಮಾ. ಸಾಹಸ ಪ್ರಧಾನ ಕಥೆಯ ಜತೆಗೆ ಸಸ್ಪೆನ್ಸ್, ಥ್ರಿಲ್ಲರ್ ಹೀಗೆ ಎಲ್ಲಾ ಅಂಶಗಳು ಚಿತ್ರದಲ್ಲಿ ಬೆರೆತಿವೆ. ಎರಡು ಎಳೆಯಲ್ಲಿ ಈ ಸಿನಿಮಾದ ಕಥೆ ಸಾಗುತ್ತದೆ. ಕರಾವಳಿಯ ಸಂಪ್ರದಾಯ, ಸೌಂದರ್ಯದ ಜತೆಗೆ ಊಹಿಸಲಾಗದ ರೋಚಕ ಅಂಶಗಳು ಈ ಸಿನಿಮಾದಲ್ಲಿದೆ.
> -ಜಗದೀಶ್ ಮಂಜಣ್ಣ ನಿರ್ದೇಶಕ

ಈಗಾಗಲೇ ಕನ್ನಡದ ಕೆಲವು ಸಿನಿಮಾಗಳಲ್ಲಿ ಅಭಿನಯಿಸಿದ್ದೇನೆ. ಈಗ ಕರಾವಳಿಯ ಕಥೆಯೊಂದರ ಮೂಲಕ ಪ್ರೇಕ್ಷಕರ ಮುಂದೆ ಬರುತ್ತಿದ್ದೇವೆ. ನಮ್ಮ ಊರಿನ ಕಥೆಯೊಂದನ್ನು ಈ ಸಿನಿಮಾದ ಮೂಲಕ ಪ್ರೇಕ್ಷಕರ ಮುಂದೆ ತರಲು ಸಂತಸವಾಗುತ್ತಿದೆ. ಇದರಲ್ಲಿ ನಮ್ಮ ಆಚರಣೆ, ಸಂಸ್ಕೃತಿಯ ಜತೆಗೆ ಒಂದು ಸಂದೇಶ ಕೂಡ ಇದೆ ಎಂದು ರಾಘವ್ ಪೂಜಾರಿ ಹೇಳಿದರು. ಮುತ್ತಮ್ಮ ಪ್ರೊಡಕ್ಷನ್ಸ್ ಬ್ಯಾನರಿನಲ್ಲಿ ನಿರ್ಮಾಣವಾಗುತ್ತಿರುವ ಕ್ಷೇತ್ರಪಾಲ ಚಿತ್ರಕ್ಕೆ ಕೆ. ನವೀನ್ ಸುವರ್ಣ ಛಾಯಾಗ್ರಣ, ಗಿರೀಶ್ ಕುಮಾರ್ ಸಂಕಲನವಿದೆ. ಚಿತ್ರದ ಹಾಡುಗಳಿಗೆ ಯತೀಶ್ ರಾಜ್ ಸಂಗೀತ ಸಂಯೋಜಿಸುತ್ತಿದ್ದಾರೆ.

ಉಡುಪಿ, ಕುಂದಾಪುರ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗುತ್ತಿದೆ. ಈಗಾಗಲೇ ಹತ್ತು ದಿನಗಳ ಕಾಲ ಕ್ಷೇತ್ರಪಾಲ ಚಿತ್ರದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ, ಜುಲೈನಲ್ಲಿ ಎರಡನೇ ಹಂತದ ಶೂಟಿಂಗ್ ನಡೆಸಲು ಯೋಜನೆ ಹಾಕಿಕೊಂಡಿದೆ.

ಟೀಸರ್‌ನಲ್ಲಿ ಮೋಡಿ ಮಾಡಿದ ನೀ ನಂಗೆ ಅಲ್ಲವಾ

ಮನೋಜ್ ಪಿ. ನಡಲುಮನೆ ನಿರ್ದೇಶನದ 'ನೀ ನಂಗ ಅಲ್ಲವಾ...' ಚಿತ್ರದ ಟೀಸರ್ ರಿಲೀಸ್ ಆಗಿದೆ. ನಿರ್ದೇಶಕ ಪವನ್ ಒಡೆಯರ್ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸಿನಿಮಾದ ಶೀರ್ಷಿಕೆಯೇ ಹೇಳುವಂತೆ ಇದು ನವಿರಾದ ಪ್ರೇಮಕಥೆ ಯನ್ನು ಒಳಗೊಂಡಿದೆ ಎಂಬುದು ಟೀಸರ್‌ನಲ್ಲಿ ತಿಳಿಯುತ್ತದೆ. ರಾಹುಲ್ ಅರ್ಕಟ್ ನಾಯಕನಾಗಿ ನಟಿಸಿದ್ದು, ಕಾಶಿಮಾ ನಾಯಕಿಯಾಗಿ ಅಭಿನಯಿಸಿದ್ದಾರೆ.

ಆನ ಚಿತ್ರದ ಮೂಲಕ ನನ್ನ ಸಿನಿಮಾ ಯಾನ ಶುರುವಾಯಿತು. ಇದು ನನ್ನ ನಿರ್ದೇಶನದ ಮೂರನೇ ಚಿತ್ರ. ಇದೊಂದು ಪ್ರೇಮಕಥೆಯ ಸಿನಿಮಾ. ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಈ ಚಿತ್ರದಲ್ಲಿದೆ. ನಿರ್ಮಾಪಕರು ಯಾವುದೇ ಕೊರತೆ ಬಾರದ ಹಾಗೆ ಚಿತ್ರ ನಿರ್ಮಾಣ ಮಾಡಿದ್ದಾರೆ ಎಂದು ನಿರ್ದೇಶಕ ಮನೋಜ್ ಪಿ. ನಡಲುಮನೆ ತಿಳಿಸಿದರು.

ನಿರ್ದೇಶಕರು ಹೇಳಿದ ಈ ಚಿತ್ರದ ಕಥೆ ಬಹಳ ಇಷ್ಟವಾಯಿತು. ಜನರಿಗೂ ನಮ್ಮ ಚಿತ್ರ ಇಷ್ಟವಾಗುವ ಭರವಸೆ ಇದೆ. ಮನೆ ಮಂದಿಯೆಲ್ಲಾ ಕುಳಿತು ನೋಡುವ ಸದಭಿರುಚಿಯ ಸಿನಿಮಾ ಇದಾಗಿದೆ ಎಂದು ನಿರ್ಮಾಪಕ ಜಯರಾಮ್ ದೇವಸಮುದ್ರ ಹೇಳಿದರು.

ಈ ಸಿನಿಮಾದ ಕಥೆ ಹಾಗೂ ಪಾತ್ರ ಎರಡೂ ಚೆನ್ನಾಗಿದೆ. ನಾನು ಲಕ್ಕಿ ಎಂಬ ಪಾತ್ರದಲ್ಲಿ ನಟಿಸಿದ್ದೇನೆ ಎಂದು ರಾಹುಲ್ ತಮ್ಮ ಪಾತ್ರದ ಬಗ್ಗೆ ತಿಳಿಸಿದರು.

ಕಾಶಿಮಾ, ಖುಷಿ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದು, ಗ್ಲಾಮರ್ ಲುಕ್ ನಲ್ಲಿ ಕಂಗೊಳಿಸಿದ್ದಾರೆ. ನನ್ನ ಪಾತ್ರಕ್ಕೆ ಬಹಳ ಮಹತ್ವವಿದೆ. ಇದು ಎಲ್ಲರನ್ನೂ ಕಾಡುವ, ಸೆಳೆಯುವ ಪಾತ್ರವಾಗಿದೆ ಎಂದು ಕಾಶಿಮಾ ಸಂಸತದಿಂದ ನುಡಿದರು.

ಸೂರಜ್ ಜೋಯಿಸ್ ಸಂಗೀತ ನಿರ್ದೇಶನ, ಉದಯಲೀಲಾ ಛಾಯಾಗ್ರಹಣ, ನಾಗೇಂದ್ರ ಉಜ್ಜನಿ ಸಂಕಲನ ಈ ಚಿತ್ರಕ್ಕಿದೆ. ಸುರಮ್ ಮೂವೀಸ್ ಲಾಂಛನದಲ್ಲಿ ಜಯರಾಮ ದೇವಸಮುದ್ರ, ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಬೆಂಗಳೂರು, ಮಂಗಳೂರು, ಉಡುಪಿಯಲ್ಲಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ನೀ ನಂಗೆ ಅಲ್ಲವಾ.. ಆಗಸ್ಟ್‌ನಲ್ಲಿ ತೆರೆಗೆ ಬರಲಿದೆ.